ಮರೆಯಬಾರದ

ತುಳುವರು – ೧

ನರ್ಕಳ ಮಾರಪ್ಪ ಶೆಟ್ಟಿ

ಎನ್. ರಘುನಾಥ ಶೆಟ್ಟಿ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

ನರ್ಕಳ ಮಾರಪ್ಪ ಶೆಟ್ಟಿ

ಎನ್. ರಘುನಾಥ ಶೆಟ್ಟಿ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
ಮಂಗಳೂರು ಮಹಾನಗರ ಪಾಲಿಕಾ ಕಟ್ಟಡ
ಲಾಲ್‌ಭಾಗ್, ಮಂಗಳೂರು - 575 003

NARKALA MARAPPA SHETTY
(Life and Works of N. Marappa Shetty)

Written by : N. R. Shetty
No. 2, 'Amulya Apts.', 6th Cross
Off. Dinnur Main Road., R. T. Nagar,
Bangalore - 560 032. Tel.: 080-3330287

Published by: Karnataka Tulu Sahitya Academy
Corporation Building, Lalbagh
Mangalore - 575 003. Tel.: 459389

Price	:	**Rs. 15**
Pages	:	56
Copies	:	1000
First Impression	:	2002
Chief Editor	:	**Dr. Vamana Nandavara** President Karnataka Tulu Sahitya Academy
Publisher	:	**S. H. Shivarudrappa** Registrar Karnataka Tulu Sahitya Academy
Copyright	:	Karnataka Tulu Sahitya Academy
D.T.P. and Printed at	:	**Sharada Press** Car Street, Mangalore - 575 001 Phone: 494059, 494350



ದಿ। ನರ್ಕಳ ಮಾರಪ್ಪ ಶೆಟ್ಟಿ

ಮರೆಯಬಾರದ ತುಳುವರು
ಪುಸ್ತಕ ಮಾಲೆಯ ಮೊದಲ ಕುಡಿ

ತುಳುನಾಡು, ತುಳುಭಾಷೆ, ಸಾಹಿತ್ಯ ಸಂಸ್ಕೃತಿ ಮತ್ತು ತುಳುವರ ಏಳಿಗೆಗಾಗಿ ತಮ್ಮ ಸರ್ವಸ್ವವನ್ನೂ ಮುಡಿಪಿಟ್ಟು ಬಹಳಷ್ಟು ಹೆಣಗಾಡಿರುವ ನಮ್ಮ ಹಿರಿಯರ ಸಾಧನೆಗಳನ್ನು, ಅವರು ತುಳುವಿಗಾಗಿ ಸಲ್ಲಿಸಿದ ಸೇವಾ ಕಾಣಿಕೆಗಳನ್ನು ಎಲ್ಲರಿಗೂ ತೋರಿಸಿ ತಿಳಿಸಿಕೊಡುವ ಉದ್ದೇಶದಿಂದ 'ಮರೆಯಬಾರದ ತುಳುವರು' ಪುಸ್ತಕ ಮಾಲೆಯನ್ನು ಕರ್ನಾಟಕ ತುಳುಸಾಹಿತ್ಯ ಅಕಾಡೆಮಿ ನಿಮ್ಮ ಮಡಿಲಿಗೆ ಹಾಕುತ್ತಿದೆ.

ತುಳುವಿಗಾಗಿ ಅನನ್ಯ ಸಾಧನೆಗೈದು ನಿನ್ನೆಗೆ ಸಂದಿರುವ ಹಿರಿಯರಿಗೆ ಈ ನೆಲದ ಭಾಷೆ ಸಂಸ್ಕೃತಿಯ ಮೇಲೆ ಇದ್ದ ಪ್ರೀತಿ ಅಭಿಮಾನ ಗೌರವ ಭಾವವನ್ನು ಈ ಮಾಲೆಯ ಪುಸ್ತಕಗಳು ತಿಳಿಸಿಕೊಡುತ್ತವೆ. ನಾಳೆಯ ತುಳುವಿನ ಬೆಳವಣಿಗೆಗಾಗಿ ಇಂದು ನಾವು ಏನೇನು ಕಾರ್ಯ ಚಟುವಟಿಕೆಗಳನ್ನು ಯೋಚಿಸಿ ಯೋಜಿಸಿ ಮುಂದೆ ಸಾಗಬಹುದು ಎನ್ನುವುದಕ್ಕೆ ಈ ಮಹನೀಯರ ಬದುಕು ಮತ್ತು ಸಾಧನೆಗಳು ನಮಗೆ ಪ್ರೇರಣೆ ಮತ್ತು ಚೈತನ್ಯ ನೀಡುತ್ತವೆ.

ಕಳೆದ ಶತಮಾನದ ಮೊದಲ ದಶಕಗಳಲ್ಲಿ ನಡೆದ ಪಣಿಯಾಡಿ ಶ್ರೀನಿವಾಸ ಉಪಾಧ್ಯರ ತುಳು ಚಳುವಳಿಯ ಕಾಲದಲ್ಲಿ ತುಳುವಿನಲ್ಲಿ ಹಲವು ತುಳು ಪುಸ್ತಕಗಳು ಪ್ರಕಟಗೊಂಡವು. 1928ರಲ್ಲಿ ಪ್ರಾರಂಭಗೊಂಡ ತುಳುವ ಸಾಹಿತ್ಯ ಮಾಲೆಯಲ್ಲಿ 11 ಕೃತಿಗಳು ಪ್ರಕಟವಾಗಿವೆ. ಅದೇ

ಕಾಲಕ್ಕೆ ಈ ಚಳುವಳಿಯಿಂದ ಸ್ಫೂರ್ತಿ ಪಡೆದುಕೊಂಡ ನರ್ಕಳ ಮಾರಪ್ಪ ಶೆಟ್ಟರು 1929ರಲ್ಲಿ 'ಅಮಲ್ ದೆಪ್ಪಡೆ' ಎನ್ನುವ ಕಿರು ಕವನ ಸಂಕಲನವನ್ನು ಪ್ರಕಟಗೊಳಿಸಿದರು. ಮುಂದಿನ ವರ್ಷವೇ 1930ರಲ್ಲಿ 'ಪೊರ್ಲಕಂಟ್' ಎನ್ನುವ ಇನ್ನೊಂದು ಕವನ ಸಂಕಲನ ಹೊರತಂದರು.

ನಮ್ಮ ದೇಶದ ಸ್ವಾತಂತ್ರ್ಯ ಚಳುವಳಿಯ ಕಾಲವೂ ಅದಾಗಿತ್ತು. ಗಾಂಧೀಜಿಯ ಅನೇಕ ತತ್ವಗಳು ಮಾರಪ್ಪ ಶೆಟ್ಟರ ಮೇಲೆ ಗಾಢ ಪ್ರಭಾವ ಬೀರಿದ್ದುವು. ಅನೇಕ ಮಹನೀಯರು ಹಾಗೂ ಗಣ್ಯರು ಕೂಡ ಶೆಟ್ಟರ ಮೇಲೆ ಪ್ರಭಾವ ಬೀರಿದ್ದಾರೆ. ಹೀಗೆ ಗಾಂಧೀ ತತ್ವದ ವಿಚಾರಧಾರೆಗಳನ್ನು ಪ್ರಚಾರಗೊಳಿಸುವ ಉದ್ದೇಶದಿಂದ ತುಳು ಭಾಷೆಯಲ್ಲಿ ಅಂತಹ ಸಾಹಿತ್ಯವನ್ನು ಬರೆದವರು ಮಾರಪ್ಪ ಶೆಟ್ಟರು.

ಈ ನೆಲೆಯಿಂದ ನೋಡಿದಾಗ ಅವರ ಎರಡು ಕವನ ಸಂಕಲನಗಳಲ್ಲಿರುವ ಹಾಡುಗಳು ಗಾಂಧೀಜಿಯ ಪಾನನಿಷೇಧ ಚಳುವಳಿಯನ್ನು ಪ್ರಚಾರಗೊಳಿಸುವ ಸಾಹಿತ್ಯವಾಗಿ ಮಹತ್ವ ಪಡೆದಿದ್ದುವು.

ನರ್ಕಳ ಮಾರಪ್ಪ ಶೆಟ್ಟರು ತುಳುವಿನಲ್ಲಿ ಸಾಹಿತ್ಯ ಸೃಷ್ಟಿ ಮಾಡಿರುವ ಹಾಗೆ ಕನ್ನಡದಲ್ಲೂ ಅಂತಹ ಸಾಹಿತ್ಯಕಾಯಕ ನಡೆಸಿದ್ದುಂಟು. ಅವರ 'ಮಂಜಟ್ಟಿ ಕೋಣ', 'ಕರಿ-ಬಿಳಿ ಕಾಳಗ', ಆಧುನಿಕ ಯಕ್ಷಗಾನ ಪ್ರಸಂಗ 'ದಂಡಯಾತ್ರೆ', ಬಾಲಸಾಹಿತ್ಯವಾಗಿ 'ಸುಂದರಿಯ ಚಂದ', 'ಒಂದು ಕತೆ ಹೇಳುತ್ತೇನೆ', ರಾಷ್ಟ್ರಪ್ರೇಮದ ಸಾಹಿತ್ಯವಾಗಿ 'ಭಾರತೀಯರೇ ಒಂದಾಗಿ', 'ಕಾಸರಗೋಡಿನ ಕನ್ನಡಿಗರ ಗೋಳಿನ ಕಥೆ', ಸಂಶೋಧನೆಯಾಗಿ 'ಸ್ಥಳನಾಮಗಳು', 'ತುಳುನಾಡು', ಹವ್ಯಕ ಕನ್ನಡದಲ್ಲಿ ಬರೆದ 'ಕೂಪಕ್ಕನ ಮದುವೆ', ಶಿಕ್ಷಕರಾಗಿ ಅವರು ಕಲಿಸುತ್ತಿದ್ದ ರೀತಿ, ವಯಸ್ಕರ ಶಿಕ್ಷಣಕ್ಕಾಗಿ ಅವರು ನೀಡಿದ ಸೇವೆ, ಅವರ ಕೌಟುಂಬಿಕ ವಿವರ ಮೊದಲಾದ ಬದುಕು ಸಾಧನೆಗಳ ವಿಚಾರವಾಗಿ ಮಾರಪ್ಪ ಶೆಟ್ಟಿಯವರ ಮಗ ಶ್ರೀ ನರ್ಕಳ ರಘುನಾಥ ಶೆಟ್ಟಿ, ಕರ್ನಾಟಕ ತುಳುಸಾಹಿತ್ಯ ಅಕಾಡೆಮಿಗಾಗಿ ಅತ್ಯಂತ ಮಹತ್ವದ ಈ ಕೃತಿಯನ್ನು ಬರೆದು ಕೊಟ್ಟಿದ್ದಾರೆ. ಇದರ ತುಳು ಆವೃತ್ತಿ ಈಗಾಗಲೇ 'ಮದಪ್ಪಿಯರಾವೆಂದಿ ತುಳುವೆರ್' ಮಾಲೆಯಲ್ಲಿ ಪ್ರಕಟವಾಗಿದೆ. ಇದೀಗ 'ಮರೆಯಬಾರದ ತುಳುವರು ಮಾಲೆ'ಯ ಮೊದಲ ಕುಡಿಯಾಗಿ ಇದು ಪ್ರಕಟವಾಗುತ್ತಿದೆ.

ಈ ಕೃತಿಯನ್ನು ಬರೆದುಕೊಟ್ಟ ಶ್ರೀ ರಘುನಾಥ ಶೆಟ್ಟಿ ನರ್ಕಳ ಅವರಿಗೆ ಕರ್ನಾಟಕ ತುಳುಸಾಹಿತ್ಯ ಅಕಾಡೆಮಿ ಋಣಿಯಾಗಿದೆ. ಈ ಕೃತಿಯನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟಿರುವ ಶಾರದಾ ಪ್ರೆಸ್ ಮತ್ತು ತುಳು ಅಕಾಡೆಮಿಯ ಪ್ರಕಟಣೆಗಳನ್ನು ಅಭಿಮಾನದಿಂದ ಕೊಂಡು ಓದಿ ಪ್ರೋತ್ಸಾಹಿಸುತ್ತಿರುವ ತಮಗೆಲ್ಲರಿಗೂ ಹಾರ್ದಿಕವಾದ ಕೃತಜ್ಞತೆಗಳು

ಮಂಗಳೂರು
24 ಜನವರಿ 2002

ಡಾ. ವಾಮನ ನಂದಾವರ
ಅಧ್ಯಕ್ಷ

ಎರಡು ಮಾತು

ನನ್ನ ತಂದೆಯವರು ತುಳು, ಕನ್ನಡ ಸಾಹಿತ್ಯ ಸೇವೆ, ಶ್ರೀ ಪಂಜೆ ಮಂಗೇಶರಾಯರ ಅಡಿದಾವರೆಯಲ್ಲಿ ಆಪ್ತ ಶಿಷ್ಯನಾಗಿ ತರಬೇತಿ ಪಡೆದು, ತನ್ನ ಶಿಷ್ಯರಿಂದಲೂ ಪ್ರಶಂಸಿಸಲ್ಪಟ್ಟ ಉತ್ತಮ ಅಧ್ಯಾಪಕರಾಗಿ ಶಿಕ್ಷಣ ಕ್ಷೇತ್ರದಲ್ಲಿ ಮಾಡಿದ ಸೇವೆ, ಸಾಮಾಜಿಕ ಹಾಗೂ ಗಾಂಧೀ ತತ್ವಾಧರಿತ ರಾಜಕೀಯ ಸೇವೆ, ಮಕ್ಕಳಾದ ನಮ್ಮನ್ನು ತಮ್ಮ ವ್ಯಕ್ತಿತ್ವವನ್ನೇ ಪಣವನ್ನಾಗಿಸಿ ವಿದ್ಯಾವಂತರನ್ನಾಗಿಸಿ, ನಮ್ಮ ಹೆತ್ತಮ್ಮನ ಶ್ರೀರಕ್ಷೆಯೊಂದಿಗೆ ನಮ್ಮ ಜೀವನವನ್ನು ರೂಪಿಸಿ ಬೆಳಗಿಸಿದ ಅವರ ಬಹುಮುಖ ವ್ಯಕ್ತಿತ್ವದ ಜೀವನ ಸಾರವನ್ನು, ಅಗಲಿಹೋದ ಅವರ ಆತ್ಮಶಾಂತಿಗೆ ಪ್ರಾರ್ಥನಾ ರೂಪವಾಗಿ ಸವಿವರವಾದ ಒಂದು ಪುಸ್ತಕವನ್ನು ಪ್ರಕಟಿಸಬೇಕೆಂಬ ನನ್ನ ಹೃದಯದಲ್ಲಿ ಹುದುಗಿದ್ದ ನನ್ನ ಆಶೆಯ ಕುಡಿಯನ್ನು ಚಿಗುರುವಂತೆ ಮಾಡಿದ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯನ್ನು ಎಂದೆಂದಿಗೂ ಮರೆಯಲಾರೆ.

ನನ್ನ ತಂದೆಯವರ ಜೀವನ ಸಾಧನೆಗಳ ಕುರಿತು ಸಂಕ್ಷಿಪ್ತವಾದ ಲೇಖನವನ್ನು ಆದಷ್ಟು ಬೇಗನೇ ಬರೆದು ಕಳುಹಿಸಬೇಕೆಂದು ಅಕಾಡೆಮಿಯ ಅಧ್ಯಕ್ಷರಾಗಿದ್ದ ಪ್ರೊ. ಡಾ. ಬಿ. ಎ. ವಿವೇಕ ರೈಯವರು ವಿನಂತಿಸಿಕೊಂಡಾಗ ನಾನು ದೂರದ ಆಸ್ಟ್ರೇಲಿಯಾದಲ್ಲಿ ನನ್ನ ಮಗಳು ಹಾಗೂ ಮೊಮಕ್ಕಳೊಂದಿಗೆ ದಿನಗಳೆಯುತ್ತಿದ್ದುದರಿಂದ ಅಲ್ಲಿಂದಲೇ ಪ್ರಯತ್ನ ಮಾಡಿ ಬರೆದು ಕಳುಹಿಸಿದೆ.

ಈ ಕಿರು ಕೃತಿ ನನ್ನ ತಂದೆಯವರ ಕುರಿತು ಸವಿವರವಾದ ಗ್ರಂಥವನ್ನು ಬರೆಯಲು ಸ್ಫೂರ್ತಿ ಕೊಡಲೆಂದು ಕಣ್ಮರೆಯಾದ ತಂದೆಯಯವರ ಆಶೀರ್ವಾದವನ್ನು ಬೇಡಿಕೊಂಡು ಶ್ರೀ ಪರಮಾತ್ಮನನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಗೆ ನನ್ನ ಅನಂತಾನಂತ ವಂದನೆಗಳನ್ನೂ ಕೃತಜ್ಞತೆಗಳನ್ನೂ ಅರ್ಪಿಸುತ್ತೇನೆ.

ನರ್ಕಳ ರಘುನಾಥ ಶೆಟ್ಟಿ

ನರ್ಕಳ ಮಾರಪ್ಪ ಶೆಟ್ಟಿ

ಆನುವಂಶಿಕತೆ ಹಾಗೂ ಪರಿಸರ ಪ್ರಭಾವದಿಂದ ಮಾನವ ವ್ಯಕ್ತಿತ್ವವು ಸಾವಿರಾರು ವರ್ಷಗಳಿಂದ ವಿಕಾಸವಾಗುತ್ತಾ ಬಂದಿದೆ. ಅಕ್ಷರಲಿಪಿ, ಓದುಬರಹಗಳ ಆವಿಷ್ಕಾರವಾಗುವ ಮೊದಲೇ, ಎಷ್ಟೋ ವರ್ಷಗಳ ಹಿಂದೆಯೇ, ಮಾನವನು ತನ್ನ ಬುದ್ಧಿಮತ್ತತೆ (Intelligence)ಯನ್ನು ಉಪಯೋಗಿಸುತ್ತಾ ಬಂದಿರುತ್ತಾನೆ. ನಾಗರಿಕತೆಯ ಪ್ರಗತಿಯ ಸಂಕೇತಗಳಾದ ಬೆಂಕಿಯ ಉತ್ಪಾದನೆ, ಗಾಲಿ(Wheel)ಯ ಉಪಯೋಗವೇ ಮೊದಲಾದ ಆವಿಷ್ಕಾರಗಳು ನಿರಕ್ಷರಕುಕ್ಷಿಗಳಿಂದಲೇ ಆಗಿವೆ.

ಎಲ್ಲಿಯೋ ಹುಟ್ಟಿ, ಮತ್ತೆಲ್ಲಿಯೋ ನೆಲೆನಿಂತು ತನ್ನ ತಲೆಮಾರಿನ ಅವಿಭಕ್ತ ಕುಟುಂಬದಲ್ಲೇ ಮೊತ್ತಮೊದಲು ವಿದ್ಯಾರ್ಜನೆ ಮಾಡಿದ ದಾಖಲೆಯನ್ನು ಸ್ಥಾಪಿಸಿ ಸ್ವಪ್ರಯತ್ನದಿಂದ ಅಧ್ಯಾಪಕನಾಗಿ ಶಿಕ್ಷಣ ಕ್ಷೇತ್ರದಲ್ಲಿ ಪ್ರಯೋಗ ನಾವೀನ್ಯತೆ (Innovation)ಯಿಂದ ಶಿಷ್ಯರಿಂದಲೂ ಪ್ರಶಂಸಿಸಲ್ಪಟ್ಟು ಕಲೆ, ಸಾಹಿತ್ಯ, ಸಮಾಜಸೇವೆಯೊಂದಿಗೆ, ತನ್ನವರು ತಲೆಯೆತ್ತಿ ನಡೆಯುವಂತೆ ಕುಟುಂಬ ಗೌರವವನ್ನು ಕಾಪಾಡಿಕೊಂಡು ಬಂದು, ತನ್ನ ಮಕ್ಕಳ ಭವಿಷ್ಯವನ್ನು ರೂಪಿಸಿ ಕೃಷಿ ವ್ಯವಸಾಯಗಳಲ್ಲಿ ನೈಪುಣ್ಯತೆಯನ್ನು ಪಡೆದು ಗಾಂಧೀವಾದಿಯಾಗಿ ಸ್ವಾತಂತ್ರ್ಯಾಂದೋಲನದಲ್ಲಿ ಭಾಗಿಯಾಗಿ, ಗಾಂಧೀಜಿಯ ರಚನಾತ್ಮಕ ಕಾರ್ಯಕ್ರಮಗಳ(Constructive Programme) ಪ್ರಚಾರಕನಾಗಿ ಜಿಲ್ಲೆಯಾದ್ಯಂತ ಸಂಚರಿಸಿ ಮದ್ಯಪಾನ ನಿರೋಧ, ಹರಿಜನೋದ್ಧಾರ, ಖಾದಿ ಧಾರಣೆ ಇವೇ ಮೊದಲಾದ ಗಾಂಧೀತತ್ವ ಪ್ರಣಾಲಿಯನ್ನು ಹಬ್ಬಿಸಿ ತನ್ನ ಕಡೆಯ ಉಸಿರಿನ ತನಕವೂ ಗಾಂಧೀಪ್ರತಿಷ್ಠಾನ ಕಾರ್ಯಕ್ರಮ, ಸಮಾಜ ಸೇವೆ, ಸಾಹಿತ್ಯ, ಸಾಂಸ್ಕೃತಿಕ ಸಭೆಗಳಲ್ಲಿ, ಸರ್ವಧರ್ಮ ಸಮ್ಮೇಳನಗಳಲ್ಲಿ ಭಾಗವಹಿಸುತ್ತಾ 93 ವರ್ಷದ ದೀರ್ಘಾಯುಷ್ಯಿಯಾಗಿ ಬಾಳಿದ ತುಂಬು ಜೀವನದ ಬಹುಮುಖಿ ವ್ಯಕ್ತಿತ್ವ ನರ್ಕಳ ಶ್ರೀ ಮಾರಪ್ಪ ಶೆಟ್ಟರದು.

ಮಾತೆಯ ಮೊತ್ತಮೊದಲಿನ ಮುದ್ದಿನ ತುಳು ಮಾತೇ ಪ್ರೀತಿಯ ಗಾಯತ್ರಿಯಾಗಿ ಕಿವಿಗೆ ಬಿದ್ದು ಸುಪ್ತ ಧೀಶಕ್ತಿಯನ್ನರಳಿಸಿದ ತಾಯ್ನುಡಿಯ ಮಾತೃ ಋಣವನ್ನು ತೀರಿಸಿ, ಬೆಳೆಸಿ ಹರಸಿದ ಕನ್ನಡ ಭುವನೇಶ್ವರಿಯ ಪದತಲದಲ್ಲಿ ಕೃತಜ್ಞತೆಯ ಸಾಹಿತ್ಯ ಪುಷ್ಪವನ್ನರ್ಪಿಸಿ ಕಾಲವಾದರು.

ಆಗಿನ ಪುತ್ತೂರು ತಾಲೂಕಿನ ವಿಟ್ಲದ ಸಮೀಪಕ್ಕಿರುವ ಮಂಕುಡೆ, ಅಗರಿ ಊರುಗಳ ಒತ್ತಿನಲ್ಲಿರುವ ನರ್ಕಳ ಎಂಬಲ್ಲಿ 15 ಡಿಸೆಂಬರ್ 1894ರಲ್ಲಿ ಶ್ರೀ ಶೆಟ್ಟರ ಜನನ. ನರ್ಕಳ ಎಲ್ಲಿ ಎಂದು ಅವರ ಮಕ್ಕಳೂ ನೋಡಿಲ್ಲ. ವಿದ್ಯಾವಂತನಾಗಬೇಕೆಂಬ ಹೆಬ್ಬಯಕೆಯನ್ನು ಅವರ ಜೈವಿಕ ಜೀವಕಣ (Gene)ವೇ ಪ್ರೇರಿಸಿರಬೇಕು.

ಅವರ ಮಾತಿನಲ್ಲೇ 'ಒಂದನೆ ಎರಡನೆಗೆ ಒಂದು ಸಾಲೆ ಕಂಡ ನಾನು. ಮೂರನೆ ನಾಲ್ಕನೆಗೆ ಎರಡು ಸಾಲೆ ಕಂಡಿದ್ದೆ. ಆ ಎರಡರಲ್ಲಿ ಕಡೆಯ ಸಾಲೆ ಸಾಲೆತ್ತೂರು ಸಾಲೆ.'

ಅಧ್ಯಾಪಕರ ಕಣ್ಮಣಿಯಾಗಿ ಸಾಲೆತ್ತೂರು ಸಾಲೆಯಲ್ಲಿ ನಾಲ್ಕನೆಯ ತರಗತಿಯಲ್ಲಿ ಓದುತ್ತಿದ್ದಾಗಲೇ ಮುಂದಿನ ವಿದ್ಯಾಭ್ಯಾಸದ ಚಿಂತೆ ಕಾಡತೊಡಗಿತು. ಮುಖ್ಯೋಪಾಧ್ಯಾಯರಿಗೂ ಈ ವಿದ್ಯಾರ್ಥಿಯ ಆಸಕ್ತಿಯನ್ನು ನೋಡಿ ಸಹಾಯ ಮಾಡಬೇಕೆಂಬ ಆಸೆ.

ಪಂಜೆ ಮಂಗೇಶರಾಯರು 'ಸಬ್-ಅಸಿಸ್ಟೆಂಟ್ ಇನ್ಸ್‌ಪೆಕ್ಟರ'ರಾಗಿ ವಾರ್ಷಿಕ ಶಾಲಾ ಪರೀಕ್ಷೆಗಾಗಿ ಸಾಲೆತ್ತೂರು ಶಾಲೆಯನ್ನು ಸಂದರ್ಶಿಸಿದ ದಿನ ಮಾರಪ್ಪ ಶೆಟ್ಟರ ವಿದ್ಯಾಜೀವನದ ದೆಸೆಯೇ, ಅತಏವ, ಜೀವನ ದೆಸೆಯೇ ಬದಲಾಯಿತು.

ಇನ್ಸ್‌ಪೆಕ್ಟರ್ ಪಂಜೆಯವರು ಹಳ್ಳಿಗೆ ಇಳಿದು ಬರುವ ನೋಟ, ಘಟನೆಗಳನ್ನು ಅವರ 'ಸಬ್-ಅಸಿಸ್ಟಾಂಟನ...ಡೈರಿ' ಲೇಖನದಲ್ಲೇ ಓದಬೇಕು. ಅವರ ಮುಂಡಾಸು, ಕಚ್ಚೆ ಪೋಷಾಕುಗಳನ್ನು ನೋಡಿ ಊರಿನ ಪಟೇಲ ಉಗ್ರಾಣಿಯೊಂದಿಗೆ ಓಡೋಡಿ ಬಂದು, ಇಳಿಯುತ್ತಿದ್ದ ಪಂಜೆಯವರನ್ನು ದಾರಿಯಲ್ಲೇ ಎದುರುಗೊಂಡು ಬಾಗಿ ನಮಸ್ಕರಿಸಿ ಮಾತನಾಡಲು ತಡವರಿಸುತ್ತಿದ್ದಾಗ ಇವರು ಪೋಲಿಸ್ ಇನ್ಸ್‌ಪೆಕ್ಟರರಲ್ಲ, ಶಾಲಾ ಇನ್ಸ್‌ಪೆಕ್ಟರರು ಎಂದು ತಿಳಿದು ಬಂದಾಗ 'ಹೊ, ಇದು ನಿರುಪದ್ರವಿ ಕೇರೆ ಹಾವು' ಎಂದು ಗೊಣಗುತ್ತಾ ಅಲ್ಲಿಂದ ಆ ಕ್ಷಣ ಕಾಲುಕಿತ್ತುದುಂಟು.

ಹಿಂದೆ ಪರೀಕ್ಷೆಗೆ ಬರುತ್ತಿದ್ದವರು 'ಸುಪರ್‌ವೈಜರ್' ಎಂಬ ಕಿರಿಯ ಇನ್ಸ್‌ಪೆಕ್ಟರರು. ಇನ್ಸ್‌ಪೆಕ್ಟರರೇ ವಿದ್ಯಾರ್ಥಿಗಳನ್ನು ಪರೀಕ್ಷಿಸಿದ ಫಲರೂಪವಾಗಿ ದೊರೆಯುವ ಹುಡುಗರ 'ಪಾಸ್-ಫೈಲ್'ನ ಶೇಕಡಾ-ವಾರು ದಾಮಾಶಯದ ಮೇಲೆಯೇ ಶಾಲೆಗೆ ಗ್ರಾಂಟೂ ದೊರೆಯುವುದು!

'ಈ ಸಲ ಯಾರು ಬರುತ್ತಾರೋ, ಸುಳಿವೇ ಇಲ್ಲ. ಸುಪರ್-ವೈಜರರೋ, ಸಬ್-ಅಸಿಸ್ಟಾಂಟರೋ; ಇಳಿದು ಬರುತ್ತಾರೋ, ಹತ್ತಿ ಹೋಗುತ್ತಾರೋ, ಏರಿ ಹೋಗುವುದಿದ್ದರೆ ಕಡಲ ದಂಡೆಯ ಮಂಜೇಶ್ವರದಿಂದ ಹೊರೆಪಟ್ಟಿ ಪಡುವಣ ಪಾಕೂರು ಕಟ್ಟೆಗೆ ಮುಟ್ಟಿದ ಸುದ್ಧಿ ಬರಬೇಕು; ಇಳಿದು ಬರುವುದಿದ್ದರೆ ಕುಮಾರ ಗಟ್ಟದಿಂದ ಇಳಕಲ್ ಇಳಿದು ಇಡ್ಕಿದು ಸೇರಬೇಕು-ಎಂದೋ ಏನೋ ಏನ್ನುವುದರೊಳಗೆ ಮೂಡಣ ಕಿರುಕಿಟಿಕಿಗೆ ಕಣ್ಣಿಟ್ಟಿದ್ದ ನಾನು (ಮಾರಪ್ಪ ಶೆಟ್ಟಿ) 'ಅಗೊಳ್ಳಿ, ಬಂದರು' ಎಂದೆ. ಆಗಲೇ ಮಾಸ್ತರರು.

"ಟೊಪ್ಪಿಯೋ, ಮುಂಡಾಸೋ?"

'ಮುಂಡಾಸು'

"ಕಪ್ಪೋ, ಬಿಳಿಯೋ?"

'ಬಿಳಿ'

"ಹಾಗಾದರೆ ಹೊಸಬರು, ಏಳಿರಿ. ಎಲ್ಲರೂ ಎದ್ದು ನಿಂತುಕೊಳ್ಳಿ. ಒಳಹೊಕ್ಕೊಡನೆ ನಮಸ್ಕಾರ ಹೇಳಿ" ಎಂದು ಆಜ್ಞಾಪಿಸಿ, "ಪೆಟ್ಟಿಗೆಯ ಒಳಗಿರುವ ನಿನ್ನ ಮಾದಳ ಹುಳಿ ತೆಗೆ, ಮಾರಪ್ಪ" ಎಂದು ಹೇಳಿ ಮುಗಿಯುವ ಮುನ್ನ ಮಾದಳವನ್ನು ಮೇಲೆ ಇಟ್ಟದ್ದೂ ಹೊಸ ಇನ್ಸ್‌ಪೆಕ್ಟರರು ಹೊಸ್ತಿಲಿಗೆ ಕಾಲಿಟ್ಟುದೂ ಒಮ್ಮೆಯೇ ಆಯಿತು. ನೋಡುತ್ತಾ

"ಹೆಸರು...?"

'ಮಾರಪ್ಪ'

"ಮಾದಳ ಮಾರಪ್ಪ"

ಅಲ್ಲಿಂದಲೇ ಕವಿತೆ. ಮಾರಪ್ಪ ಶೆಟ್ಟರ ಮನೋಪಟಲದಲ್ಲಿ ಅಚ್ಚೊತ್ತಿದ ಮೊದಲ ಸಂದರ್ಶನದ ಮೊದಲ ಸಂಭಾಷಣೆ.

ಆಗಿನ ಕಾಲ ಇನ್ಸ್‌ಪೆಕ್ಟರರು ಶಿಫಾರಸು ಮಾಡಿದರೆ ಪ್ರೈಮರಿ ಶಾಲೆಯ ವಿದ್ಯಾರ್ಥಿಯನ್ನು ನೇರವಾಗಿ ಅಧ್ಯಾಪಕ-ತರಬೇತಿಗೆ ಕಳುಹಿಸಬಹುದಾಗಿತ್ತು. ಆಗ ಅಧ್ಯಾಪಕರ ಸಂಖ್ಯೆ ಬಹಳ ಕಡಿಮೆ. ಬ್ರಿಟಿಷ್ ಸರಕಾರ ಶಾಲಾ ಇನ್ಸ್‌ಪೆಕ್ಟರರಿಗೇ ಈ ಅಧಿಕಾರ ಕೊಟ್ಟಿತ್ತು.

ಮಂಗಳೂರಿನ ಸರಕಾರೀ ಹಾಯರ್ ಎಲಿಮೆಂಟರೀ ಟ್ರೈನಿಂಗ್ ಶಾಲೆಗೆ 1920-21ರಲ್ಲಿ ಮಾರಪ್ಪ ಶೆಟ್ಟಿಯವರು ತರಬೇತಿ ವಿದ್ಯಾರ್ಥಿಯಾಗಿ ಸೇರಿ ಸಭೆ, ಸಾಹಿತ್ಯಕೂಟ, ವಾರ್ಷಿಕೋತ್ಸವಗಳಲ್ಲಿ ಉತ್ಸಾಹ ಆಸ್ತಿಗಳಿಂದ ಭಾಗವಹಿಸಿದರು. ಸಾಹಿತ್ಯ ಕೃತಿಗಳನ್ನು ಬರೆಯಲು ಪ್ರಾರಂಭಿಸಿದರು. ಉಪಾಧ್ಯಾಯ ವೃತ್ತಿಯಲ್ಲಿ ಮುಂದುವರಿದರು. ಬರವಣಿಗೆಯೂ ಮುಂದೆ ಸಾಗಿತು.

ಶ್ರೀ ಶಿವರಾಮ ಕಾರಂತ, ಶ್ರೀ ವಿ. ಸೀತಾರಾಮಯ್ಯ ಮೊದಲಾದವರ ಸಂಪಾದಕತ್ವದಲ್ಲಿ ಪ್ರಕಟವಾದ 'ಪಂಜೆ ಸ್ಮಾರಕ' ಬೃಹತ್ ಗ್ರಂಥದಲ್ಲಿ ಚಾರಿತ್ರಿಕ ಮಹತ್ವವುಳ್ಳ ಕೆಲವು ಲೇಖನಗಳಲ್ಲಿ ಎದ್ದು ಕಾಣುವ ಎರಡು ಲೇಖನಗಳಿವೆ. ಒಂದು ಸ್ವತಃ ಪಂಜೆಯವರು ಬರೆದ 'ಸಬ್-ಅಸಿಸ್ಟಾಂಟನ...ಡೈರಿ' ಇನ್ನೊಂದು ಮಾರಪ್ಪ ಶೆಟ್ಟರು ಬರೆದ ಲೇಖನ: 'ಗುರುಗಳಾದ ಪಂಜೆಯವರು'.

ಶಾಲಾ ಇನ್ಸ್‌ಪೆಕ್ಷನ್ ಪ್ರವಾಸ ಸಂದರ್ಭವನ್ನು ಉಪಯೋಗಿಸಿಕೊಂಡು ಪಂಜೆಯವರು ಹಳ್ಳಿ-ಹಳ್ಳಿಗಳನ್ನು ಸುತ್ತುತ್ತಿದ್ದಾಗ ಸಂಗ್ರಹಿಸಿದ ಹಳ್ಳಿ-ಹಾಡುಗಳು 'ಓ ಬೇಲೇ' ಸುಗ್ಗಿ ಹಾಡುಗಳು, ತುಳು ಪಾಡ್ದನಗಳು, ಬೈದರ್ಕಳ ಸಂಧಿ (ಮುಂದೆ ಇದಕ್ಕೆ 'ಕೋಟಿ-ಚೆನ್ನಯ' ರೂಪಕೊಟ್ಟು ಪಂಜೆಯವರು ಪ್ರಕಟಿಸಿದರು) ಮೊದಲಾದವುಗಳನ್ನು ಸಂಗ್ರಹಿಸುವುದರೊಂದಿಗೆ ಆಗಿನ ಶಾಲಾ ಮಾಸ್ತರರ ಬವಣೆ, ಪರಿಸ್ಥಿತಿಗಳ ವಿವರವಿದೆ. ಗದ್ದೆಯ ಹುಣಿಯಲ್ಲಿ ಹೋಗುತ್ತಿರುವಾಗ ನೇಜಿ ನೆಡುತ್ತಿರುವ ಹೆಂಗಸರ ಹಾಡನ್ನು ಕೇಳುತ್ತಾ ಪಂಜೆಯವರು ನಿಂತಾಗ ಅವರ ಹಿಂದಿನಿಂದ ಬರುವ ಜವಾನ ರಾಮ ಮತ್ತು ಮಾರಪ್ಪ ಶೆಟ್ಟರು ಪಂಜೆಯವರು ಹೇಳಿದಂತೆ ಆ ಹಾಡುಗಳನ್ನು, ಪಾಡ್ದನಗಳನ್ನು, 'ಸಂಧಿ'ಗಳನ್ನು ಬರೆದುಕೊಳ್ಳಬೇಕು.

ಇಲ್ಲಿ ಒಂದು ವಿಷಯವನ್ನು ಹೇಳಲೇಬೇಕಾದುದು ಸಂದರ್ಭೋಚಿತ. ಶ್ರೀ ಮಾರಪ್ಪ ಶೆಟ್ಟರ ಕನ್ನಡ ಅಕ್ಷರ ಮುತ್ತಿನಂತಹ ಅಕ್ಷರ. ಅವರು ಅಧ್ಯಾಪಕ ವೃತ್ತಿಯಿಂದ ನಿವೃತ್ತಿಯಾದ ಅನಂತರವೂ ಜತನದಿಂದ ಕಾಪಾಡಿಕೊಂಡು ಉಪಯೋಗಿಸುತ್ತಿದ್ದ ಕಪ್ಪು ಬಣ್ಣದ 'ಬ್ಲೇಕ್-ಬರ್ಡ್' (Black Bird) ಪೆನ್ನಿನ ಚೂಪಾದ ಮೊನೆಯಲ್ಲಿ ನೀಟಾದ ಕನ್ನಡ ಬರಹವನ್ನು - ಒಂದಿನಿತು ಎಡಬದಿಗೆ ಬಾಗಿಸಿಯೂ, ಇಂಗ್ಲಿಷ್ ಬರಹವನ್ನು ಬಲ ಬದಿಗ ಹೆಚ್ಚು ಬಾಗಿಸಿ ಓರೆಯಾಗಿಯೂ ಬರೆಯುತ್ತಿದ್ದರು. ಅವರು ಇಂಗ್ಲಿಷ್ ಸಹಿ. –



ಹಾಕಲು ಪ್ರಾರಂಭಿಸಿದರೆ ಎಲ್ಲಿಯೂ ಲೇಖನಿಯನ್ನು ಕಾಗದದಿಂದ ಮೇಲೆತ್ತದೆ, ಪಾರಂಭದಿಂದ ಕಡೆಯತನಕ ಒಂದೇ ಗೆರೆಯ ಗೀರಿನಲ್ಲಿ ಅಂತ್ಯವಾಗುವ, ಯಾವತ್ತೂ ಸ್ವಲ್ಪವೂ ಬದಲಾಗದ

ಕ್ರಮವನ್ನು ಅವರ ಹಿರಿಯ ಮಕ್ಕಳು ನಕಲು ಮಾಡಲು ಪ್ರಯತ್ನಿಸಿದುದುಂಟು. ತಂದೆಯ ಪ್ರಭಾವದಿಂದ ಮಕ್ಕಳ ಬರಹವೂ ಒಳ್ಳೆಯದಾಗಿದ್ದರೂ, ಶ್ರೀ ಶೆಟ್ಟರ ಬರಹವನ್ನು ಹೋಲುವ ಮುತ್ತಿನ ಕೈಬರಹ ಕನ್ನಡ ನಾಡಿನಲ್ಲೇ ವಿರಳವೆಂದು ಹೇಳಬಹುದು.

'ಪಂಜೆಯವರ ಸ್ಮಾರಕ' ಗ್ರಂಥಗಳಲ್ಲಿ ಶಿಷ್ಯನಾಗಿ ಬರೆದ ಲೇಖನದಲ್ಲಿ ಮಾರಪ್ಪ ಶೆಟ್ಟರು, ಶ್ರೀ ಪಂಜೆಯವರು ಎಂತಹ ಪ್ರಸಿದ್ಧ ಸಾಹಿತಿಯೋ ಅಂತೆಯೇ ಪ್ರಸಿದ್ಧ ಶಿಕ್ಷಣವೇತ್ತ, ಬಾಲಶಿಕ್ಷಣ ಪರಿಣತ, ಉತ್ತಮ ಅಧ್ಯಾಪಕ ಎಂಬುದನ್ನು ಸಾದರ ಪಡಿಸಿದ್ದಾರೆ. ಅಧ್ಯಾಪಕ ತರಬೇತಿ ಕ್ಲಾಸಿನಲ್ಲಿ ಪಾಠ ಮಾಡಲು ಪಂಜೆಯವರು ತರಬೇತಿಗೆ ಕಾಲಿಡುವಾಗ ಆದ ಬಾಗಿಲ ಶಬ್ದವನ್ನೇ ಪಾಠದ ಪೀಠಿಕೆಯಾಗಿಸುವ, 'ಹಾವಿನ ಹಾಡಿ'ನ ರಾಗವನ್ನು ನಿಧಾನವಾಗಿ ಹಾವಾಡಿಗನಂತೆ, 'ಬಂತೈ ಬಂತೈ ತೆಂಕಣ ಗಾಳಿಯು ಕೊಂಕಣ ಸೀಮೆಗೆ' ಓದುವಾಗಿನ 'ಮಳೆ ಗಾಳಿಯ ಭರಾಟೆ', '.....ಚದುರ ಶಿಖೆಯನು ಹಾಕಿದ' ಎನ್ನುವಾಗ ತನ್ನ ತಲೆಯ ಕೂದಲಿನಲ್ಲಿ ಜುಟ್ಟು ಹಾಕಿ ತೋರಿಸುವ, ಗದುಗಿನ ಭಾರತದ '.....ಬೆರಳ ಮೂಗಿನ' ಇತ್ಯಾದಿ ಪ್ರಯೋಗ ವೈಶಿಷ್ಟ್ಯಗಳ, 'ಹಿಂದೆ ಹೋಗುವವನ ಮುಂದೆ ಇಬ್ಬರು, ಮುಂದೆ ಹೋಗುವವನ ಹಿಂದೆ ಇಬ್ಬರು... ಒಟ್ಟೆಷ್ಟು ಜನರು? ಎಂದು ಮಕ್ಕಳ ಜಾಣ್ಮೆ ಪರೀಕ್ಷೆ - ಮೊದಲಾದ, ಪಂಜೆಯವರ ಅಧ್ಯಾಪನದ ಸ್ವಾರಸ್ಯವನ್ನು ಬಂಧುಗಳೊಡನೆ ಮನೆಯಲ್ಲೂ ವಿವರಿಸುತ್ತಾ ಶ್ರೀ ಶೆಟ್ಟರು ಆನಂದಿಸುವ ಕ್ಷಣಗಳನ್ನೂ ಅವರ ಮಕ್ಕಳು ಮರೆಯಲ್ಲಿ ನಿಂತು ಕೇಳುತ್ತಿದ್ದರು.

ಇಂತಹ ಶಿಕ್ಷಣವೇತ್ತರ ಅತ್ಯಂತ ಭಯ-ಭಕ್ತಿಯ ಶಿಷ್ಯನಾಗಿ ಅವರ ಹೆಜ್ಜೆಗೆ ಹೆಜ್ಜೆಯಾಗಿ ನಡೆಯುತ್ತಿದ್ದ ಮಾರಪ್ಪ ಶೆಟ್ಟರು 'ಗುರುಗಳಾದ ಪಂಜೆಯವರು' ಎಂಬ ಲೇಖನವನ್ನು ಪಂಜೆಯವರ ಅಸಂಖ್ಯಾತ ಶಿಷ್ಯ ವರ್ಗದಲ್ಲಿ, ಗುರುವಿನ ಕುರಿತು ಶಿಷ್ಯನಾಗಿ, ಶಿಷ್ಯರೆಲ್ಲರ ಪರವಾಗಿ ಗುರುವಿನ ಸ್ಮಾರಕ ಗ್ರಂಥದಲ್ಲಿ ಬರೆಯುವ ಭಾಗ್ಯ, ಗೌರವ ಮಾರಪ್ಪ ಶೆಟ್ಟರದಾಯಿತು.

ಸರಕಾರಿ ಕೆಲಸದಿಂದ ನಿವೃತ್ತರಾದ ಮೇಲೆ, ದಸರೆಯ ಸಾಹಿತ್ಯ ಗೋಷ್ಠಿಗೆಂದು ಪಂಜೆಯವರು ಒಮ್ಮೆ ಪುತ್ತೂರಿಗೆ ಬಂದಿದ್ದರು. ಮಾರಪ್ಪ ಶೆಟ್ಟರ ಸ್ಮರಣೆ: "ಹಿಂದೆ ಅವರು ಹೇಳಿಕೊಟ್ಟ ಮಕ್ಕಳ ಕಥೆಯ ಲಕ್ಷಣಕ್ಕನುಸಾರವಾಗಿ ನಾನು ಬಹು ಪ್ರಯಾಸಪಟ್ಟು ತಯಾರಿಸಿದ 'ಸುಂದರಿಯ ಚಂದ'ವೆಂಬ ಕತೆಯನ್ನು ಅವರ ಮುಂದೆ ಓದಿದೆ. ಆಗಲವರು ಮೆಲ್ಲನೆ ಮುಗುಳು ನಗೆ ಸೂಸಿದರು. ಅದನ್ನು ನೋಡಿದ ನಾನು, ಪಂಜೆಯವರ ಶಿಷ್ಯನಾದುದು ಇಂದಿಗೆ ಸಾರ್ಥಕವಾಯಿತೆಂದು ಮನಸ್ಸಿನೊಳಗೇ ಹಿಗ್ಗಿದೆ."

ಟ್ರೈನಿಂಗ್ ಶಾಲೆಯಲ್ಲೊಂದು ಜಿಲ್ಲಾ ವಿದ್ಯಾ ಪ್ರದರ್ಶನಕ್ಕೆ ಅನೇಕ ಲೇಖನಗಳು ಸ್ಪರ್ಧೆಗಾಗಿ ಬಂದಿದ್ದವು. ಶ್ರೀ ಮಾರಪ್ಪ ಶೆಟ್ಟರು ತಾನು ಬರೆದ 'ಮಂಜಟ್ಟಿ ಕೋಣ' ಕವಿತೆಯನ್ನು ಅದಕ್ಕೆ ಕಳುಹಿಸಿದ್ದರು. ಅಲ್ಲಿಗೆ ಬಂದಿದ್ದ ಪಂಜೆಯವರು ಅವನ್ನೆಲ್ಲಾ ನೋಡಿದರು. ನನ್ನೊಡನೆ (ಮಾರಪ್ಪ ಶೆಟ್ಟರೊಡನೆ) "ನೀನು 'ಭರತೇಶ ವೈಭವ' ಓದಿದ್ದೀಯೇ?" ಎಂದರು. ನಾನು ಹೌದೆಂದೆ..... ನಾನು ಅದರಲ್ಲಿನ 'ಓಜೆ' ಎಂಬೊಂದು ಪದವನ್ನು ಹೆಕ್ಕಿ ನನ್ನ 'ಮಂಜಟ್ಟಿ ಕೋಣ'ದಲ್ಲಿ ಸೇರಿಸಿಕೊಂಡಿದ್ದೆ.... ಒಬ್ಬ ಕವಿಯು ಒಂದು ಹೊಸ ಶಬ್ದ-ಪ್ರಯೋಗವನ್ನು ಎಲ್ಲಿ ಯಾವ ಕಾವ್ಯದಲ್ಲಿ ಉಪಯೋಗಿಸಿದ್ದಾನೆಂಬುದನ್ನು ತಟ್ಟನೆ ಎತ್ತಿ ಹೇಳುವ ಅಸಾಧಾರಣ ಜ್ಞಾಪಕ ಶಕ್ತಿ ಪಂಜೆಯವರಿಗಿತ್ತು..."

"ಬಂದುದರಲ್ಲಿ ನಿನ್ನದು (ಮಂಜಟ್ಟಿ ಕೋಣ) ಸಾಕು. ಬೇಗನೆ ಛಾಪಿಸಬೇಡ!" ಎಂದು ಎಚ್ಚರಿಸಿದರು.

ಗುರುವಿನ ಪ್ರೋತ್ಸಾಹದ ಮಾತುಗಳು, ಎಚ್ಚರಿಕೆಯ ಹಿತನುಡಿಗಳು ಶಿಷ್ಯನಲ್ಲಿ ಉತ್ತಮ ಪರಿಣಾಮವನ್ನುಂಟು ಮಾಡಿತು.

ಸಾಹಿತಿಯಾಗಿ

ಶ್ರೀ ಮಾರಪ್ಪ ಶೆಟ್ಟರ ಸಾಹಿತ್ಯ ಬೆಳೆದು ಬಂದುದು ಮೂರು ಕವಲುಗಳಾಗಿ: ತುಳು; ಕನ್ನಡ; ಹವ್ಯಕ ಕನ್ನಡ.

೧. ತುಳು ಸಾಹಿತ್ಯ

ಅ. 'ಪೊರ್ಲಕಂಟ್'

ಮೂಲ್ಕಿಯ ಬಪ್ಪನಾಡಿನಲ್ಲಿ 1989ನೇ ಎಪ್ರಿಲ್‌ನಲ್ಲಿ ಅಖಿಲ ಭಾರತ ತುಳು ಸಮ್ಮೇಳನ ಏರ್ಪಡಿಸಿದ ಸಂದರ್ಭದಲ್ಲಿ ಶ್ರೀ ಮಾರಪ್ಪ ಶೆಟ್ಟರ 'ಪೊರ್ಲಕಂಟ್' ಮತ್ತು 'ಅಮಲ್ ದೆಪ್ಪಡೆ' ಎಂಬ ಎರಡು ಕವನ ಮಾಲೆಗಳನ್ನು ಒಟ್ಟಾಗಿ 'ತುಳುಕಬಿತೆಲೆ ಗೊಂಚಿಲ್' ಆಗಿ ಪ್ರಕಟಿಸಿದ ಪುಸ್ತಿಕೆಯ ಹಿಂಬದಿಯ ರಕ್ಷಾಪುಟದಲ್ಲಿ ಶ್ರೀ ಶೇಖರ ಇಡ್ಯರ ಮಾತುಗಳು:

'50 ವರ್ಸೊಗು ಪ್ರಾರ್ಕ್‌ಡ್ ತಿಗದಂಚಿನ ರಿತಿಯಾಯಿನ ತುಳು ಕಬಿತೆಲೆನ್ ರಚನೆ ಮಲ್ತಿನ ದಿ। ನರ್ಕಳ ಮಾರಪ್ಪ ಸೆಟ್ರ್ ತುಳು ಸಾಹಿತ್ಯದ ನವೋದಯ ಮಲ್ತಿನ ಸಾಹಿತಿಲೆಡ್ ಒಂಜಿ ಮುಖ್ಯ ವ್ಯಕ್ತಿಯಾದ್ ಇತ್ತೆರ್. ಆರ್ ಭಾಷಾತಜ್ಞೆರ್. ಸಂಸ್ಕೃತದ ಭಾರಿ ಅನುಭವದಾರ್ ಬೊಕ್ಕ ನಿಸ್ವಾರ್ಥ ಸಮಾಜ ಸೇವಕೆರ್. 'ಪೊರ್ಲಕಂಟ್' ಬೊಕ್ಕ 'ಅಮಲ್ ದೆಪ್ಪಡೆ' ತುಳುವೆರೆನ ಬಾರಿ ಮೆಚ್ಚಿಗೆನ್ ಪಡೆತಿನ ತುಳುಕಬಿತೆಲೆನ ಗೊಂಚಿಲ್‌ಲು. ಈ ಕಬಿತೆಲೆನ್ ತುಳುವೆರ್ ಪಣೊಂದು ಕೇಣೊಂದು ಉಪ್ಪೊಡುಂದು ಅಖಿಲಭಾರತ ತುಳು ಸಮ್ಮೇಳನದ ಪರ್ಬೊಡ್ ಕುಡ ಅಚ್ಚಿಮಲ್ತ್‌ದ್ ನಿಕ್ಲೆಗ್ ಕೊರ್ಪ".

ತುಳುಭಾಷೆಯ ಮೂಲ ಶಬ್ದದಿಂದಾದ 'ಪೊರ್ಲಕಂಟ್' ಎಂಬ ಸುಂದರವಾದ ನುಡಿಗಟ್ಟಿಗೆ (Idiom) ಸರಿ ಸಮನಾದ ನುಡಿಗಟ್ಟು ಕನ್ನಡದಲ್ಲಿ ಇಲ್ಲವೆಂದೇ ಹೇಳಬಹುದು. ಶ್ರೀಮಾನ್ ಕಯ್ಯಾರ ಕಿಂಞಣ್ಣ ರೈಗಳು ಒಂದು ಸಂದರ್ಭದಲ್ಲಿ ಈ ಕೊಂಡಾಟದ 'ಪೊರ್ಲಕಂಟ್' ಕವನವನ್ನು ಉದ್ಧರಿಸಿದ ನೆನಪು. ಹುಡುಕಿ, ಹುಡುಕಿ, ಅತ್ಯಂತ ಸೂಕ್ತವಾದ ಪದವನ್ನು ಆರಿಸಿ ಉಪಯೋಗಿಸುವ ಶ್ರೀ ಪಂಜೆಯವರ ಪದ ಸಾಂಗತ್ಯ (Diction) ಪದಲಾಲಿತ್ಯ, ಪ್ರಾಸ ಮಾಧುರ್ಯ ಶೈಲಿಯನ್ನು ಶ್ರೀ ಮಾರಪ್ಪ ಶೆಟ್ಟರು ತಮ್ಮ ಕವನಗಳಲ್ಲಿ ಪ್ರತಿಬಿಂಬಿಸುತ್ತಾರೆ - ಎಂಬುದಕ್ಕೆ 'ಒಲ್ಲೆ ಎನ್ನ ಪೊರ್ಲಕಂಟ್' ಎಂಬ ಕವನ ಉತ್ತಮ ಉದಾಹರಣೆ:

ಪ್ರಕೃತಿಯಂತರ್ಗತವಾಗಿ ಕಣ್ಣು ಮುಚ್ಚಾಲೆಯಾಡುತ್ತಿರುವ ಅದೃಶ್ಯ ಮುದ್ದು ಮಗುವನ್ನೆಲ್ಲಿ ಕಾಣಲಿ? ಈ ಸುಂದರ ಸೃಷ್ಟಿಯನ್ನು ಹಿನ್ನೆಲೆಯಿಂದ ಕುಣಿಸುವ ಸೂತ್ರಧಾರನೆಲ್ಲಿ? ಬಾಲ ಮಾಧವನ ಮಾಯೆಯೇ?

ಓಲ್ಲೆ ಎನ್ನ ಪೊರ್ಲ ಕಂಟ್?

ಓಲ್ಲೆ ಎನ್ನ ಪೊರ್ಲ ಕಂಟ್? ॥ ಪಲ್ಲ ॥
ಬೂರಿ ಪೂಟ್ ಬುಲ್ತೊಂದುಲ್ಲೆ ।
ಅರಳಿ ಪೂಟ್ ತೆಲ್ತೊಂದುಲ್ಲೆ ॥
ತೆಗ್‌ಲೆದಿಡೆಟ್ ನಲಿತೊಂದುಲ್ಲೆ ।
ಬಲ್ಲ ಕೊಡಿಟ್ ಒಚ್ಚೊಂದುಲ್ಲೆ ॥ ಓಲ್ಲೆ ॥ ೧ ॥

ಅಜ್ಜಿ ಬಿರುತ ಅಟ್ಟೆಡುಲ್ಲೆ ।
ಪಾರ್‌ಮೆಂಚಿ ಪಗರಿಡುಲ್ಲೆ ॥
ಮುಗಲ ಮೃಗೊನು ಗಿಡೆತೊಂದುಲ್ಲೆ ।
ಸೆಡಿಲ ಬೊಬ್ಬೆ ಬೋಂಟೆಡುಲ್ಲೆ ॥ ಓಲ್ಲೆ ॥ ೨ ॥

ಪಗೆಲ್ ದೊಂಬು ಬೇಂಕೆಡುಲ್ಲೆ ।
ಮೈಂದ್ ಪನಿತ ಬೆಗರ್‌ಡುಲ್ಲೆ ॥
ಬರ್ಸೊನೀರ್ ಜಲಕೊಡುಲ್ಲೆ ।
ತಿಂಗೊಲ್ದೊಲ್ಪು ಗಂದೊಡುಲ್ಲೆ ॥ ಓಲ್ಲೆ ॥ ೩ ॥

ಕಡಲ ಕನ್ನಟಿ ತೂವೊಂದುಲ್ಲೆ ।
ಸೂರ್ಯಬೊಟ್ಟು ಪಾಡೊಂದುಲ್ಲೆ ॥
ದೀಡೊಂದುಲ್ಲೆ ದಿಕ್ಕ್ ಪದ್ದೆಯಿ ॥
ಉದಿಪು ಕಂತ್ ಸೊರ್ಣೊಕೇದಯಿ ॥ ಓಲ್ಲೆ ॥ ೪ ॥

ಬಾನೊ ಪಟ್ಟೆ ದುತ್ತುಡುಲ್ಲೆ ।
ಬೀಜಗಾಳಿ ಸುಯಿಲ್‌ಡುಲ್ಲೆ ॥
ದಾರೆಗೆಲೆಡ್ ಕಣ್ಣ ಸಿಮ್ಮೆ ।
ಮುಚ್ಚೊಂದುಲ್ಲೆ ಬುಳವೊಂದುಲ್ಲೆ ॥ ಓಲ್ಲೆ ॥ ೫ ॥

ಕೊಞಿಡುಲ್ಲೆ ಕೋಂಗಿಡುಲ್ಲೆ ।
ಞಿಕಿಞಿಡುಲ್ಲೆ ಬಾಲೆಗುಳೆನ ॥
ರಾಗೊಡುಲ್ಲೆ ಲಾಗೊಡುಲ್ಲೆ ।
ಪಕ್ಕಿಗುಳೆನ ಪಾತೆಗುಳೆನ ॥ ಓಲ್ಲೆ ॥ ೬ ॥

ಮೊಂದವೊಂದು ಮೊನ್ಸ್ ಮಿನಿ ।
ಪಂದವೊಂದ್ ನೀರ್ಸ್ ಪನಿ ।
ಪರಿಪವೊಂದು ಸೂತ ಮೆನ್ನಿ ।
ಮೆಣ್ಕವೊಂದು ದೆಂಗೊಂದುಲ್ಲೆ ॥ ೭ ॥

ಓಲ್ಲೆ ಎನ್ನ ಪೊರ್ಲ ಕಂಟ್? ॥

[ಕನ್ನಡ ಭಾವಾನುವಾದದ ಪ್ರಯತ್ನ]

ಎಲ್ಲಿ ನನ್ನ ಸೊಬಗಿನ ಕಣಿ? ॥ ಪಲ್ಲ ॥
ಬಾಡಿಬಿದ್ದ ಹೂವಿನ ಅಳುವಿನಲ್ಲಿ
ಅರಳಿದ ಹೂವಿನ ನಗುವಿನಲ್ಲಿ
ಚಿಗುರುಗಳೆಡೆಯ ಕುಣಿತದಲ್ಲಿ
ಬಳ್ಳಿಯ ತುದಿಯುಯ್ಯಾಲೆಯಲ್ಲಿ ॥ ೧ ॥

ಕಾಮನಬಿಲ್ಲಿನಂಚು ಸ್ತರಗಳಲ್ಲಿ
ಸೆಳೆಮಿಂಚು ಬಾಣದಲ್ಲಿ
ಮುಗಿಲು ಮೃಗವನ್ನಟ್ಟುತ್ತಿರುವಲ್ಲಿ
ಗುಡುಗು ಬೊಬ್ಬೆ ಬೇಟೆಯಲ್ಲಿ ॥ ೨ ॥

ಹಗಲು ಬಿಸಿಲ ಬೇಗೆಯಲ್ಲಿ
ಮಂಜು ಹನಿಯ ಬೆವರಿನಲ್ಲಿ
ಮಳೆಯ ನೀರ ಜಲಕದಲ್ಲಿ
ತಿಂಗಳ ಬೆಳಕು ಗಂಧದಲ್ಲಿ ॥ ೩ ॥

ಕಡಲ ಕನ್ನಡಿ ನೋಡುತ್ತಿರುವಲ್ಲಿ
ಸೂರ್ಯ ಕಿಲಕ ಹಾಕುತ್ತಿರುವಲ್ಲಿ
ಉದಯಾಸ್ತ ಸ್ವರ್ಣಕೇದಿಗೆಯ
ದಿಕ್ಕಿನ ಅಭರಣ ಧರಿಸುತ್ತಿರುವಲ್ಲಿ ॥ ೪ ॥

ಬಾನಪಟ್ಟೆ ಉಡುಗೆಯಲ್ಲಿ
ಬೀಸುಗಾಳಿ ಉಸಿರಿನಲ್ಲಿ
ತಾರೆಗಳ ಕಣ್ಣೆವೆಗಳು
ಮುಚ್ಚುತ್ತಿರುವಲ್ಲಿ ತೆರೆಯುತ್ತಿರುವಲ್ಲಿ ॥ ೫ ॥

ಬಾಲಕರ ಲಲ್ಲೆಯಲ್ಲಿ
ಕೂಗಾಟೆಯಲ್ಲಿ ಗಾಟೀಗಾಟೆಯಲ್ಲಿ
ಹಕ್ಕಿಗಳ ಪತಂಗಗಳ
ರಾಗದಲ್ಲಿ ನೆಗೆತದಲ್ಲಿ ॥ ೬ ॥

ಮೀನುಗಳನ್ನು ಈಜಾಡಿಸುತ್ತಾ
ನೀರನಿನಿತು ಅಲುಗಿಸುತ್ತಾ
ಹರಿಸುತ್ತಾ, ಅಗ್ನಿಕಿಡಿಯ
ಮಿನುಗಿಸಿಕೊಂಡು ಅವಿತುಕೊಂಡಿದ್ದಾನೆ ॥ ೭ ॥

ಎಲ್ಲಿ ನನ್ನ ಸೊಬಗಿನ ಕಣಿ? ॥

ಈ ಕವನದಲ್ಲಿ ಬರುವ ಅಜ್ಜಿ ಬಿರು (Rain Bow-ಕಾಮನಬಿಲ್ಲು) ಪಗರಿ=ಬಾಣ (ಬಿರು-ಪಗರಿ =ಬಿಲ್ಲುಬಾಣ) ಸೂತ ಮೆನ್ನಿ (ಮೆನ್ನಿ = ಸಣ್ಣ ಕಿಡಿ; ಬೆಂಕಿ ಕಿಡಿ) ತುಳುಭಾಷೆಯ ಅಪರೂಪದ ಪದಗಳು. 'ಮಿನ್ನ್ ಮಿನಿ' ಎಂಬಲ್ಲಿ 'ಮಿನಿ' ವಿಶಿಷ್ಟವಾಗಿ ಸಂದರ್ಭಾನುಸಾರ ಅರ್ಥವ್ಯತ್ಯಾಸವಾದಂತೆ ಉಪಯೋಗಿಸಲ್ಪಡುತ್ತದೆ. (ಉದಾ: 'ಅವುಮಿನಿ ಆವಂದ್ = ಅದೆಲ್ಲ ಆಗಲಿಕ್ಕಿಲ್ಲ, ಎಲ್ಲೆ ಮಿನಿ ಬರ್ತ್‌ಜಂಡ =ನಾಳೆ ಏನಾದರೂ ಬಾರದಿದ್ದರೆ) ಕೋಂಗಿ, ಕೊಳಿ, ಘಾಘಿ - ಈ ಪದಗಳನ್ನು ಉಚ್ಚರಿಸುವಾಗಲೇ ಅರ್ಥ ಸ್ಫುರಿಸುವ ಮುದ್ದು ಮಾಡುವ ಅರ್ಥದ ಶಬ್ದಗಳು (ಆಂಗ್ಲ ಭಾಷೆಯಲ್ಲಿ ನಮೂದಿಸಿದ Onomatopoeia)

"ಒಲ್ಲೆ ಎನ್ನ ಪೊರ್ಲಕಂಟ್?" ಮಾರಪ್ಪ ಶೆಟ್ಟರು ಬರೆದ ಅತ್ಯುತ್ತಮ ಕವಿತೆಗಳಲ್ಲೊಂದು. ತುಳುಸಾಹಿತ್ಯದಲ್ಲಿ ಈ ಕವನವು ಅತ್ಯುಚ್ಚ ಸ್ಥಾನದಲ್ಲಿರುವ ಕೆಲವೇ ಕೆಲವು ಕವನಗಳಲ್ಲೊಂದು - ಎಂದು ನಿಸ್ಸಂದೇಹವಾಗಿ ಹೇಳಬಹುದು. ಚಿಂತನಶೀಲರಿಗೆ ಆಧ್ಯಾತ್ಮಿಕ ರಸೋತ್ಪತ್ತಿಯನ್ನುಂಟು ಮಾಡಬಹುದಾದಂತಹ ಶ್ರೇಷ್ಠ ಕವನ.

ಈ ಗೊಂಚಲಿನಲ್ಲಿರುವ ಹನ್ನೊಂದು ಕವನ:
'ಒಯಿಟ್ ಪೊರ್ಲುದ್ದಿ; ಒಯಿಟ್ ಪೊರ್ಲುಂಡು?'

'ಕಪ್ಪು'-'ಬಿಳಿ' - ಬಿಡಿಬಿಡಿಯಾಗಿ ಪ್ರತ್ಯೇಕವಾಗಿ ನೋಡಿದರೆ ಕಪ್ಪಿನಲ್ಲೇನು ಸೊಬಗಿದೆ? ಬಿಳಿಯಲ್ಲೇನು ಸೊಬಗಿದೆ? ಆದರೆ, ಕಪ್ಪು ಕೂದಲು, ಬಿಳಿಯ ಹಲ್ಲು ಎಂದಾಗ ಕಪ್ಪಿನ ಸೊಬಗು ಬಿಳಿಯ ಸೊಬಗು ಅರ್ಥವಾಗುತ್ತದೆ.

ಕಪ್ಪು ಪೊರ್ಲೊ, ಬೊಳ್ಪು ಪೊರ್ಲೊ?
ಅಯಿಟ್ ಪೊರ್ಲುದ್ದಿ ॥
ಕಪ್ಪು ಕುಜಲ್, ಬೊಲ್ಪು ಕೂಲಿ ।
ಅಯಿಟ್ ಪೊರ್ಲುಂಡು ॥

ಈ ನಾಲ್ಕು ಚರಣದ ಪ್ರತಿ ಪದ್ಯದ ಮೊದಲು ಬರುವ ಪಲ್ಲವಿ

'ಒಯಿಟ್ ಪೊರ್ಲುದ್ದಿ; ಒಯಿಟ್ ಪೊರ್ಲುಂಡು?'

ಎಂಬ ಪ್ರಶ್ನೆಗೆ ಉತ್ತರವಾಗಿ ಬರುವ ಪದ್ಯದ ಸೊಬಗನ್ನು ಹೆಚ್ಚಿಸುತ್ತದೆ. ದುಂಡಗಿನ ಮುಖದಲ್ಲಿ ಉದ್ದದ ಕಣ್ಣು, ಒಟ್ಟು ಸೊಬಗಿ ಅರ್ಥವನ್ನು ಹೆಚ್ಚಿಸುತ್ತದೆ. ಹೀಗೆ ಉದ್ದೊ-ಉರುಂಟು, ಸರ್ತೊ-ಡೊಂಕು, ತೊರೊ-ಸಪುರೊ ಇತ್ಯಾದಿ

ಉದ್ದೊ ಕಣ್ಣ್ ಉರುಂಟ್ ಮೋನೆ
ಸರ್ತೊ ಮೂಂಕು ಡೊಂಕು ಪುರ್ಬು
ಚಟ್ಟೆ ಮುಂಡೊ ಉಬ್ಬು ಪಾದೊ
ತೋರೊ ಕಟೆಲ್, ಸಪುರೊ ಸೊಂಟೊ
ಎತ್ತರೊ ಪುಗೆಲ್, ತಗ್ಗ್ ಪುವೊಳು
ನೇಲ್ಯ ತೋಳು, ಎಲ್ಯ ಬಿರೆಲ್
ಕೆಂಪು ಬಿಮ್ಮೊ ಮಂಜಲ್ ಚರ್ಮೊ
.....'ಅಯಿಟ್ ಪೊರ್ಲುಂಡು'

ಈ ಎಲ್ಲ ಸೊಬಗಿನ ಮಾನದಂಡದಿಂದ ಅಳೆದು ನೋಡಿದರೆ ಪೂರ್ಣದೇಹದ ಸೌಂದರ್ಯವೇ ಅರ್ಥವಾಗಬಲ್ಲುದು. ಈ ಭಾವನೆಯನ್ನೇ ಹೊರಜಗತ್ತಿಗೆ ವಿಸ್ತರಿಸುತ್ತಾ ಹೋದರೆ ತಿಳಿಯಬಲ್ಲುದು ಸೌಂದರ್ಯದ ಕವಿ ಸಮಯ!

ಪುಲ್ಯಕಾಲೊ

ಮುಂಜಾನೆಯ ಪುಣ್ಯಕಾಲದ ವರ್ಣನೆಯಿಂದ ಕೂಡಿದ ಕವನ. ಇದರಲ್ಲಿ ಬರುವ ಅಚ್ಚ ತುಳು ಶಬ್ದಗಳನ್ನು ಗಮನಿಸಿರಿ:

ಮೂರಿದಪ್ಪಿ, ಬೊಳ್ಳಿ (ಶುಕ್ರ ನಕ್ಷತ್ರ) ನೇಮೊ, ಗುಮುಲುಂಡು, ಮೆನ್ಪುರಿ, ತಿಬಿಲ್ಯೊ.

ಅಕ್ಕವೊರ್ಣ

ನೀತಿಬೋಧೆಯ ಕವನ

'ಅಕ್ಕವೊರ್ಣ' ತುಳುಭಾಷೆಯ ಅತ್ಯಂತ ಅಪೂರ್ವ ಪದ. 'ತುಳು ನಿಘಂಟಿ'ನ ಒಂದನೇ ಸಂಪುಟದಲ್ಲಿ 'ಅಕ್ಕವೊರ್ಣ' ಶಬ್ದಕ್ಕೆ 'ಅಂತಿಮ ಸಂದೇಶ' ಎಂದು ಅರ್ಥ ಬರುವ ವಿವರಣೆ ಇದೆ. ಆಂಗ್ಲ ಭಾಷೆಯ 'Swan Song' ಒಬ್ಬನ ಅಂತಿಮ ಸಾಧನೆ/ಬೋಧನೆಯೆಂಬ ಅರ್ಥಕ್ಕೆ ಸಾಮೀಪ್ಯವಿರುವಂತಿದೆ. 'ಅಕ್ಕವೊರ್ಣ' ಕೃತಿಗೆ ಸುಮಾರು 50 ವರ್ಷಗಳೇ ಆಗಿದೆ. ತುಳು ನಿಘಂಟನ್ನು ರಚಿಸಲಿಕ್ಕೆ ಕಾರಣರಾದವರ ಗಮನಕ್ಕೆ ಮಾರಪ್ಪ ಶೆಟ್ಟರ 'ಅಕ್ಕವೊರ್ಣ' ಕವನ ಬಂದಿದೆಯೋ ತಿಳಿಯದು. ಈ ಕವನವೂ ಸಂದೇಶದ ರೀತಿಯಲ್ಲಿದೆ ಅಂತೂ ನಿಘಂಟಿನಲ್ಲಿರುವ ಅರ್ಥಕ್ಕೂ, ಮಾರಪ್ಪ ಶೆಟ್ಟರು ಉಪಯೋಗಿಸಿದ ರೀತಿಗೂ ಸ್ಪಷ್ಟ ತಾಳೆ ಬೀಳುವುದಿಲ್ಲ.

'ಕಾರ್ಲ ತಗ್ಗ್‌ನ ಕಂಡೊ ಬುಳೆ ಮೂಜಿ ತೂಲ' (ತಗ್ಗಿನ ಗದ್ದೆಯಲ್ಲಿ ಮೂರು ಬೆಳೆ) ಮೊದಲಾದ ಉತ್ತಮ ನೀತಿ ಸಂದೇಶದಿಂದ ಕೂಡಿದ ಕವನ. ಈ ಕವನವನ್ನು ಮಾರಪ್ಪ ಶೆಟ್ಟರು ನಿಧಾನವಾಗಿ ರಾಗದಲ್ಲಿ ಹಾಡುತ್ತಿದ್ದರೆಂದು ಅವರ ಹಿರಿಯ ಮಕ್ಕಳು ಹೇಳುವುದುಂಟು. ಈ ಕವನದಲ್ಲಿರುವ ಐದು ಪದ್ಯಗಳಲ್ಲಿ ಕಡೆಯ ಪದ್ಯ ಕೆಳಗೆ ಕೊಡಲಾಗಿದೆ.

> ಕೇಣ್ಣ ಕೇಣಡ್ ಮಾಂತ ಕೆಬಿರಡ್ಡ್ ಕೊರ್ತೆ
> ಪಣಾದ ಕೇಂಡ್‌ನ ಮಾಂತ ಬಾಯೊಂಜಿ ದೀತೆ
> ತೂಲ ತೋಜಡ್‌ಮಾಂತ ಕಣ್ರಡ್ಡ್ ಕೊರ್ತೆ
> ಪಣಾದ ತೂಯಿನ ಮಾಂತ ಬಾಯೊಂಜಿ ದೀತೆ

'ಕೊರ್ತೆ' ಎಂಬುದರ ಶಬ್ದಾಂಕ್ಯ ಎರಡು ಉಚ್ಚಾರದಿಂದ ಕೂಡಿದೆ. ಈ ರೀತಿಯ ಉಚ್ಚಾರ ತುಳುಭಾಷೆಯ ವೈಶಿಷ್ಟ್ಯ. ತುಳು ನಿಘಂಟಿನಲ್ಲಿಯೂ ಈ ಎರಡು ಉಚ್ಚಾರಗಳನ್ನು ನಮೂದಿಸಿದೆ: (ಹಾಗೆಯೇ ದೀತೆ).

> ಆಯೆ(ದೇವೆರ್) ಕೆಬಿ ರಡ್ಡ್ ಕೊರ್ತೆ, (Third Person)
> ಯಾನ್(ದೇವೆರ್) ಕೆಬಿ ರಡ್ಡ್ ಕೊರ್ತೆ (First Person)

ಗುರುಗಳಾದ ಪಂಜೆಯವರಂತೆ ಮಾರಪ್ಪ ಶೆಟ್ಟರೂ ಕವಿತೆ ಬರೆಯಲು ತೊಡಗುವ ಮೊದಲು ವಿಷಯದ ಕುರಿತು, ರಚನಾಕ್ರಮದ ಕುರಿತು ಕವನದ ಶೀರ್ಷಿಕೆಯ ಕುರಿತು ಸಾಕಷ್ಟು

ಕಾಲ ಚಿಂತನೆಯ ಕಾವುಕೊಟ್ಟು(Incubation) ಅನಂತರವೇ ಕವನದ ರೂಪರೇಷೆ ಮೊಟ್ಟೆಯೊಡೆದು ಹೊರಬರುತ್ತಿದೆ. ಈ ಕವಿತೆಯ ಶೀರ್ಷಿಕೆಯೂ ಹಾಗೆ ಹಲವು ದಿನಗಳ ಚಿಂತನೆಯ ಕಾವಿನಿಂದ ಚಿಪ್ಪೊಡೆದು ಬಂದ 'ಅಕ್ಕರ್ವೊ'.

ಮುಂದಿನ ಕವನವು ಈ ತನಕ ನೋಡಿದ ಕವನಗಳಿಂದಲೂ ಚಿಕ್ಕದಾದ ಕೃತಿಯಾಗಿದೆ. ಕವನದಲ್ಲಿ ವಿಷಯದ ಆಳವಿಲ್ಲದಿದ್ದರೂ ಬಂಧ ನಾವೀನ್ಯತೆಯ ದೃಷ್ಟಿಯಿಂದ ಇತರ ಕವನಗಳಿಂದ ಸಂಪೂರ್ಣ ಭಿನ್ನವಾಗಿದೆ.

ಮೂಜಂಜ ವೊವು ಪನ್ನಗ

ಮೂಜಂಜ ವೊವು ಪನ್ನಗ
ಕೈಕಂಜಿ ಕಿದೆಕ್ ಬನ್ನಗ
ಕಾರಿಗ್ ಪಕ್ಕಿ ಪೋನಗ
ಕೂರಿಡ್ಡ್ ಕುಪುಳು ಬನ್ನಗ
ಪೂಕುಳು ಮೂಡೊ ಪಾಡ್ನಗ
ಜೋಕುಳೆ ಸಾಲೆ ಬುಡ್ನಗ
ಮಟೊತ್ತ ಸಂಕೊ ಕೇನ್ನಗ
ಇಂಗ್ರೇಜಿ ಗಂಟೆ ಆಡ್ನಗ
ಪಳ್ಳಿದ ಬಾಂಗ್ ಕೇನ್ನಗ
ಕುಲೆಕುಳೆದೊಂಬು ದೆಂಗ್ನಗ
ಇರ್‌ಳಕ್ಕೆ ಎದ್ರ್, ಬನ್ನಗ
ಪಗೆಲಣ್ಣೆ ಪೆರ ಪೋನಗ

ಈ ಹನ್ನೆರಡು ಚರಣಗಳಲ್ಲಿ ಅಪೂರ್ಣವಾಗಿರುವ ಮೊದಲ ಚರಣಕ್ಕೇ (ಮುಸ್ಸಂಜೆ ಯಾವುದೆಂದರೆ...) ಉತ್ತರ ರೂಪವಾಗಿ ಉಳಿದ ಹನ್ನೊಂದು ಚರಣಗಳಿವೆ. ಪೂಕುಳು 'ಮೂಡೊ ಪಾಡ್ನಗ' (ಹೂಗಳು ಬಾಡಿ ಬಗ್ಗಿದಾಗ) ಎಂಬುದು ತುಳುವಿನ ನುಡಿಗಟ್ಟು ಮುಸ್ಸಂಜೆಯ ಬಿಸಿಲಿಗೆ 'ಕುಲೆಕುಳೆದೊಂಬು' ಎಂಬ ಹಳೆ ನಂಬಿಕೆ.

ವಿಷ್ಣು ದೇವೆರೆಗ್

(ನಿಂದೆ - ತುತಿ)

ಹೂಗಳೆಲ್ಲವೂ ನಿನಗೆ ಹಾಗೂ ನಿನ್ನವರಿಗೆ - ಪತ್ನಿ ಪದ್ಮಾವತಿ, ಮನ್ಮಥನ ಹೂಬಾಣ, ನಾಭಿಕಮಲ, ಹೂವಿನ ಪಾದರೇಖೆ ಇತ್ಯಾದಿ ಎಲ್ಲವೂ ಹೂಮಯವಾಗಿದ್ದೂ, ಪಾರಿಜಾತ ಕದ್ದ ನಿಂದೆಗೊಳಗಾದ ವಿಷ್ಣುವಿನ ಸ್ತುತಿಯೊಂದಿಗೆ-ನಿಂದೆ-ಎಲ್ಲವೂ ಆತನಿಗೆ ಸಲ್ಲುವುವು.

ಇದನ್ನು 'ಪೊರ್ಲಕಂಟ್' ಕವಿತಾ ಗೊಂಚಲಿಗೆ ಮತ್ತೆ ಸೇರಿಸಿರಬಹುದು.

ಬ. ಅಮಲ್ ದೆಪ್ಪಡೆ

(ತುಳು ಕಬಿತೆಲೆ ಗೊಂಚಿಲ್ - 2)

ನಮ್ಮ ದೇಶ ಭಾರತವು ಸ್ವಾತಂತ್ರ್ಯ ಗಳಿಸುವ ಮೊದಲು 1 ಎಪ್ರಿಲ್ 1935ರ ಇಂಡಿಯಾ ಕೌನ್ಸಿಲು ಶಾಸನದನ್ವಯ ಪ್ರಾಂತೀಯ ಸ್ವಾಯತ್ತತೆ (Provincial Autonomy)ಯನ್ನು ಗಳಿಸಿಕೊಂಡು ಮದ್ರಾಸು ಪ್ರಾಂತ್ಯದಲ್ಲಿ ಶ್ರೀ ಸಿ. ರಾಜಗೋಪಾಲಾಚಾರಿಯವರ ನೇತೃತ್ವದಲ್ಲಿ (1937) ಸರಕಾರ ರಚಿಸಲ್ಪಟ್ಟಿತ್ತಷ್ಟೆ. ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳನ್ನು (Constructive Programme) ಸರಕಾರವು ಅಪ್ರತ್ಯಕ್ಷವಾಗಿ ಮಧ್ಯಪಾನ ನಿರೋಧ (Temperance Propaganda) ಹರಿಜನೋದ್ಧಾರ ಮೊದಲಾದ ಪ್ರಚಾರ ಕಾರ್ಯಕ್ರಮಗಳ ಮೂಲಕ ಪ್ರಾರಂಭಿಸಿತು. ಮದ್ರಾಸು ಪ್ರಾಂತ್ಯದ ಭಾಗವಾಗಿದ್ದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂಲ್ಕಿ ಶ್ರೀ ರಾಮಕೃಷ್ಣ ಪೂಂಜರ ನೇತೃತ್ವದಲ್ಲಿ ನಮ್ಮ ಜಿಲ್ಲಾ ಪ್ರಚಾರ ಕಾರ್ಯಕ್ರಮ ನಿಯೋಜಿಸಲಾದಾಗ ಶ್ರೀ ಮಾರಪ್ಪ ಶೆಟ್ಟರು ಶ್ರೀ ಪೂಂಜರ ಕೈಕೆಳಗೆ ಜಿಲ್ಲಾ ಪ್ರಚಾರಕರಲ್ಲಿ ಒಬ್ಬರಾಗಿ (ಶ್ರೀ ಕೊಳಂಬೆ ಪುಟ್ಟಣ್ಣ ಗೌಡರು, ಶ್ರೀ ಕುತ್ಯಾರು ನಂದ್ಯಪ್ಪ ಶೆಟ್ಟರೂ ಪ್ರಚಾರಕರಾಗಿದ್ದರೆಂದು ನೆನಪು) ಜಿಲ್ಲೆಯಾದ್ಯಂತ ಸಂಚರಿಸಿ ತಾನು ರಚಿಸಿದ - ವೃಂದಗಾನವಾಗಿ ಪ್ರಚಾರ ಮೆರವಣಿಗೆಯಲ್ಲಿ ಹಾಡಬಹುದಾದ-ಹಾಡುಗಳ ಮೂಲಕ, ಭಾಷಣಗಳ ಮೂಲಕ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳ ಪ್ರಚಾರ ಮಾಡುವುದರೊಂದಿಗೆ, ಜನಜಾಗೃತಿ, ರಾಷ್ಟ್ರಪ್ರೇಮ, ಸ್ವಾತಂತ್ರ ಸಂದೇಶವನ್ನೂ ಮಾಡಿದರು.

ಈ ಪ್ರಚಾರ ಕಾರ್ಯಕ್ರಮದ ಪರಿಣಾಮವಾಗಿ ಸ್ವಾತಂತ್ರ್ಯಾಂದೋಲನದೊಟ್ಟಿಗೆ ಶ್ರೀ ಮಾರಪ್ಪ ಶೆಟ್ಟರ ತುಳು ಕವನಗಳು ಜಿಲ್ಲೆಯ ಹಳ್ಳಿಹಳ್ಳಿಗಳಲ್ಲಿ ಜನಜನಿತವಾಗಿತ್ತು. ಈಗಲೂ ಮನೆಮನೆಯ ಹಿರಿಯರು ಶ್ರೀ ಶೆಟ್ಟರ ಹಾಡುಗಳ ಸೊಲ್ಲುಗಳನ್ನು ಹಾಡಿ ತೋರಿಸುವುದುಂಟು. ಇಂತಹ ಕವನಗಳ ಚಿಕ್ಕ 'ಕವನ ಸಂಕಲನ'ವೇ 'ಅಮಲ್ ದೆಪ್ಪಡೆ'.

ಮೊದಲ ಕವನ 'ಅಮಲ್ ದೆಪ್ಪಡೆ'. ಈ ಕವನ ಮೆರವಣಿಗೆಯಲ್ಲಿ ಹಾಡಲು (Marching Song) ಅನುಕೂಲವಾಗುವಂತೆ, ಪ್ರತಿ ಹೆಜ್ಜೆಯೂ, ಹಾಡಿಗೆ ತಾಳವಾಗುವಂತೆ ರಚಿಸಲ್ಪಟ್ಟಿದೆ; ತಿಳಿಯಾದ ತುಳು ಶಬ್ದ, ನುಡಿಗಟ್ಟುಗಳಿಂದ, ಕೇಳುವವರ ಮನವನ್ನು ಬಹುಬೇಗ ಆಕರ್ಷಿಸುತ್ತದೆ.

ಈ ಪದ್ಯದ ಪಲ್ಲವಿಯನ್ನು ಓದಿನೋಡಿ:

ಅಮಲ್ ದೆಪ್ಪಡೆ! । ಓ ।
ಅಕಲ್ ತಪ್ಪಡೆ! ॥ ಪಲ್ಲ ॥

'ಅಮಲು ಪದಾರ್ಥ ಸೇವಿಸಬಾರದು' ಎಂಬುದಕ್ಕೆ ತುಳುವಿನಲ್ಲಿರುವ ಚುಟುಕಾದ ನುಡಿಗಟ್ಟು 'ಅಮಲ್ ದೆಪ್ಪಡೆ' ಹಿಂದಿ ಭಾಷೆಯಲ್ಲಿ सिगरेट पीना ಸಿಗರೇಟ್ ಪೀನಾ (ಸಿಗರೇಟ್ ಸೇದುವುದಕ್ಕೆ ಸಿಗರೇಟ್ ಕುಡಿಯುವುದು ಎಂಬ ಪ್ರಯೋಗವಿದೆ.) ಈ ತುಳು ನುಡಿಗಟ್ಟು ವಿಶಿಷ್ಟವಾಗಿದೆ. 'ಅಕಲ್ ತಪ್ಪಡೆ' ಎಂಬುದೂ ತುಳುವಿನಲ್ಲಿ ಒಂದು ನುಡಿಗಟ್ಟು. ಬುದ್ಧಿ, ಬುದ್ಧಿಶಕ್ತಿ, ಮೆದುಳು ಶಕ್ತಿ ಎಂಬುದಕ್ಕೆಲ್ಲ ತುಳುವಿನ ಪದ 'ಅಕಲ್'.

ಈ ಕವನ ಸುಲಭವಾದ ದ್ವಿಪದಿಗಳಲ್ಲಿದೆ. ಪ್ರತಿ ದ್ವಿಪದಿಯ ಅಂತ್ಯದಲ್ಲಿ ಮೆರವಣಿಗೆಯಲ್ಲಿರುವವರೆಲ್ಲ ಒಕ್ಕೊರೊಲಿನಲ್ಲಿ 'ಅಮಲ್ ದೆಪ್ಪಡೆ । ಓ । ಅಕಲ್ ತಪ್ಪಡೆ । ಎಂಬ ಪಲ್ಲವಿಯನ್ನು ಹಾಡುತ್ತಾರೆ.

ಅಣ್ಣನಕುಲೆ। ಮಾ ।
ಮಣ್ಣನಕುಲೆ। ॥ ಅಮಲ್ ॥

ಮನ್‌ಗಾಯಸೊ - । ಅವು
ವಿಸೋತಪಾಯಸೋ ॥ ಅ... ॥

ಉಸುಲು ಗುಬ್ಬೆಸೋ - । ಅವು
ಅಯೆನ ಅಬ್ಬೆಸೊ ॥ ಅ... ॥

*

ದಿಕ್ಕರಿಪಡೆ। ಪ। ಮ-
ದಕ್ಕರಿಪಡೆ। ॥ ಅ... ॥

ಸೀದ ಸೀತಲಿ-। ನವು
ತಿನ್ಪಿ ಚಿತ್ತಲಿ ॥ ಅ... ॥

ಇದರಲ್ಲಿ ಬರುವ 'ದಿಕ್ಕರಿಪಡೆ' ಮತ್ತು 'ಮದಕ್ಕರಿಪಡೆ' ಹಾಗೂ ಕಡೆಯ ನಾಲ್ಕು ಚರಣಗಳನ್ನು ಗಮನಿಸಿ. ಶುದ್ಧ ತುಳು ಶಬ್ದಗಳನ್ನು ಹುಡುಕಿ ಹುಡಿಕಿ ಸೂಕ್ತವಾದವುಗಳನ್ನು ಉಪಯೋಗಿಸುವ ಜಾಣ್ಮೆ ಶ್ರೀ ಶೆಟ್ಟರದು.

ಅಮಲ್ ಬೂತೊಗೆ

ಇನ್ನೊಂದು ಪ್ರಚಾರ ಕವನ - ಮದ್ಯಪಾನ ನಿಷೇಧದ ಕುರಿತು ಬರೆದುದು. ಪ್ರಶ್ನೆಗೆ ಉತ್ತರ ಶೈಲಿಯಲ್ಲಿ ಬರೆದ, 'ಬೇಂಡ್' ಸಂಗೀತಕ್ಕೆ ತಕ್ಕುದಾದ ಬಿರುಸಂಬಂಧ. ಮೆರವಣಿಗೆಯ ಅರ್ಧದಷ್ಟು ಜನರು ಒಟ್ಟಿಗೆ ಪ್ರಶ್ನೆಯ ದ್ವಿಪದಿಯನ್ನು ಹಾಡಿದರೆ, ಉಳಿದ ಅರ್ಧ ಜನರು ಉತ್ತರ ರೂಪದ ದ್ವಿಪದಿಯನ್ನು ಹಾಡುತ್ತಾ ಸಾಗುವರು.

ಕಳು ಜುಗಾರಿ ಕಳವುಲೆಗ್ । ಈಟ್ ಏರ್‌ಗೆ? ॥	ಕಳಿ ಬಿರಾಂಡಿ ಗಂಗಸರೊ । ಅಮಲ್ ಬೂತೊಗೆ ॥
ಪರ್‌ನಗೊಂಜಿ ಬಿರಿನಗೊಂಜಿ । ಪಣ್ಪುನೇರ್‌ಗೆ? ॥	ಕಲ್ತೆ ಬಯ್ಯ ಗಡಂಗ್‌ಡುಪ್ಪಿ । ಅಮಲ್ ಬೂತೊಗೆ ॥
ಮುಂಡಸ್‌ಡ್‌ದ್ ಮುಟ್ಟುಲೆಗ್ । ಪಾಡ್‌ನೇರ್‌ಗೆ? ॥	ದೊಂಡೆಡ್‌ತ್ತಿ ಮಂಡೆಡ್‌ತ್ತಿ । ಅಮಲ್ ಬೂತೊಗೆ ॥
ಗುತ್ತುಡುದು ಗುತ್ತಿಗೆಗ್ । ಗಿಡತ್‌ನೇರ್‌ಗೆ? ॥	ಒತ್ತಯೊದ ಗುತ್ತಯೊದ । ಅಮಲ್ ಬೂತೊಗೆ ॥
ಮಂತ್‌ರೊನು ತಂತ್‌ರೊನು । ಮರತ್‌ನೇರ್‌ಗೆ? ॥	ಅಮ್ಮಣುರೆಗೆಂಡ್ ಪರ್‌ನ । ಅಮಲ್ ಬೂತೊಗೆ ॥

ಇಲ್ಲಿ ಬರುವ 'ಏರ್‌ಗೆ?' 'ಬೂತೊಗೆ' ಎಂಬಲ್ಲಿಯ '-ಗೆ' ಪ್ರತ್ಯಯ -ಬಹುದು (ಯಾರಾಗಿರಬಹುದು?) ಎಂಬುದಕ್ಕಿಂತಲೂ ನಿಶ್ಚಿತಾರ್ಥದಲ್ಲಿ ತುಳುವಿನಲ್ಲಿ ಉಪಯೋಗಿಸಲ್ಪಡುವುದೆಂಬುದನ್ನು ಈ ಕವನ ದೃಢೀಕರಿಸುತ್ತದೆ. 'ಮುಂಡಸ್‌ಡ್‌ದ್ ಮುಟ್ಟಲೆಗ್', 'ಗುತ್ತುಡುದ್ ಗುತ್ತಿಗೆಗ್' 'ಪರ್‌ನಗೊಂಜಿ ಬಿರಿನಗೊಂಜಿ' 'ಕಲ್ತೆಬಯ್ಯ' ಮೊದಲಾದವುಗಳು ತುಳುವಿನ ಉತ್ತಮ ನುಡಿಗಟ್ಟುಗಳು. 'ಬಿರಿನಗ' ಎಂಬುದು ಭೂತ ಕುಣಿತದಲ್ಲಿ (ನಮ್ಮದು ಭೂತ ದೈವಗಳ ನಾಡು) ಭೂತದ ಆವೇಶವೆಲ್ಲಾ ಮಾಯವಾಗಿ ಭೂತದ ಪಾತ್ರದವನು ತನ್ನಲ್ಲಿ ಆವಿರ್ಭವಿಸಿಕೊಂಡ ಭೂತದಿಂದ ಮುಕ್ತನಾಗಿ ಪುನಃ ಹಿಂದಿನಂತೆ ಸಾಮಾನ್ಯ ಮಾನವನಾಗುವುದಕ್ಕೆ 'ಬಿರಿನಗ' ಎಂಬ ಒಂದೇ ತುಳುಶಬ್ದದ ಪ್ರಯೋಗ ವಿಶಿಷ್ಟವಾದುದು. ಅಂತ್ಯದಲ್ಲಿ 'ಅಮ್ಮಣರೂರು' ದೈವದ ಹೆಸರಿನಲ್ಲಿ ಕುಡಿಯುವ ಮದ್ಯವು ನಮ್ಮಲ್ಲಿರುವ ದೈವಾಂಶವನ್ನೂ ನಾಶಮಾಡುತ್ತದೆ. ಎಂದು ಕವನವು ಅಂತ್ಯವಾಗುತ್ತದೆ.

ದಾಯೆಗಪ್ಪ ಒಯ್ತ್‌ರ್‌ಯೆ ಇಂಚಿ ಸಿಕ್‌ರೆಟ್!

ಯುವಕರನ್ನು ದೃಷ್ಟಿಯಲ್ಲಿಟ್ಟುಕೊಂಡು ಬರೆದ ಇನ್ನೊಂದು ಕವನ. 'ಮೂಂಕು ಮೂರುಂಡು' 'ಕೆಬಿತ ಪೂ ಉಡೆಪ್ಪುಂಡು' 'ಕಪಲೊ ಕಾಯುಂಡು' 'ಅಬರು-ಅವುಸೊ' 'ಚರ್ಬಿ ಜಾರ್‌ಂಡ್' 'ತಿಗಲೆಡ್ ಒಂಜಿ ಕೂಂಜಿ ಆಂಡ್' 'ಕೆಪ್ಪಟೆ-ಅಡೆಸ್‌ಂಡ್' 'ನುಸಲು' 'ಚಯನೊ' 'ವಯೊನೊ' ಇವೇ ಮೊದಲಾದ ನುಡಿಗಟ್ಟುಗಳ, ಪದಗಳ ಉಪಯೋಗ ಒಪ್ಪವಾಗಿದೆ.

ಕಣ್ಣ್‌ಕಂತುಂಡೆಂಕ್ । ಮೂಂಕು ।
ಮೂರುಡೋಪುಂಡು ॥
ದಿನ್ನೊದಿಂಜ ದೀಡಿಲೆಕ್ಕೊ ।
ತರೆಕ್ ಆಪುಂಡು ॥

ಕೆಬಿತ ಪೂವುಡೆಪ್ಪುಂಡೆನ್ನ ।
ಕಪಲೊ ಕಾಯುಂಡು ॥
ಅಬುರು ಅವುಸೊ ಒವುಸೊ ಪೋಂಡು; ।
ಪುಗೆರೆ ಮೇಯಿಂಡ್ ॥

ಬಿಮ್ಮೊ ಉಣ್ಗ್‌ದಾಂಡ್ ಕಪ್ಪು; ।
ಕೆಪ್ಪಡೆs ಡೆಸ್‌ಂಡ್ ॥
ಚರ್ಮೊಡಾಂಡ್ ನೆರಿ; ಜರಿಂಡ್ ।
ಚರ್ಬಿ - ಜಾರ್‌ಂಡ್ ॥

ಒಯಿನ್ ಬೊಡೊ ಆಯಿನ್ ದೆತೊನಿ ।
ದಕ್‌ಡಿ ಸಿಕ್‌ರಟ್!! ॥
ಚಯೊನುಮಳ್ಪಿ ವಯನೊ ಆಯಿಕ್ ।
ಉಪ್ಪಿ ಜೋಕೆಡ್ ॥

ಬಂಗಿನ್ ಪನಿತ್‌ಲ ತಿಂದ್‌ರಡೆ

ಇನ್ನೊಂದು ಅಮಲ್ ಪದಾರ್ಥ 'ಭಂಗಿ' ಇದು ಹೊರಗಿನಿಂದ ಬರುವಂತಹ ವಸ್ತು ಎಂಬುದನ್ನೂ 'ಅಮಲವು ಉಪ್ಪಡ್ ಬಂದರೊಡೆ' ಎಂದು ವಿಷದೀಕರಿಸಿದ್ದಾರೆ.

ಬಂಗಿನ್ ಪನಿತ್‌ಲ ತಿಂದ್‌ರಡೆ ।
ಅಮಲವು ಉಪ್ಪಡ್ ಬಂದರೊಡ ॥
ಜಾತಿನ್ ನೀತಿನ್ ಸೆಟ್ಟವುಂಡು ।
ಮಡಿ ಮಡಿ ಮೈಲೆನ್ ಮರಪವುಂಡು ॥

*

ಬಂಗಿನ್ ಒಯಿತ್‌ಂಡ ನೆಂಪುದ್ದಿ ।
ಪದೆಪುಗು ಪನಿತ್‌ಲ ತಂಪುದ್ದಿ ॥

*

ಎಕಡ್‌ದ ಇತ್ತೆಗ್ ಉಂತುದ್ದಿ ।
ಪೋಡಿಗ್ ಬಂಗಿ ಅಪ್ಪೆಲ್ಲ್ ।
ಬಂಗಿನ್ ಬಯಕುನೆ ಬಜಿ ಚಲ್ಲ್ ॥

ಬಂಗಿದ ಬಾಯಿಗ್ ಬಾಸೆದ್ದಿ ।
ಬಂಗಿದ ಕೈಟ್ ಕಾಸಿದ್ದಿ ॥
ಬಂಗಿನ್ ಒಯಿತ್‌ನ ನನಯಾವು ।
ಬಂಗರ್ ಇತ್ತ್‌ನ ಮಜಿಯಾವು ॥

'ಅಮಲ್ ದೆಪ್ಪಡೆ' ಕವನದ ಗೊಂಚಲಿನಲ್ಲಿ ಕಡೆಯ ಕವನ ನಮ್ಮ ಜಿಲ್ಲೆಯಲ್ಲೇ ಜನಪ್ರಿಯವಾಗಿದ್ದ ಕವನ. ಮಧ್ಯಪಾನ ನಿಷೇಧದ ಜಿಲ್ಲಾ ಪ್ರಚಾರ ಕಾರ್ಯಕ್ರಮದಲ್ಲಿ ಬಹಳಷ್ಟು ಜನಸಾಮಾನ್ಯರ ಬಾಯಿಯಲ್ಲಿ ಬಾಯಿಪಾಠವಾದ ಕವನ. ಈಗಲೂ ವಯಸ್ಸಾದವರು 'ನರ್ಕಳ ಮಾರಪ್ಪ ಶೆಟ್ರು' ಎಂದು ಯಾರಾದರೂ ಹೇಳಿದರೆ "ಪರಡೆ ಕಲಿ ಗಂಗಸರೊ"ತ್ತಾರತ್ತೊ ಎನ್ನುತ್ತಾರೆ.

ಗಂಗಸರೊ, ಗಂಗಸರೊ
ಪರಡೆ ಕಲಿ ಗಂಗಸರೊ

ಮದ್ಯಪಾನ ನಿರೋಧ ಪ್ರಚಾರಕ್ಕೆ ಹೇಳಿ ಬರೆದ ಕವನದಂತಿದೆ 'ಗಂಗಸರೊ, ಗಂಗಸರೊ, ಪರಡೆ ಕಲಿ ಗಂಗಸರೊ'.

'ಗಂಗಸರೊ' ಎಂಬ ಪದದ ವ್ಯುತ್ಪತ್ತಿ ಹೇಗೋ, ಇರಲಿ ಆದರೆ 'ಕಲಿ, ಗಂಗಸರೊ' ಎಲ್ಲ ತುಳುವರಿಗೂ ಗೊತ್ತು. ಮುಖ್ಯವಾಗಿ ತಾಳಿಮರದಿಂದ 'ಕಲಿ' ಗೇರುಹಣ್ಣಿನ 'ಗೋಂಕೆ'ನಿಂದ 'ಗಂಗಸರೊ' ಭಟ್ಟಿ ಇಳಿಸಿ ತೆಗೆಯುತ್ತಾರೆ. ಗೋವಾದಲ್ಲಿ ಇದಕ್ಕೆ 'ಫೇನಿ' ಎನ್ನುವರು. ತಾಳಿಮರದ ಬುಡಕ್ಕೇ ಹೋಗಿ ಕಾದುಕುಳಿತು, ಮರದಿಂದ 'ಕಲಿ' ಇಳಿಸಿಕೊಂಡು ಬರುವವನನ್ನೇ ಕಾದು

ಒಂದು 'ಕುಜಿಲಿ' ತಾಜಾ 'ಕಲಿ' ಕುಡಿಯುವ ಅಭ್ಯಾಸವೇ ಹಲವರಿಗಿತ್ತು. 'ಕಲಿ'ಗಿಂತಲೂ ಹೆಚ್ಚು ಅಮಲು ಬರಿಸುವ ಮದ್ಯ 'ಗಂಗಸರೊ', ಈ ಎರಡು ತರದ ಮದ್ಯಪಾನವೇ ನಮ್ಮ ಜಿಲ್ಲೆಯ ಬಹುತೇಕ ಜನರ ಜೀವನವನ್ನು ಹಾಳು ಮಾಡಲು ಮುಖ್ಯ ಕಾರಣವೆಂದರೆ ಆಶ್ಚರ್ಯವೇನಿಲ್ಲ.

ಗಂಗಸರೋ! ಗಂಗಸರೋ!
ಪರಡೆ ಕಲಿ! ಗಂಗಸರೊ! ॥ ಪಲ್ಲವಿ ॥

ಈ ಪದ್ಯವನ್ನೂ, ಮೆರವಣಿಗೆಯಲ್ಲಿ ಹೋಗುವ ಎರಡು ಗುಂಪುಗಳಲ್ಲಿ ಒಂದು ಗುಂಪು ಪಲ್ಲವಿಯನ್ನು ಪ್ರತಿ ದ್ವಿಪದಿಯ ಅಂತ್ಯದಲ್ಲೂ, ಇನ್ನೊಂದು ಗುಂಪು ದ್ವಿಪದಿಯ ಸಾಲುಗಳನ್ನೂ ಸುಲಭವಾಗಿ ಪ್ರಾಸಬದ್ಧವಾಗಿ, ತಾಳಬದ್ಧವಾಗಿ ಹಾಡಲು 'ಹೇಳಿ ಬರೆದಂತಿದೆ'.

ಗಂಗಸರೊ ಗಂಗಸರೊ!
ಪರಡೆ ಕಲಿ! ಗಂಗಸರೊ

ಕೆಬಿತ್ತ್ ಮುರು ದೆತ್ತ್‌ದ್ ಕೊರು ।	ಗಂಗಸರೊ! ಗಂಗಸರೊ!
ಪರ್ಂಡ ಕಲಿ। ಗಂಗಸರೊ ॥	ಪರಡೆ ಕಲಿ! ಗಂಗಸರೊ!
ಕಿದೆತ್ತ್ ಎರು ಗಿರ್‌ತ್ ಕೊರು ।	ಗಂಗಸರೊ! ಗಂಗಸರೊ!
ಪರ್ಂಡ ಕಲಿ! ಗಂಗಸರೊ ॥	ಪರಡೆ ಕಲಿ! ಗಂಗಸರೊ!
ಅಟ್ಟೊದ ಬಿತ್ತ್ ದೆತ್ತ್‌ದ್ ಕೊರು ।	ಗಂಗಸರೊ! ಗಂಗಸರೊ!
ಪರ್ಂಡ ಕಲಿ! ಗಂಗಸರೊ ॥	ಪರಡೆ ಕಲಿ! ಗಂಗಸರೊ!
ಇಲ್ಲ್ ಬದ್‌ಕ್ ಮಾರ್ ತಿಂಬು	ಗಂಗಸರೊ! ಗಂಗಸರೊ!
ಪರ್ಂಡ ಕಲಿ! ಗಂಗಸರೊ ॥	ಪರಡೆ ಕಲಿ! ಗಂಗಸರೊ!
ಚಿಪ್ಪೊ ಕೋಲೊ ಕೊರುದು ಬುಡು	ಗಂಗಸರೊ! ಗಂಗಸರೊ!
ಪರ್ಂಡ ಕಲಿ! ಗಂಗಸರೊ ॥	ಪರಡೆ ಕಲಿ! ಗಂಗಸರೊ!
ಅಬುರು ದೆಪ್ಪು! ಅಕಲ್ ತಪ್ಪು ।	ಗಂಗಸರೊ! ಗಂಗಸರೊ!
ಪರ್ಂಡ ಕಲಿ! ಗಂಗಸರೊ ॥	ಪರಡೆ ಕಲಿ! ಗಂಗಸರೊ!
ನೋಪ್‌ನೆರು! ಮಾನ್ಯಕೆರು ।	ಗಂಗಸರೊ! ಗಂಗಸರೊ!
ಪರ್ಂಡ ಕಲಿ! ಗಂಗಸರೊ ॥	ಪರಡೆ ಕಲಿ! ಗಂಗಸರೊ!
ಒಪ್ಪೊ ಪುಟ್ಟಿ ಒರುತೂವಂದ್ ।	ಗಂಗಸರೊ! ಗಂಗಸರೊ!
ಪರ್ಂಡ ಕಲಿ! ಗಂಗಸರೊ ॥	ಪರಡೆ ಕಲಿ! ಗಂಗಸರೊ!
ಸಾಂಕಿ ಸಮ್ಮಲೆ ಗುರುತು ಇದ್ದಿ ।	ಗಂಗಸರೊ! ಗಂಗಸರೊ!
ಪರ್ಂಡ ಕಲಿ! ಗಂಗಸರೊ ॥	ಪರಡೆ ಕಲಿ! ಗಂಗಸರೊ!
ಬರವು ಸರವು ಗಿಡ್ಡುರವು	ಗಂಗಸರೊ! ಗಂಗಸರೊ!
ಪರ್ಂಡ ಕಲಿ! ಗಂಗಸರೊ ॥	ಪರಡೆ ಕಲಿ! ಗಂಗಸರೊ!

ನ್ಯಾಯೊದ ಕಣ್ಣ್ ಕಡ್‌ತ್‌ದಕ್ಕು — ಗಂಗಸರೊ! ಗಂಗಸರೊ!
ಪರ್‌ಂಡ ಕಲಿ! ಗಂಗಸರೊ ॥ — ಪರಡೆ ಕಲಿ! ಗಂಗಸರೊ!

ನೀತಿದ ಕೊಡಿ ಕೊಯಿದ್ ಬುಡು — ಗಂಗಸರೊ! ಗಂಗಸರೊ!
ಪರ್‌ಂಡ ಕಲಿ! ಗಂಗಸರೊ ॥ — ಪರಡೆ ಕಲಿ! ಗಂಗಸರೊ!

ಸತ್ಯೊದ ಮುದೆಲ್ ಮೂರ್ದ್‌ಬುಡು — ಗಂಗಸರೊ! ಗಂಗಸರೊ!
ಪರ್‌ಂಡ ಕಲಿ! ಗಂಗಸರೊ ॥ — ಪರಡೆ ಕಲಿ! ಗಂಗಸರೊ!

ಜಪೊದ ಕಣ್ಣ್ ಮೂಂಕುದೆಪ್ಪು — ಗಂಗಸರೊ! ಗಂಗಸರೊ!
ಪರ್‌ಂಡ ಕಲಿ! ಗಂಗಸರೊ ॥ — ಪರಡೆ ಕಲಿ! ಗಂಗಸರೊ!

ತಪಸ್‌ದ ಕೈ ಕಾರ್‌ಕಡ್‌ಪು — ಗಂಗಸರೊ! ಗಂಗಸರೊ!
ಪರ್‌ಂಡ ಕಲಿ! ಗಂಗಸರೊ ॥ — ಪರಡೆ ಕಲಿ! ಗಂಗಸರೊ!

ರುತೊತ್ತ ಬಂಜಿ ಬಾಯಿನೋಪು — ಗಂಗಸರೊ! ಗಂಗಸರೊ!
ಪರ್‌ಂಡ ಕಲಿ! ಗಂಗಸರೊ ॥ — ಪರಡೆ ಕಲಿ! ಗಂಗಸರೊ!

ತತ್ವೊದ ಜೀವೊನು ಕುದುಪ್ಪು — ಗಂಗಸರೊ! ಗಂಗಸರೊ!
ಪರ್‌ಂಡ ಕಲಿ! ಗಂಗಸರೊ ॥ — ಪರಡೆ ಕಲಿ! ಗಂಗಸರೊ!

ಇಲ್ಲಿ ಉಪಯೋಗಿಸಿದ 'ಕೆಬಿತಮುರು' 'ಮಾನ್ಯಕೆರು' 'ಚಿಪ್ಪ್ಯೊ ಕೋಲೊ' 'ಒಪ್ಪ್ಯೊ ಪುಟ್ಟಿ' ಮೊದಲಾದವುಗಳು ಅಚ್ಚ ತುಳು ಶಬ್ದ ನುಡಿಗಟ್ಟುಗಳು, ಜೀವಂತವಾದವುಗಳು.

ತುಳುಸಾಹಿತ್ಯದಲ್ಲಿ ಪ್ರಚಾರ ಮಾಧ್ಯಮದ ಕವನಗಳಾಗಿ, ಇಂದಿಗೂ ನಿರ್ಮೂಲನವಾಗದ ಮದ್ಯಪಾನ ದುರಾಭ್ಯಾಸದ ಈ ಕಾಲದಲ್ಲೂ ಪ್ರತಿ ತುಳುವನ ಕಿವಿಯಲ್ಲೂ ಗುಂಯ್‌ಗುಟ್ಟುವಂತೆ ಎಚ್ಚರಿಸುವ ಕವನಗಳಿವು. 'ಪೊರ್ಲಕಂಟ್' ಮತ್ತು 'ಅಮಲ್‌ದೆಪ್ಪಡೆ' ಎಂಬ ಈ ಎರಡು ಕಿರು ಕವನ ಗೊಂಚಲುಗಳು ಎರಡು ಪ್ರತ್ಯೇಕ ಹೊತ್ತಿಗೆಗಳಾಗಿ ವಿಟ್ಲದಿಂದ ಮೊತ್ತಮೊದಲು ಪ್ರಕಟಿಸಲ್ಪಟ್ಟುವು. ಮುಂದೆ 'ತುಳು ಸಮ್ಮೇಳನ' ಸಂದರ್ಭಕ್ಕಾಗುವಾಗ ಹಿಂದೆ ಹೇಳಿದಂತೆ ಎರಡನ್ನೂ ಒಟ್ಟಾಗಿ ಮುದ್ರಿಸಿ ಪ್ರಕಟಿಸಲಾಯಿತು. ತುಳು ಸಾಹಿತ್ಯ, ತುಳುನಾಡು, ತುಳುಜನರು ಇರುವ ತನಕ ಈ ಎರಡು ಕವನ ಗೊಂಚಲುಗಳು ಕಿರಿದಾಗಿದ್ದರೂ ಹಿರಿದಾಗಿ ಮೆರೆಯಲಿ!

ಶ್ರೀ ನರ್ಕಳ ಮಾರಪ್ಪ ಶೆಟ್ಟರ ತೌಳವ ಸೇವೆ ತುಳು ಸಾಹಿತ್ಯಕ್ಕೇ ಮೀಸಲಾಗಿಲ್ಲ. ತುಳು ಸಂಸ್ಕೃತಿಯ ವೈಶಿಷ್ಟ್ಯಗಳಾದ 'ಕಂಬಳ' ಯಕ್ಷಗಾನ'ಗಳ ಕುರಿತು ಕನ್ನಡದಲ್ಲಿ ಉತ್ತಮ ಕೃತಿಗಳನ್ನು ರಚಿಸಿ, ತುಳುಭಾಷೆಯ, ತುಳುಸಂಸ್ಕೃತಿಯ ಒರೆಗಲ್ಲುಗಳಲ್ಲೊಂದಾದ ಹಳ್ಳಿಪಳ್ಳಿಗಳ ಸ್ಥಳ ನಾಮಗಳು ಅನಾದಿ ಕಾಲದಿಂದಲೂ ಅಸ್ತಿತ್ವದಲ್ಲಿರುವ ತುಳುನಾಡಿನ ವಿಸ್ತೀರ್ಣ ಮೇರೆಗಳನ್ನೂ ಶ್ರುತಪಡಿಸುವ ಚಾರಿತ್ರಿಕ ಸತ್ಯವೆಂಬುದನ್ನು ಸಂಶೋಧನಾವಿವೇಚನೆಯಿಂದ ರುಜುಪಡಿಸುದುದು ಮಾತ್ರವಲ್ಲದೆ 'ಮಹಾಜನ ಆಯೋಗ'ದ ಇದಿರು ಸಮರ್ಥಿಸಿ ಆಧಾರ ಸಹಿತ ಸಾಕ್ಷ್ಯ ಕೂಡಾ ನೀಡಿದುದಲ್ಲದೆ, ತುಳು ಶಬ್ದದ ಮೂಲ, ತುಳುನಾಡಿನ ಮೂಲಗಳ ಬಗ್ಗೆ ತನ್ನದೇ ಆದ ಸಂಶೋಧನಾ ಅಭಿಪ್ರಾಯವನ್ನು ಬರೆದು ದಾಖಲಿಸಿದ್ದಾರೆಂಬ ವಿವರಗಳು ಮುಂದೆ ಕೊಡಲ್ಪಟ್ಟಿವೆ.

೨. ಕನ್ನಡ ಸಾಹಿತ್ಯ

ತುಳು ಸಾಹಿತ್ಯಕ್ಕೆ ತನ್ನದೇ ಆದ ವಿಶಿಷ್ಟ ಕೊಡುಗೆಯನ್ನಿತ್ತ ಶ್ರೀ ಮಾರಪ್ಪ ಶೆಟ್ಟರು ಕನ್ನಡ ಸಾಹಿತ್ಯಕ್ಕೆ ಒಪ್ಪಿಸಿದ ಕಾಣಿಕೆ ಸಿಂಗಾರ ಹೂವಿನ ಒಂದು ಎಳೆಯಂತೆ ಕನ್ನಡ ದೇವಿಯ ರತ್ನ ಕಿರೀಟದ ಎಡೆಯಲ್ಲಿ ಕಂಡೂಕಾಣದಂತೆ ಬಾಡಿಹೋಯಿತು. ಮಧ್ಯಪ್ರಾಚೀನದ ರತ್ನಾಕರ ವರ್ಣಿ, ಆಧುನಿಕ ಕಾಲದ ಮುಳಿಯ, ಕಡೆಂಗೋಡ್ಲು, ಸೇಡಿಯಾಪು, ಕಯ್ಯಾರರು ನಮ್ಮ ಕಡಲು ತೀರದ ಕಾವ್ಯ ಸ್ತಂಭಗಳಂತಿದ್ದರೆ ಶ್ರೀ ಮಾರಪ್ಪ ಶೆಟ್ಟರು ಆ ಕಂಬಗಳಡಿಯ ಒಡಿಮಣ್ಣಾಗಿ ಕರಗಿ ಹೋಗಿದ್ದಾರೆ. 'ಅಯ್ಯಯ್ಯಾ ಎಂಚ ಪೊರ್ಲಾಂಡೆಂದು ತುಳುವರು, ರಯ್ಯಾಮಂಚಿದಿಯೆನೆ ತೆಲುಗ, ಮೈಯುಬ್ಬಿ' ಕೇಳುವ ಕವನವನ್ನು ಶ್ರೀ ಶೆಟ್ಟರು ಬರೆಯಲಿಲ್ಲ. ಆದರೆ ನಮ್ಮ ಕಡಲ ಕರೆ ನಾಡಿನ ತುಳು-ಕನ್ನಡಿಗರು ಎರಡೆರಡು ಸಲ ಬೇಯಿಸಿದ ಪಕ್ವವಾದ ಅಕ್ಕಿಯ ಅನ್ನದೂಟದ ಒಂದು ಅಗಳಾಗಿ, ಉಣಬಡಿಸಿ, ಕಣ್ಮರೆಯಾದರು.

ಬಾಸೆಲ್‌ಮಿಶನ್ ಸಂಸ್ಥೆಯವರು ಪ್ರಕಟಿಸಿದ ಮೆಕ್ಮಿಲನ್ ಕನ್ನಡ ಪಾಠ ಪುಸ್ತಕಾವಳಿಯ ಹಿರಿಯ ಪ್ರಾಥಮಿಕ ತರಗತಿಯ ಪಾಠ ಪುಸ್ತಕದಲ್ಲಿ ಶ್ರೀ ಶೆಟ್ಟರು ಬರೆದ ಸುದೀರ್ಘ ಕವನ 'ಮಂಜಟ್ಟಿಕೋಣ'ದ ಹೂರಣದಂತಿರುವ ನಡುಭಾಗ ಪ್ರಕಟವಾಗಿದೆ. ಬಡಕಬೈಲು ಪರಮೇಶ್ವರಯ್ಯನವರ 'ಗಾಡಿ ಎತ್ತಿನ ಗೋಳು' ಶ್ರೀ ಪಂಜೆಯವರ 'ಹಾವಿನ ಹಾಡು' ಮೊದಲಾದ ಕವನಗಳೂ ಈ ಪುಸ್ತಕಾವಳಿಯಲ್ಲಿ ಪ್ರಕಟವಾಗಿವೆ. ಈ ಪಾಠ ಪುಸ್ತಕದಲ್ಲಿ ಪ್ರಕಟವಾದ 'ಮಂಜಟ್ಟಿ ಕೋಣ'ದ ಭಾಗ "ಬಿಳಿಯ ಮಚ್ಚೆಯ ಬಾಲದಲಿ ಬಲ ಸುಳಿಯು ಸುತ್ತಿದ ಭುಜದಲಿ..' ಎಂಬ ವರ್ಣನೆಯಿಂದ ಪ್ರಾರಂಭವಾಗುತ್ತದೆ.

ಇಲ್ಲಿ ಬರುವ 'ಮಂಜಟ್ಟಿ' ಎಂಬ ಶಬ್ದದ ಬಗ್ಗೆ 'ಶಾಖಾಚ್ಛಂಕ್ರಮಣ ನ್ಯಾಯ'ದಂತೆ ಕ್ಷಮೆ ಕೋರಿ ಎರಡು ಮಾತು.

ಶ್ರೀ ಎಚ್. ಎಲ್. ನಾಗೇಗೌಡರು, I.A.S., ನಮ್ಮ ಜಿಲ್ಲಾಧಿಕಾರಿಯಾಗಿದ್ದ ಕಾಲ. ಕರ್ಮ ಧರ್ಮ ಸಂಯೋಗವೇ ಎಂಬಂತೆ ಮಾರಪ್ಪ ಶೆಟ್ಟರೂ, ನಾಗೇಗೌಡರು ಆತ್ಮೀಯರಾದರು. ತುಳುನಾಡಿನ ಸ್ಥಳನಾಮಗಳು, ತುಳುನಾಡಿನ ಮೂಲದ ಕುರಿತು ಶ್ರೀ ಶೆಟ್ಟರಿಗಿದ್ದ ತಮ್ಮದೇ ಆದ ನಿಶ್ಚಿತಾಭಿಪ್ರಾಯ ಆಸಕ್ತಿಯನ್ನು ಸಂಶೋಧನಾತ್ಮಕವಾಗಿ ಕೆರಳಿಸಿತು. ಅಚ್ಚ ದ್ರಾವಿಡ ಪದ 'ನೀರ್', ನಮ್ಮ ತುಳುನಾಡಿನ 'ಆರ್' ಪದ, ನೀರಿನಾಶ್ರಯದ 'ಮೊಗೇರ್', 'ಮಿತ್ತಮೊಗೇರ್', 'ತಿರ್ತ ಮೊಗೇರ್', 'ಬಾಯಾರ್', 'ಕೈಯ್ಯಾರ್', 'ಉಬಾರ್' ಹೀಗೆ ಚರ್ಚಿತ ವಿಷಯಗಳು ಗೌಡರಲ್ಲಿ ಶೆಟ್ಟರ ಸಂಶೋಧನಾತ್ಮಕ ಬುದ್ಧಿ ಶಕ್ತಿಯನ್ನು ಮೆಚ್ಚುವಂತೆ ಮಾಡಿತು. ಮೂಲ ತುಳುಭಾಷೆ, ಮೇಲ್ವರ್ಗದ ಸಮಾಜದವರಲ್ಲಿ ಬದಲಾವಣೆಯಾಗಿ ಎರಡ್ (ಎರಡು) ಬೋತ್ರಿ (ಬೊಡ್ಚಿ) ಅಶನೊಂಕು (ಅನ್ನ-ಊಟಕ್ಕೆ), ತ್ರಿಶೆಂಕ್ (ಆಸರ್‌ಗೆ-ಬಾಯಾರಿಕೆಗೆ) ಆದುದರ ಬಗ್ಗೆ, 'ಕಂದಾರ್' ಹೇಗೆ 'ಸ್ಕಂದಾವರ' ಕಂದಾವರವಾಯಿತು, ಒಡಿಪು-ಉಡುಪ-ಉಡುಪಿ, ಬೆದ್ರ-ಬಿದಿರೆ-ಹೀಗೆ ಸಂಜೆ ಹೊತ್ತಿನ ಅವರಿಬ್ಬರ ಮಾತುಕತೆಯಲ್ಲಿ 'ಮಂಜಟ್ಟಿ' ಎಂಬ ಶಬ್ದದ ಸರಿಯಾದ ಅರ್ಥ ವಿವರಣೆ ಸೇರಿತ್ತು. ಶ್ರೀ ನಾಗೇಗೌಡರು ನಮ್ಮ ಕರಾವಳಿಯ ಸಂಸ್ಕೃತಿ ವೈಶಿಷ್ಟ್ಯಗಳಿಂದ ಕೂಡಿದ ಸುಂದರ, ಕವನವನ್ನು 'ನವಭಾರತ' ದಿನಪತ್ರಿಕೆಯಲ್ಲಿ ಪ್ರಕಟಿಸಿದರು. ಈ ಕವನದಲ್ಲಿ ಇಲ್ಲಿಯ

ಬೆಸ್ತರ ಹೆಣ್ಣುಗಳ ಬಳುಕುವ ನಡಿಗೆ, ಬಡನಡುವಿನ ವರ್ಣನೆಯೂ ಸೇರಿತ್ತು. ಮುಂದಿನ 'ನವಭಾರತ'ದಲ್ಲಿ ವಿದ್ವಾನ್ ಶ್ರೀ ತೆಕ್ಕುಂಜೆ ಗೋಪಾಲಕೃಷ್ಣ ಭಟ್ಟರ 'ಹದ್ದಿನ ಕಣ್ಣು' ವಿಮರ್ಶಾಲೇಖನ ಶ್ರೀ ಗೌಡರ ಕವನಕ್ಕೆ ಟೀಕಾಸ್ತ್ರವಾಗಿ ಪ್ರಕಟಿಸಲ್ಪಟ್ಟು ಅವರಿಬ್ಬರ ವಿರಸಕ್ಕೆ ಕಾರಣವಾಯಿತು. ಶ್ರೀ ಅ. ಬಾಲಕೃಷ್ಣ ಪೊಳಲಿಯವರು ನರ್ಕಳ ಮಾರಪ್ಪ ಶೆಟ್ಟರ ಕುರಿತು ಬರೆದ ಲೇಖನದಲ್ಲಿ (ಮುಂದೆ 'ಮರೆಯಲಾರದ ಮಹನೀಯರು' ಎಂಬ ಪುಸ್ತಕದಲ್ಲಿ ಪ್ರಕಟ) "ಇಬ್ಬರಲ್ಲೂ ಮಾರಪ್ಪ ಶೆಟ್ಟರಿಗೆ ಸ್ನೇಹ. ಅವರಿಬ್ಬರನ್ನೂ...ಬಿಸಿಗೆ ತಣ್ಣೀರು ಎರೆಯುವ ಬಯಕೆಯಿಂದ ಅವರ ಪಟ್ಟ ಪ್ರಯತ್ನ ಅಸಾಮಾನ್ಯ. ಆ ಕೆಲಸದಲ್ಲಿ ಜಯವಾಗದಿದ್ದರೂ ಅವರ ಅಂತಃಕರಣದ ಕಳಕಳಿಯನ್ನರಿತ ಇಬ್ಬರೂ ಇವರನ್ನು ಆಪ್ತರಾಗಿಯೇ ಅನಂತರವೂ ನಡೆಸಿಕೊಂಡುದು ಇವರ ಸ್ನೇಹಶೀಲತೆಗೆ ದೊರೆತ ಜಯ" ಎಂದು ಬರೆದಿದ್ದಾರೆ.

ದಿ। ನರ್ಕಳ ಮಾರಪ್ಪ ಶೆಟ್ಟರ ಎರಡನೇ ಮಗ ನರ್ಕಳ ರಘುನಾಥ ಶೆಟ್ಟರು ಶಿಕ್ಷಕ ರಾಷ್ಟ್ರ ಪ್ರಶಸ್ತಿಯನ್ನು ಪಡೆದು (1989) ಬೆಂಗಳೂರಿನ ಹೆಬ್ಬಾಳ ಕೇಂದ್ರೀಯ ವಿದ್ಯಾಲಯದಲ್ಲಿ ಪ್ರಾಂಶುಪಾಲರಾಗಿದ್ದಾಗ ಶ್ರೀ ನಾಗೇಗೌಡರನ್ನು ಗೌರವಾದರಗಳಿಂದ "ಅಖಿಲ ಭಾರತ ಕೇಂದ್ರೀಯ ವಿದ್ಯಾಲಯಗಳಲ್ಲಿ ಸಂಗೀತ ಶಿಕ್ಷಣ ಸುಧಾರಣೆ"ಯ ಕುರಿತು ತನ್ನ ಕೇಂದ್ರೀಯ ವಿದ್ಯಾಲಯದಲ್ಲಿ ಏರ್ಪಡಿಸಿದ ಅಖಿಲ ಭಾರತ ಕೇ. ವಿ. ಸಂಗೀತ ಶಿಕ್ಷಕರ ಕಮ್ಮಟದಲ್ಲಿ ಜಾನಪದ ಗೀತೆಗಳ ಬಗ್ಗೆ ಜಾನಪದ ಗೀತೆಗಳ ಕ್ಯಾಸೆಟ್ ಪ್ರಾತ್ಯಕ್ಷತೆಗಳೊಂದಿಗೆ, ಭಾಷಣ ಮಾಡಲು ಆಮಂತ್ರಿಸಿದ ಸಂದರ್ಭದಲ್ಲಿ ಶ್ರೀ ನಾಗೇ ಗೌಡರ ಹಾಗೂ ರಘುನಾಥ ಶೆಟ್ಟರ ತಂದೆಯವರಾದ ಮಾರಪ್ಪ ಶೆಟ್ಟರ ಸ್ನೇಹ ಸಂಚಯ ಮರುಕಳಿಸಿ, ರಘುನಾಥ ಶೆಟ್ಟರೊಡನೆ 'ಮಂಜಟ್ಟಿ' ಪದದ ಅರ್ಥ ನಿಮಗೂ ಗೊತ್ತಿದೆಯೆ?' ಎಂದು ನೇರವಾಗಿ ಕೇಳಿ ರಘುನಾಥ ಶೆಟ್ಟರನ್ನು ತಬ್ಬಿಬ್ಬಾಗಿಸಿದರು.

(ವಿಷಯ ಅಪ್ರಸ್ತುತವಾದುದಕ್ಕೆ ಕ್ಷಮೆಯಿರಲಿ)

ಮಂಜಟ್ಟಿ ಕೋಣ

ಕೊಳನಾಡಿನ ಮಂಜಣ್ಣಾಳ್ವರ ನಾಮಾಂಕಿತದಲ್ಲಿ, ತುಳುನಾಡಿನ ಕಂಬಳ, ಕಂಬಳದ ಕೋಣಕ್ಕಾಗಿ ದೂರದ ಜಾನುವಾರು ಜಾತ್ರೆಗೆ ಪಯಣ, ಕೋಣನ ಪರೀಕ್ಷೆ, ಖರೀದಿ, ಕೋಣಗಳ ಸಾಕಣೆ, ಕಂಬಳ ಸ್ಪರ್ಧೆ ಮೊದಲಾದ ವಿವರಗಳಿಂದ ಕೂಡಿದ 'ಮಂಜಟ್ಟಿ ಕೋಣ' "ತುಳು ಮಣ್ಣಿನ ವಾಸನೆಯಿಂದ 'ಕರ್ನಾಟಕ ಕೇಸರಿ'ಯಲ್ಲಿ ಪ್ರಕಟಗೊಂಡು, ವಿದ್ವಾಂಸರಿಂದ ಮೆಚ್ಚುಗೆ ಗಳಿಸಿತು" (ಅ. ಬಾ. ಪೊಳಲಿ) 'ಮಂಜಟ್ಟಿ ಕೋಣ'ವು ಕನ್ನಡಸಾಹಿತ್ಯಕ್ಕೆ ತುಳುನಾಡಿನ ವಿಶಿಷ್ಟ ಕಾಣಿಕೆಯೆಂದು ನಿಸ್ಸಂದೇಹವಾಗಿ ಹೇಳಬಹುದು.

ಹತ್ತುಗುತ್ತಿನ ಮಂಜಣ್ಣಾಳ್ವರ ಬೀಡಿನ ವರ್ಣನೆಯಿಂದ ಕವನ ಪ್ರಾರಂಭವಾಗುತ್ತದೆ:

ಹೃದಯ ಕಮಲದ ಹಾಗೆ ಎದೆಗಾ ।
'ಯೆದಿಗೆ' ಜೇನಿನ ಮುರೆಲಿವೋಲ್ ॥
ಚದರ ಚೌಕಕೆ ತೌಳವದ ಮ ।
ಧ್ಯದಲಿ ಕೊಳನಾಡೊಪ್ಪಿತು ॥

ಆಳುವರ ಹೊರತಾಗಿ ಇಳಿಯದು ।
ಓಲಸಾರಿಯು ಭೂತವ ॥
ಡೋಲು ಹಂದದು ಗುಡಿಗಿಡಿಯದೇ ।
ವಾಲಯದ ಬಲಿ ಹೊರಡದು ॥

ಆಳ್ವರೊಡನಿದ್ದ 'ಕಾಳ'ನಿಗೆ ಜತೆಯನ್ನೊದಗಿಸಲು 'ಬೊಳ್ಳ'ನಿಗಾಗಿ, ಸುಬ್ರಹ್ಮಣ್ಯದ ಕುಳುಕುಂದ ಜಾನುವಾರು ಜಾತ್ರೆಗೆ ಪಯಣ:

ಕಲ್ಲ ಬಸವಗೆ ಕೈಯ ಮುಗಿದರು ।　　　[ಕಲ್ಲೆಗ,
ಕಲ್ಲೆಗಕೆ ಕಾಲಿಟ್ಟರು ॥　　　ಸುಳ್ಯ
ಸುಳ್ಯ-ಮಾರ್ಗವ ಬಿಟ್ಟರು, ಬಿದಿ ।　　　ಬಿದಿರಹಳ್ಳ
ರ್ಹಳ್ಳದಾಟಿದರಾಳ್ವರು ॥　　　ಕಾಣೆಯೂರು
ಕಾಣೆಯೂರಿನ ಮಠವ ಕಳೆದರು ।　　　ಕೈಕಂಬ
ಕಾಣಿಕೆಯ ಕೈವರ್ತಿಸಿ ॥　　　ನೆತ್ತಿಕಲ್ಲು
ಕಾಣಿಸಲು ಕೈಕಂಬ ನೆತ್ತಿಕ ।　　　ಎಣ್ಮೂರು
ಲ್ಲೆಣ್ಮೂರನ್ನಿಳಿದರು ॥　　　ಭೋಗಾಯನ ಕೆರೆ
ಸ್ನಾನಕೆ ಭೋಗಾಯನಕೆರೆ ।　　　ಏಣೆಕಲ್ಲು
ಮೌನಕೆ ಹೊಳೆ ಏಣೆಕಲ್ ॥　　　ಆನೆ ಬಾಗಿಲು]
ಆನೆಬಾಗಿಲೊಳಾಗಿದೇವ ।
ಸ್ನಾನಕೆ, ಮಧ್ಯಾಹ್ನಕೆ ॥

ಮಧ್ಯಾಹ್ನ ದೇವರ ದರ್ಶನ ಪಡೆದು, ಕುಳುಕುಂದ ಜಾನುವಾರಗಳ ದರ್ಶನ:

ಕಂದಿ, ಕರು, ಕಡಸೆತ್ತು, ಹೋರಿಗ
ಳಿಂದ ಗೋಕುಲವಿವಿಧಡಿ
ನಂದ ಗೋಕುಲವೆಂದೆ ಆ 'ಕುಲ*　　　*ಕುಳುಕಂದ
ಗುಂದ' ಜನಮನಕಾಯಿತು.

ಮಹಿಷ ಮರ್ದಿನಿ ಶಾಂತಿ ಕಳೆದುರೆ ಮಹಿಷ ವರ್ಧಿನಿಯಾದಳು ಇಲ್ಲಿ

ಬಾಯಿ ಬಿಡಿಸುವ ಬಗ್ಗಿನೋಳ್ಪವಿ ।
ಡಾಯಿಯಿಂ ಲಡಾಯಿಯಿಂ

*

ಒಂದು ಹತ್ತಿ ನೋಡಿ ಎತ್ತರ ।
ಒಂದು ಕೈಯಲಿ ಸೊಂಟದ ॥
ನಿಂದು ಗೇಣನು ಹಾಕುವಾ ಜನ ।
ರಿಂದಲೀ ಮಜಲೊಪ್ಪಿತು ॥

'ಗೊರಸು ನೋಡತ; ಶಿರಸು ನೋಡುತ....ನೋಟಕಿದ್ದರೆ ಓಟಕಿಲ್ಲ... ಕಡೆಗೊಮ್ಮೆ ಆಳ್ವರ ಕಣ್ಣಿಗೆ ಬಿದ್ದಿತೊಂದು ಕೋಣನ ಮರಿ:

ಬಿಳಿಯ ಮಚ್ಚೆಯ ಬಾಲದಲಿ ಬಲ ।
ಸುಳಿಯು ಸುತ್ತಿದ ಭುಜದಲಿ ॥
ಹೊಳೆವದಲೆ ಏಳನೀರು ಗಂಗಳ ।
ಚೆಲುವ ಚೆಂದುಟಿಯಿಂದಲಿ ॥

ಮರಿತಿಮಿಂಗಲದಂತೆ ಮೀಂಗಳ ।
ನೆರವಿನಲಿ ಮಹಿಷಂಗಳ ॥
ಮರಿ ವಿರಾಜಿಸಿತಿರುಳ ತಿಂಗಳ
ತೆರದಿ ತಾರಕಿ ನಡುವಿನ

'ಹಿಡಿದು ಮೆಲ್ಲನೆ ತುಟಿಯ ಹಲ್ಲನೆ ಒಡೆದು ನೋಡುವ ಮುಂಚೆಯೆ ಹಿಡಿದ ಬಳ್ಳಿಯ' ಆಳ್ವರನ್ನು ನೋಡಿದ ಗೌಡನು ತನ್ನ ಅತ್ಯಂತ ಪ್ರೀತಿಯ ಈ ಕೋಣನ ಮರಿಯನ್ನು ಮೊದಲು ಒಪ್ಪದಿದ್ದಾಗ

ಕೊಡದ ಮರಿಯನು ತಂದುದೇತಕೆ ।
ಹಿಡಿದ ಮೇಲಿದ ಬಿಡುವೆವೇ ॥

ಗೌಡನ ಕಣ್ಣಾಗಿದ್ದ, 'ಹಲ್ಲು ಇಕ್ಕದ, ವರುಷ ಮಿಕ್ಕದ, ಇಂದಿಗೂ ಮೊಲೆ ಮೆಲ್ಲುವ, ಕಂಡರೆ ಹೊಟ್ಟೆ ತುಂಬುವ, ಹಿಟ್ಟು ಬೊಳ್ಳನೆ ಗೌಡಗೆ, ಆದರೆ, ಮಾತಿನಲ್ಲಿ ಸೋಲಿಸಿದ ಆಳ್ವರು,

ಹಡೆದ ಮಗಳಲಿ ಮಮತೆ ಇಲ್ಲವೆ? ।
ಕೊಡನೆ ತಂದೆಯು ಗಂಡಗೆ ॥
ಕೊಡುವ ಕೈಯದು, ಕೊಂಬ ಕೈಯಿದು ।
ನಡೆಯಲೀ ನೆಂಟಸ್ತಿಕೆ ॥

ಉಕ್ಕಿ ಬರುವ ದುಃಖದಿಂದ ಒಪ್ಪಿದ ಗೌಡನು,

ಹಡೆದ ಮಗಳನು ಹಣಕೆ ಮಾರುವ ।
ಬಡವ ಬಾಕುಡನಾದೆನೆ ॥
ಕೊಡು ಮನಸ್ಸಿಗೆ...ಹೇಳಿ ಇಷ್ಟನೆ ।
ಹಿಡಿದ ಹುಲ್ಲಿನ ಕಡ್ಡಿಯ ॥

ಬಿದ್ದು ಕಂಬನಿ ಹೊದ್ದ ಕಂಬಳಿ ।
ಒದ್ದೆಯಾಯಿತು ಗೌಡನ ॥
ಮುದ್ದು ಮಗಳನು ಮೂಸಿಕೊಟ್ಟನು ।
ಅದ್ದಿ ಸುಯ್ಲಿನ ಹೊಯ್ಲಲೀ ॥

'ಹುಲು ಕಡ್ಡಿಯ ಕೊಟ್ಟು....ನಿಲ್ಲುವೆನು ನಾನೆಂದು ಕೊಟ್ಟನು ಬಳ್ಳಿ ಆಳ್ವರ ಕೈಯಲಿ'. 'ಒಳ್ಳೆದಾಗಿರು.... ಬೊಳ್ಳ ಪೋ ತುಳುನಾಡಿಗೆ, ನಿಲ್ಲುವೆನು ನಾನಿನ್ನು ನಿನ್ನನು ಆಳ್ವ ರಾಳುವರೆಂದನು.'

'ಮೂರು ದಿನದಲಿ ಹೋದ ದಾರಿಯನಾರುದಿನದಲಿ' ಕೋಣನ ಮರಿಯನ್ನು ಜತನದಿಂದ ನಡೆಸುತ್ತಾ 'ಮೂಲದೇಗುಲ ಗುಡಿಮಠಗಳಲ್ಲಿ ನವನಂಗಳ ಮೂಡಿಸುತ, ಮೊಣಕಾಲನೂರಿಸಿ ಬೇಡಿದರು ನಿರ್ವಿಘ್ನವ' ಜೀಡಿನ ಪ್ರೀತಿಯ ತುತ್ತು, ಆರೈಕೆಯಿಂದ,

ಕರುಳು ಅರಿತು ತಿರುಳು ಸೇರಿತು ।
ಕುರೆಳು ಕೂಡಿತು ಬೊಳ್ಳಗೆ ॥
ಬೆರಳು ನಡೆಯದು ಕೊಂಬಿನೆಡೆಯಲಿ ।
ಕೊರಳಿನಲಿ ಗುಳಿ ಬಿದ್ದಿತು ॥

ಬೊಳ್ಳನಿಗೆ ಕಂಬಳದ ಬಯಕೆಯೆ?

'ಸರಳು ಸಂಕಲೆ ಮುರಿವ, ಮೂಸುವ, ಎರಡು ಕಾಲಲಿ ನಿಲ್ಲುವ, ಮರುಳು ಕಟ್ಟುವ, ಮಲಗಿ ಏಳುವ, ತುರಿಕೆ ತೋರುವ, ಜೂಜಿನ, ಗಟ್ಟಿ ನೋಡುವ ಗಡುಸಿಲಿನಲಿ, ತಲೆಕುಟ್ಟಿ ಕುಣಿಸುವ ಕ್ರಮದಲಿ, ಅಟ್ಟಹಾಸದ ನೆಗೆಯುವಿಕೆಯಲಿ... ನೆಲದ ಮೊಣಕಾಲಿನಲಿ ಅಡ್ಡಕೆ ಮಲೆದು ಕಣ್ಣಲಿ ಸುಯ್ಲಲಿ ಗಳದ ದನಿಯು ಬೊಳ್ಳನಿದ್ದನು.

ಆ ಸಮಯಕ್ಕೆ ಸರಿಯಾಗಿ, ಅರಸು ಕಂಬಲದ ಓಲೆ, ಬಂತು. ಬಾರಕೂರಿನ ಒಡೆಯರು, ನಂದಾವರದ ಬಂಗೇರರು, ಮುಲ್ಕಿಯ ಸಾಮಂತರು, ಪಡುಬಿದಿರೆಯ ಬಲ್ಲಾಳರು, ಮೂಡಬಿದಿರೆಯ ಚೌಟರು, ಕಟಪಾಡಿ ದೊರೆಗಳು, ವಿಟ್ಲದ ಹೆಗ್ಗಡೆಯವರು, ಕಾರ್ಕಳದ ಭೈರವರು, ಸೂರಾಲಿನ ಅರಸರು, ಅಳದಂಗಡಿಯ ಅಜಿಲರು, ಬೆಳತಂಗಡಿಯ ಮಲ್ಲರು - ಇವರೆಲ್ಲರ ಆರ್ಯಂಗಳು, ಮಲೆಯಂಗಳು, ಮೋಡಗಳು, ಕೆಂಚಂಗಳು, ಬುಳಯಗಳು, ತುಳುವಗಳು, ಕೊಕ್ಕೆಗಳು, ಕೋಡ್ಯಂಗಳು

ಊದುಕೊಂಬುಗಳಿಂದ ಕೊಳಲ ನಿ ।
ನಾದದಿಂದ ವಿನೋದದ ॥
ಆದಿ ದ್ರಾವಿಡರಿಂದ ಕೊಳಲಿನ ।
ಸಾದಕದೊಳೈತಂದರು ॥

ಕಂಬಳ ಶುರು! ಕಂಬಳದೋಟ ಮೊತ್ತಮೊದಲು ಅರಸು ಮನೆಗೆ. 'ಬಾವಕೆ' ಮತ್ತೆ 'ಬಾಳಿಕೆ'ಯವರಿಗೆ, ಪರಾರಿಗೆ, ಗುತ್ತಿನವರಿಗೆ.

'ಏಳು, ಎಂಟೊಂಭತ್ತು, ಕೋಲಿನ ನೀರನು ನಿಶಾನೆಗೆ ಹೊಡೆಯಲು ಯಾರಿಂದಲೂ ಸಾಧ್ಯವಾಗದೆ, ಅಳ್ವರ ಆಳು ಅಂಗರ ಕಾಳ-ಬೋಳರನ್ನು ಓಡಿಸಿದರೂ.

ಭಾರ ಸಾಲದ ಅನನುಕೂಲದಿ ।
ನೀರುಸಿಕ್ಕದು ಹಲಗೆಗೆ ॥
ಬೇರೆ ಭಾರದ ಜನರು ನಿಂದರೆ ।
ನೀರು ಎದ್ದೀತೆಂದರು ॥

ಆಗ ಆಳ್ವರು,

ಕೇಳಿ ಸೊಲ್ಲನು ಜನರ ಗುಲ್ಲನು ।
ತೋಳ ಸರಿಗೆಯ ಜಾರಿಸಿ ॥
ಕೋಲ ಕೈಯಲಿ ಬರಿಯ ಮೈಯಲಿ ।
ಆಳುವರು ಕರೆಗಿಳಿದರು ॥

'ಮೆಟ್ಟಿ ಮಂಡೆಗೆ ಗೋರಿಗಾಲನ್ನಿಟ್ಟು, ಏಟನ್ನೆರಡಕೂ ಕೊಟ್ಟು.... ಬಿಟ್ಟ ಕೈಯಲಿ ಕುಣಿದು ಬಂದರು ನೆಟ್ಟಿಗೆ ಮಂಜಟ್ಟಿಗೆ!

ಅರಸನಿಗೆ ಮುಗಿದು, ಅವರ ಅಪ್ಪಣೆ ತೆಗೆದುಕೊಂಡು ಬೀಡಿಗೆ ಹಿಂತಿರುಗಿದರು ಆಳ್ವರು. ಮುಂದೆ ಬೊಳ್ಳನಿಗೆ ಅನಿರೀಕ್ಷಿತ ಅಸೌಖ್ಯ, "ಕಣ್ಣು ಮುಟ್ಟು" ಆಗಿರಬಹುದೆ? ಅದಕ್ಕೆ ಮಾಡಿದ ಮಂತ್ರ, ತಂತ್ರ-ಮಾರನ

ಎಕ್ಕೆ ಎಂಜಿರು ಕಕ್ಕೆ ಪಾಂಡಿಲು ।
ನೆಕ್ಕಿ, ಕಾಸರ ಸೊಪ್ಪನು ॥
ತಿಕ್ಕಿ ಹಿಡಿಯಲ್ಲೊಕಿ ಆಡಿಸಿ ।
ಸುಕ್ಕು ಸೂ ಸೂ ಸುಳಿಸಿದ ॥

ಬೊಳ್ಳನಿಗೆ ಸೌಖ್ಯವಾದಾಗ 'ಸೇರು ಚಿನ್ನದ ಜೋಡು ಬಳೆಯನು' ಮಾರನಿಗೆ ಮಾಡಿಸಿಟ್ಟರು ಆಳ್ವರು.

ಕಂಡ ಜಡಿಮಳೆ ಕಾಣದಾಯಿತು ।
ಹಿಂದು ಹಿಮದಲಿ ಹೋಯಿತು ॥
ಕಂಡುಬೊಳ್ಳನ ಸುಖದೊಳಿದ್ದರು ।
ಗಂಡ ಹೆಂಡಿರು ಆಳ್ವರು ॥

157 ಪದ್ಯಗಳ ಈ ಸುದೀರ್ಘ ಕವನ ಉದಾತ್ತತೆಯ ಬೋಧೆಯ ಬುನಾದಿಯಿರುತ್ತಿದ್ದರೆ 'ಶ್ವಮೇಧ'ದಂತೆ ಖಂಡಕಾವ್ಯವೆಂದು ಕರೆಯಲ್ಪಡುವಷ್ಟು ಅರ್ಹತೆ ಪಡೆದಿದೆ.

'ಮಂಜಟ್ಟಿ ಕೋಣ' ತುಳುನಾಡ ಮಣ್ಣಿನ ಪರಿಮಳ ಘಮ್ಮಿಸುವ ಏಕೈಕ ಕಾವ್ಯ ಖಂಡ.

ಕರಿ-ಬಿಳಿ ಕಾಳಗ

ವರ್ಣಭೇದ ಸಲ್ಲದೆಂಬ ಧ್ಯೇಯಾಧರಿತ 'ಕರಿ-ಬಿಳಿ ಕಾಳಗ' ಇನ್ನೊಂದು ದೀರ್ಘ ಕವನ. 'ಕಪ್ಪು-ಬಿಳಿ'ಗಳು ಪಡೆಗಳನ್ನು ಕಟ್ಟಿಕೊಂಡು ಇಹದ ಹೊಯಿಕಯಿ'ಯಾಗಿ, ಕಪ್ಪಿನ ಕಡೆಯಿಂದ

ಕಾಕಾ ಕಾಕಾ ಕಾಕಾಳೀ
ಕಪ್ಪಾರೆಂದು ಕೇಳಿದುವು
ಕಾಗೆಗಳೆಂದವೆ ಹೇಳಿದುವು

*

ಪ್ರಶ್ನೆಯೊಳುತ್ತರ ಕಾಗೆಗಳಿತ್ತವು ।

*

ಈಗಿನ ಹಾಗಿಲ್ಲಾಗಿನ ಕಾಲದ ॥
ಕಾಗೆಗೆ ಸಂಸ್ಕೃತ ಬರುತಿತ್ತು ।
ಕಪ್ಪಿಗೆ ಸಕ್ಕದ ಗೊತ್ತಿತ್ತು ॥

ಕರಿಬಿಳಿ ಕಾಳಗ ಪೌರಾಣಿಕ ಮಟ್ಟಕ್ಕೇರಿ

ಬಿಳಿ ಕಡೆಯಿಂದ ಭೃಗುವೈತಂದ ।
ಮೆಟ್ಟಿದ ವಿಷ್ಣುವಿನುರದೆಡೆಗೆ ॥

*

ಹೊಟ್ಟೆಯೊಳಗೆ ಭೃಗುಲಾಂಛನವಾಯಿತು ॥

ಕಣ್ಣಿಗೆ ಬಡಿದರು ವಿಷ್ಣುವಿನ ।
ಹೂಕಣ್ಣಾಯಿತು ವಿಷ್ಣುವಿಗೆ ॥

ಕಪ್ಪಿನ ಧಾಳಿಯಿಂದ

ಕಪ್ಪಿನ ಲೇಪ ಮಾಡುತ ಮೈಗೆ
ಕಾಲನು ತಾನು ಕಪ್ಪೆಂದ

*

ಶಿವ,

ಕೊರಳಿಗೆ ಕಪ್ಪಿನ ಕುರುಹನು ಮಾಡಿ ।
ಕಾಲ ಕಂಧರ ತಾನೆಂದ ॥

*

ಶಿವೆ ತಾನಾದಳು ಮಾಕಾಳಿ ।

ಬೆಳ್ಳನೆ ನಕ್ಕ ಬೆನಕನ, ಕರಿಪಡೆ,

ಹಲ್ಲನು ಮುರಿಯಿತು ಗಣಪತಿಯ ।
ಡೊಳ್ಳಿಗೆ ಬಡಿದರು ಬೋರಲೆ ಬಿದ್ದ ॥
ಮೂಗನ್ನೆಳೆದರು ಉದ್ದಕ್ಕೆ ।
ಕರಿ ಕೈ ಮಾಡಿದ ಗದ್ದಕ್ಕೆ ॥
ಮಸಿಯನು ಬಳಿದರು ಕರ್ಣಕ್ಕೆ ।
ಕೆನ್ನೆಗೆ ಕಬ್ಬಿನ ದಂಕುಸವ್ವೂರಿ ॥
ಕರಿನೆತ್ತರನು ಇಳಿಸಿದರು ।
ಇಲಿ ಮೇಲೇರಿಸಿ ಎಳೆಸಿದರು ॥

ಅಂತ್ಯದಲ್ಲಿ ಧಾಳಿ ಚಂದ್ರನಲ್ಲಿಗೆ -

ಕಪ್ಪಿನ ದಂಡನ್ನಿದಿರಿಸಿ ತಿಂಗಳು
ತಿಂಗಳು ಕಾಳಗ ಹೂಡಿದನು

*

ಕಾಣುತ ಒಂದು ಮೋಲವೈತಂದು ।
ಓ ಓ ಕಪ್ಪು ಕತ್ತಲೆ ಅರಸು ॥
ಚಂದಿರನಿನ್ನವ ನೀದಯವಿರಿಸು ।
ಒಂದೆರಡೇನಲ್ಲಿಪ್ಪತ್ತೇಳು ॥
ಉಡುಹೆಂಗಳ ಸಿರಿಬೊಟ್ಟಿನ್ನುಳುಹು ।

*

ಆಗ,

ಕಪ್ಪಿನ ಅಂತಃಕರಣವು ಕರಗಿ ।
ಬಾ ತಂಗದಿರನೆ ಚಂದಿರನೆ ॥
ಬಾಬಾರೆನ್ನುತ ಬರಸೆಳೆದಪ್ಪಿತು ।
ಅಪ್ಪಿದ ಭಾಗವು ಕಪ್ಪಾಯ್ತು! ॥

ಅಲ್ಲಿಗೆ ಬಿಳಿಯೂ ಬಂದಾಗ ಚಂದಿರ

ನೀರಿನ ಗುಳ್ಳೆಯ ದೇಹವಿದು

*

ಸಂತಸವಾಗಲಿ ನಿಮಗೆಂದು
ಮೈಯ್ಯನ್ನಿಬ್ಭಾಗವ ಮಾಡಿ

*

ನೀಡಿದ ಎರಡೂ ಭಾಗಗಳ
ಕೃಷ್ಣ-ಶುಕ್ಲ ಪಕ್ಷಗಳ

ಆ ಕ್ಷಣ ಬಂದ ಮಾರ್ತಾಂಡನು

ಕಂಡಗಳೆರಡನು ಜೋಡಿಸಿ
ಅಮೃತ ಕರಂಡದೊಳಿರಿಸಿದನು

*

ಕರಿಬಿಳಿಗಳು ತಲೆ ತಗ್ಗಿಸಿ ನಿಂದವು ।

*

.....ಮಾಡದಿರಿಂಥ
ಹುಡುಗಾಟವನು ಎಂದೆಂದೂ

ಬಿಳಿಮೇಲೇನು, ಕರಿಕೀಳೇನು
ಮೇಲು ಕೀಳದು ಬಣ್ಣದೊಳೆ?
ಅಥವಾ ನಿಮ್ಮ ಶುದ್ಧಾಶುದ್ಧ
ಕರ್ಮಗಳ ವ್ಯತ್ಯಾಸಗಳೆ?

ಕರಿ, ಬಿಳಿಗಳು ಸೂರ್ಯನಿಗೆ ನೇಸರು ನೇಮವ ಹೊತ್ತೈತಂದವು ತಿಂಗಳು ತಿಂಗಳು

ಒಂದು ದಿನ:

ಅಂದಿನ ಪ್ರಾರ್ಥನೆಗಿಂದೂ ಬರುವರು ।
ಸೂರಿಯ ಚಂದಿರರೊಂದಾಗಿ ॥
ಆದರೆ ಚಂದಿರ ಆ ದಿನ ಕಾಣನು ।
ಕಾಣುವುದುಂಟೇ ಸತ್ತವರು? ॥
ಅಂದಿಗೆ ಎಂಬರಮಾವಾಸ್ಯೆ ।
ಅಂದು ಕರಿ ಬಿಳಿಗಳಿಗು ಪೋಪ್ಪೆ ॥

*

ಜಾತಿ ವಿಜಾತಿಯ ಮಾಡದಿರಾರೂ ।
ವರ್ಣ ವಿಭಾಗವ ಹೂಡದಿರಿ ॥
ಬಹು ವಿಧ ಬಣ್ಣದ ಎಲ್ಲರ ದೇಹದ ।
ಆತ್ಮವು ಒಂದೇ ಭಾವಿಸಿರಿ ॥
ಸೃಷ್ಟಿಯು ಒಂದೇ ದೇವರು ಒಂದೇ ।
ಹೇಳಿರಿ ವಂದೇ ಮಾತರಂ ॥

ಯಕ್ಷಗಾನ

ಮಾರಪ್ಪ ಶೆಟ್ಟರು ಯೌವನದ ಉತ್ಸಾಹದಲ್ಲಿ ಯಕ್ಷಗಾನ 'ತಾಳ-ಮದ್ದಳೆ', ಬಯಲಾಟಗಳಲ್ಲಿ ಭಾಗವಹಿಸಿದ್ದರು. ಪಜ್ವದ ವಾಣೀವಿಜಯ ಶಾಲೆಯಲ್ಲಿ ಅಧ್ಯಾಪಕರಾಗಿರುವಾಗ, ಅದರ ಮೊದಲಿನಿಂದಲೇ, ಯಕ್ಷಗಾನ ಪಟು ಕುರಿಯ ವಿಠಲ ಶಾಸ್ತ್ರಿಯವರ ತೀರ್ಥರೂಪರಾದ ಕೋಳ್ಯೂರು ವೆಂಕಟ್ರಮಣ ಶಾಸ್ತ್ರಿಗಳ, ಆಟ, ನಾಟಕಗಳಲ್ಲಿ ಭಾಗವಹಿಸುತ್ತಿದ್ದರು. ಪಂಜಕ್ಕೆ ಬಂದಿದ್ದ ಬಯಲಾಟ ಮೇಳದವರು, ಬೆಂಚುಕುರ್ಚಿಗಳಿಗಾಗಿ ಸ್ಥಳೀಯ ಬೋರ್ಡು ಹೈಸ್ಕೂಲಿನಲ್ಲಿ ಆಗ ಮೇಲ್ವಿಚಾರಕ ಮುಖ್ಯೋಪಾಧ್ಯಾಯ (Headmaster-in-charge)ರಾಗಿದ್ದ ಮಾರಪ್ಪ ಶೆಟ್ಟರ ಮಗ ರಘುನಾಥ ಶೆಟ್ಟರು ಸಹಾಯ ಮಾಡಿದಾಗ ಮೇಳದ ಮೇಲ್ವಿಚಾರಕರಾದ ಕೋಳ್ಯೂರು ವೆಂಕಟರಮಣ ಭಟ್ಟರು ತಾನು ಮಾರಪ್ಪ ಶೆಟ್ಟರ ಮಗನೆಂದಾಕ್ಷಣ ಬಾಚಿ ತಬ್ಬಿಕೊಂಡಿದ್ದರು. (1955-59)

ಶ್ರೀ ಮಾರಪ್ಪ ಶೆಟ್ಟರು 1920-21ರಲ್ಲಿ ಮಂಗಳೂರಿನ ಸರಕಾರೀ ಹಾಯರ್ ಎಲಿಮೆಂಟರೀ ಟ್ರೈನಿಂಗ್ ಶಾಲೆಯಲ್ಲಿ ತರಬೇತಿ ಶಿಕ್ಷಕ / ವಿದ್ಯಾರ್ಥಿಯಾಗಿದ್ದಾಗ (ಶ್ರೀ ಶೆಟ್ಟರ ಮಾತಿನಲ್ಲಿ) "ನಮ್ಮ ಉಪಾಧ್ಯಾಯರಾಗಿದ್ದ ದಿ। ಉಳ್ಳಾಲ ಮಂಗೇಶರಾಯರು ನಮ್ಮಲ್ಲಿ 8 ಮಂದಿ ವಿದ್ಯಾರ್ಥಿಗಳನ್ನು

ಕರೆದು ಸಾಧಾರಣ 20 ಪದ್ಯಗಳನ್ನು ಮೀರದಂತೆ ವಿವಿಧ ರಾಗ-ತಾಳಗಳಿಂದೊಡಗೂಡಿದ ಒಂದು ನೂತನ ಯಕ್ಷಗಾನ ಪ್ರಸಂಗವನ್ನು ರಚಿಸುವಂತೆ ಆಜ್ಞಾಪಿಸಿದರು. ಅಂತೆಯೇ ನಾನೂ ದಿ। ಗಳಗನಾಥರ 'ಕುರುಕ್ಷೇತ್ರ' ಕಾದಂಬರಿಯನ್ನು ಆಧರಿಸಿ 'ದಂಡಯಾತ್ರೆ' ಎಂಬ ಪ್ರಸಂಗವನ್ನು ರಚಿಸಿಕೊಟ್ಟೆನು. 8 ಮಂದಿಯ ಕೃತಿಗಳನ್ನು ಪರಾಮರ್ಶಿಸಿ ಅನಂತರ ನನ್ನ ಕೃತಿಯನ್ನು ಮೆಚ್ಚಿ ಶ್ರೀ ಮಂಗೇಶರಾಯರು ನಮ್ಮ ಶಾಲೆಯ ವಾರ್ಷಿಕೋತ್ಸವಕ್ಕೆ ಯಕ್ಷಗಾನ ನಾಟಕವನ್ನಾಗಿ ಅಭಿನಯಿಸಲು ಆರಿಸಿಕೊಂಡರು."

'ದಂಡಯಾತ್ರೆ' ಮೂರನೆ ಪಾನಿಪತ ಯುದ್ಧದ ಮರಾಠರ ಸದಾಶಿವ ಬಾವುವಿನ ದಂಡಯಾತ್ರೆ. ಎರಡು ಕಂದ ಪದ್ಯಗಳು, ಒಂದು ಭಾಮಿನಿ, ಎರಡು ವಾರ್ಧಿಕ, ಮಾರವಿರಾಗ ಏಕತಾಳಗಳಲ್ಲಿ ಎರಡು, ಭೈರವಿ ರಾಗ ಅಷ್ಟತಾಳದಲ್ಲಿ ಎರಡು, ಭೈರವಿ ಏಕತಾಳದಲ್ಲಿ ಒಂದು ಶಂಕರಾಭರಣ ರಾಗದ ಮಟ್ಟೆತಾಳದಲ್ಲಿ ಎರಡು, ರಾಗ ಆರ್ಯಸವಾಯಿಯಲ್ಲಿ ಎರಡು, ಸೌರಾಷ್ಟ್ರ ರಾಗ ತ್ರಿವುಡೆಯಲ್ಲಿ ಮೂರು, ನೀಲಾಂಬರಿ ರಾಗದ ಏಕತಾಳದಲ್ಲಿ ಎರಡು, ಕೇದಾರ ಗೌಳ ರಾಗ ಝಂಪೆತಾಳದಲ್ಲಿ ಎರಡು - ಹೀಗೆ 21 ಪದ್ಯಗಳಲ್ಲಿ ರಚಿಸಿದ ಆಧುನಿಕ ಯಕ್ಷಗಾನ ಪ್ರಸಂಗ:

ಯಕ್ಷಗಾನ ಆಧುನಿಕ ಪ್ರಸಂಗ

ದಂಡಯಾತ್ರೆ

ಭಾಮಿನಿಯಿಂದ ಪ್ರಾರಂಭ:

ಆಲಿಪುದು ಸುಮನಸರು ಇತ್ತಲು ।
ಓಲಗಳೊಂದಿನದಿ ಬಾವುವು ।
ಹೋಳಕರ ಯಶವಂತ ಸಿಂಧಿಯ ಗಾರ್ಡಿ ಗಾಯಕರ ॥
ಮೇಳದಲಿ ಮೆರೆದಾದು ರಾಣಿಯ
ಕಾಳಗಕೆ ಹದನೇನ ಕಂಡಿರಿ?
ಪೇಳ್ವುದೆನೆ ಕೂರಸಿಯ ಕುಣಿಸುತಲೆಂದ ಹೋಲ್ಕರನು ॥ ೧ ॥

ಹೊಳ್ಕರ, ವಿಶ್ವಾಸರಾಯ, ಇಬ್ರಾಹಿಂ ಗಾರ್ಡಿ ಹೊರಡಲು ಅಪ್ಪಣೆ ಕೇಳಿದ ಅನಂತರ ಸಿಂಧ್ಯ:

ರಾಗ: ಭೈರವಿ ಏಕತಾಳ

ಆಗಲೆ ಜನಕೋಜಿ ಸಿಂಧ್ಯ । ತಲೆ ।
ಬಾಗುತ ಬಾವುವಿಗೆಂದ ॥
ಪೋಗಿ ಪಠಾಣರ ಬಲವ । ನಾ ।
ಸಾಗಿಪೆ ಶೈಮಿನಿ ಪುರವ ॥

ಸಂತಸಗೊಂಡ, ಬಾವುವು ಚತುರಂಗ ಬಲದೊಂದಿಗೆ ಆರಾವಳಿ, ನರ್ಮದೆ, ವಿಂಧ್ಯವನು ಎಡಕಿಕ್ಕಿ ಯಮುನೆಯಂ ದಾಂಟಿ ಪಾಣೇಪತಕ್ಕೆ ತಂದು ಡೇರೆಗೊಂಡ (....ವಾರ್ಧಿಕ್ಯ)

*

ಪೋಲ್ಕರ ಷಪಗೆಂದಂ:

ರಾಗ: ಶಂಕರಾಭರಣ ತಾಳ: ಮಟ್ಟೆ

ಷಡ ಪಠಾಣೆ ನಡೆ ದುರಾಣೆ । ಕೆಡಲು ಬೇಡ ನಿನ್ನ ಸಮರ । ನಡೆಯದೆನ್ನ ಕೂಡೆ ಥಿಲ್ಲಿ । ಬಿಡುವುದೊಳ್ಳಿತೂ ॥ ಸಡಗರವನು ತೋರ್ದೆ ಯಾವ । ರೊಡಲ ಬಗಿದು ಭೂತ ಗಣಕೆ । ಕೊಡುವೆ ಬಲಿಯ ರಕ್ತದಿಂದ । ಕಡೆಗೆ ನಿಶ್ಚಯ ॥

ಮೊದಲಿಗೆ ಎದುರಾಳಿಯಿಂದ ಬಲವಂತಂ ಆಳಿ ಬರೆ ಬಲ ತೋಳಳಿದಂತಾದಂ ಬಾವುಂ ಆಗ, ಬಲವಂದಾತನ. ಸತಿ ಪಾರ್ವತಿ ಪತಿಗೆಂದಳ್ (.ಕಂದ)

ರಾಗ : ನೀಲಾಂಬರಿ ಏಕತಾಳ

ಯವನರೊಡನೆ ಬವರ ಬೇಡ । ಪ್ರಾಣಕಾಂತಾ ।
ಇನ್ನೂ । ಭವನದೆಡೆಗೆ ಪೋಪುದೊಳಿತು । ಪ್ರಾಣಕಾಂತಾ ॥

ದವಸವಿಲ್ಲ ಧಾನ್ಯವಿಲ್ಲ । ಪ್ರಾಣಾಕಾಂತಾ ।
ಬಲವು । ಸವೆಯುತಿಹುದು ದಿನದಿನಕ್ಕೆ । ಪ್ರಾಣಾಕಾಂತಾ ॥ ೧ ॥

- ರಮಣ ಹೇಳಿದ ಮಾತು (ವೀರರಿಗೆ) ಸರಿಬಾರದಾಗಿ, ಶಿವ ಛತ್ರಪತಿ, ಮಂತ್ರಿಯವರ ಕುಲದೊಳು ಉದ್ಭವನಾದ ಕುವರ ವಿಶ್ವಾಸರಾಯ ಯವನರಿಗೆ ಬೆನ್ನು ತೋರಿಸನು ಎನ್ನುವುದರೊಳಗೇ ವಿಶ್ವಾಸರಾಯನು

*

ರಾಗ : ಸೌರಾಷ್ಟ್ರ ತಾಳ : ತ್ರಿವುಡೆ

ಕೊಡುವುದಪ್ಪಣೆಯೆಂದು ಖಡ್ಗವ । ಜಡಿದು ಸಿಂಹನ ವೋಲು ಘರ್ಜಿಸಿ ।
ನಡೆವ ಕಮಠ ಫಣೇಂದ್ರರುಗಳೆದೆ । ಯೊಡೆಯುವಂತೆ ॥ ೧ ॥

ಭಾಮಿನಿಯಲ್ಲಿ ಪ್ರಾರಂಭವಾದ ಪ್ರಸಂಗ ವಾರ್ಧಿಕ್ಯದಲ್ಲಿ ಅಂತ್ಯವಾಗುತ್ತದೆ:

ಅಟ್ಟಿದಂ ಷಪನಕಡೆ, ರಾವುತರ ಮಾವುತರ ।
ಮೆಟ್ಟಿದಂ ಮುಂದರಿವ, ಆನೆಗಳ ಸೇನೆಗಳ ।
ಒಟ್ಟಿದಂ ಹೊಡೆ ಹೊಡೆದು, ವಾಜಿಗಳ ರಾಜಿಗಳ ।
ಚತರಂಗ ವಿಕ್ಕೆಲದೊಳು ॥

ಸಿಟ್ಟಿನಿಂ ತಿವಿದನಪ - ಖಾನರಂ ಬಾನರಂ ।
ಕಟ್ಟಾಳು ಕಾದಿದಂ, ವ್ಯಗ್ರದಿಂ ಉಗ್ರದಿಂ ।
ಧಿಟ್ಟ ವಿಶ್ವಾಸನಾ, ಧೈರ್ಯಮಂ ಸ್ಥೈರ್ಯಮಂ ।
ಮಂಗಳದಿ ಜೋಗುಳಿಸಲು ॥ ೨ ॥

ಯಾವ ಪೌರಾಣಿಕ ಯಕ್ಷಗಾನ ಪ್ರಸಂಗ ಶೈಲಿಗೂ ಸಂಗಾತಿಯಾಗಿ ನಿಲ್ಲಬಲ್ಲ ಚಿಕ್ಕದರಲ್ಲಿ ರಚಿತವಾದ ಚೊಕ್ಕ ಆಧುನಿಕ ಚಾರಿತ್ರಿಕ ಕಥಾ ಯಕ್ಷಗಾನ ಪ್ರಸಂಗ!

ನೀತಿ ಶತಕ (ಅಸಂಪೂರ್ಣ)

ಅಧ್ಯಾಪಕ ವೃತ್ತಿಯ ಪ್ರಾರಂಭದಲ್ಲಿ 'ಗುರುಮಿತ್ರ' ಎಂಬ ಹಸ್ತಲಿಖಿತ ಪತ್ರಿಕೆಯನ್ನು ಶ್ರೀ ಮಾರಪ್ಪ ಶೆಟ್ಟರು ಪ್ರಾರಂಭಿಸಿದ್ದರು. ಅದರಲ್ಲಿ 'ಎನ್. ಎಮ್. ಶೆಟ್ಟಿ', 'ನ.ಮಾ.ಸೆ.', 'ಎಸ್.ಎಸ್. ನರ್ಕಳ', 'ಎನ್.. ಮಾರಪ್ಪ ಶೆಟ್ಟಿ', 'ಸೆಟ್ಟಿ' ಎಂದು ತಮ್ಮನ್ನು ಹೆಸರಿಸಿಕೊಂಡು, ಹಲವು ಲೇಖಕರಿಂದ ಸಂಚಿಕೆ ತುಂಬಿದೆಯೆಂದು ಭಾಸವಾಗುವಂತೆ, ಕಥೆ, ಕವನ, ಚುಟುಕು ಮೊದಲಾದುವುಗಳನ್ನು ತಾವೇ ಬರೆದು ತುಂಬಿಸಿದ್ದರು; ಅಲ್ಲದೆ, ಯರ್ಮುಂಜ ಗಂಗಾಧರಶರ್ಮ, ಕೆ. ಶಂಕರ ಪುರುಷ, ವಿ. ಜನಾರ್ದನ ನಾಯ್ಕ, ಟಿ. ಆರ್. ರಮಾನಾಥ ಶಾಸ್ತ್ರಿ, ಶಿರೋಮಣಿ ಹೀಗೆ ಇನ್ನೂ ಕೆಲವರ ಲೇಖನಗಳಿಂದಲೂ ತುಂಬಿತ್ತು. ಆದರೆ ಜೀರ್ಣವಾದ, ಅಸಂಪೂರ್ಣವಾದ ಒಂದು 'ಗುರುಮಿತ್ರ' ಸಂಚಿಕೆಯ ಹೊರತು ಬೇರೆ ಯಾವ ಸಂಚಿಕೆಯೂ ದೊರಕದಾಗಿದೆ. ಈ 'ಗುರುಮಿತ್ರ'ದಲ್ಲಿ 'ಭಾರತೇಶ್ವರೀಸ್ತವ' ಎಂಬ ನೀತಿ ಭಾಮಿನಿಯಲ್ಲಿ ಪ್ರಾರಂಭಿಸಿದ್ದರು.

ಶ್ರೀ ವಸುಂಧರೆ ಕಂಬು ಕಂಧರೆ ।
ದೇವಿ ಸಂತತ ರಾಗ ಬಂಧುರೆ ।
ಕಾವುದೆಂದೆರಗುವೆನು ಕಂದೆರದೀಕ್ಷಿಸುವುದೆನ್ನ ॥
ಆವಗಂ ದೊರೆಯಲಿ ಪದಾಂಬುಜ ।
ಸೇವೆ ನಿನ್ನದೆ ಪರಮಮಂಗಲೆ ।
ಪಾವನಾತ್ಮಿಕೆ ಪಾಲಿಸಂಬಿಕೆ ಭಾರತೇಶ್ವರಿಯೇ ॥ ೧ ॥

ತಿರುಕರು (ಈ ವರ್ಗದಲ್ಲಿ 3 ಭಾಮಿನಿಗಳಿವೆ)

ರೂಪವನು ಕಳಕೊಂಡು ಕೊಂಡುಕು - ।
ರೂಪವನು ಮಸಿ ಮಣ್ಣು ಬೂದಿಯ ।
ಲೇಪಿಸುತ ಬೈರಾಗಿ ಭೂತ ಪಿಶಾಚಿಯೆಂದೆನುತ ॥
ಪಾಪ ಪುಣ್ಯದ ಕಥನವನು ಪ್ರ ।
ಸ್ತಾಪಿಸುತ ಮಾಡುವರು ಸರ್ವ-।
ಸ್ವಾಪಹಾರವ ಕೆಲವು ತಿರುಕರು ।
ಭಾರತೇಶ್ವರಿಯೆ ॥

ನೀತಿ (5 ಭಾಮಿನಿಗಳಿವೆ)

ಆಳುಗಳ ನರಿಯದರ ಪಳ್ಳಿಗ - ।
ರೂಳಿಗರನುದ್ಯೋಗ ಹೀನರ ।
ಮೂಳಿಗರ ಮುಟ್ಟಾಳುಗಳ ಮೊಜಡುಗಳ ಮೊದ್ದುಗಳ ।
ಪಾಲಿಸದೆ ಪಂಚಮರ ಪತಿತರ ।
ಜಾಳಿಸದೆ ಹೊಲೆ ಜನ್ಮ ಜಾತಿನಿ ।
ವಾಳಿಸದೆ ಮೆರೆವುದೆ ಸಮಾಜವು ಭಾರತೇಶ್ವರಿಯೆ ॥

ಅಂತ್ಯದಲ್ಲಿ 'ಸಶೇಷ'ವೆಂದು ನಮೂದಿಸಿದ್ದರಿಂದ 'ಈ ಭಾರತೇಶ್ವರೀಸ್ತವ'ವವು ನೀತಿ ಭಾಮಿನೀ ಶತಕವಾಗುತ್ತಿತ್ತು.

ಬಾಲ ಸಾಹಿತ್ಯ

ಪಂಜೆಯವರ ಪಟ್ಟಶಿಷ್ಯರಾಗಿ ಅವರ ನೆರಳಿನಲ್ಲಿಯೇ ಮಾರಪ್ಪ ಶೆಟ್ಟರು ತನ್ನ ಪ್ರತ್ಯೇಕ ಸೇವೆಯನ್ನು ಮಾಡಿದರು. ಕೊಪ್ಪಮೊಗರು ವಾಣೀವಿಜಯ ಹಾ. ಎ. ಶಾಲೆಯಲ್ಲಿ ಅಧ್ಯಾಪಕರಾಗಿದ್ದಾಗ 'ಸುಂದರಿಯ ಚಂದ'ವೆಂಬ ಮಕ್ಕಳ ಕಥೆಯನ್ನು ಬರೆದರು. 'ಮೊದಲ ಮಾತಿ'ನಲ್ಲಿ, "ಗೊತ್ತಿದ್ದ ಒಂದು ಮಾತಿನ ಸಹಾಯದಿಂದ ಗೊತ್ತಿಲ್ಲದ ಇನ್ನೊಂದು ಮಾತನ್ನು ಹೆಕ್ಕಿಕೊಳ್ಳುವ - ಮೆಲ್ಲಮೆಲ್ಲನೆ ರಸಸಾಹಿತ್ಯದ ನದಿಯನ್ನು ದಾಟುವ - ಒಂದು ಪಾಪಿನ ಕೈತಾಂಗು ಇದಾಗಿದೆ. ಬೇಕಂತಲೇ ಪುನರುಕ್ತಿಯನ್ನು ಬೆಳೆಯಗೊಟ್ಟಿದೆ". ಕಲಿಕೆಯ ಮೊದಲ ಸ್ತರದ ಶಿಕ್ಷಣಶಾಸ್ತ್ರಕ್ಕನುಗುಣವಾಗಿ ಈ ಕಥೆಯನ್ನು ರಚಿಸಲಾಗಿದೆ (From known to the unknown; repetition).

ಪಂಜೆಯವರ 'ಹೇನು ಸತ್ತು ಕಾಗೆ ಬಡವಾಯಿತು', 'ಬಾ ಪುರಲೆ ಬಾ'ಯಂತಹ ಮಕ್ಕಳ ಕತೆಗೆ ಸರಿಸಮಾನವಾದ - ಒಂದು ದೃಷ್ಟಿಯಲ್ಲಿ ಒಂದು ಹೆಜ್ಜೆ ಮುಂದೆ ಹೋಗಿ ರಸಸಾಹಿತ್ಯದ ಸವಿ ಮಕ್ಕಳಿಗೆ ಉಣಿಸುವ ಪ್ರಥಮ ಗ್ರಾಸದಂತಿದೆ. ಇಂತಹ ಮಕ್ಕಳ ಕಥೆಗಳನ್ನು ಬರೆಯುವ ಸಾಮರ್ಥ್ಯವಿದ್ದರೂ, ಬೇರೆ ಬರೆದ ಉದಾಹರಣೆಯಿಲ್ಲ.

ಸುಂದರಿಯ ಚಂದ

ಬಡಗಿಯೊಬ್ಬನು ಕೆತ್ತಿ ಮಾಡಿದ 'ಸುಂದರಿ'ಯೆಂದು ಹೆಸರಿಟ್ಟ ಬೊಂಬೆ, ತಿನ್ನುತ್ತಿದ್ದ ಕಡಲೆಯಲ್ಲಿದ್ದ ಕಲ್ಲಿನಿಂದ ಹಲ್ಲು ತುಂಡಾಗಲು ಬಡಗಿ ಮೊದಲು ದುಂಡ ಮಲ್ಲಿಗೆಯ ಮನೆಗೆ ಹೋದನು. ದುಂಡಮಲ್ಲಿಗೆ "ಏನು ಬಂದೆ ಬಡಗಿ?" ಎಂದು ಕೇಳಿತು. ಅದಕ್ಕೆ ಬಡಗಿ "ದುಂಡಮ್ಮಾ, ಕುಂದಮ್ಮಾ, ಕಡಲೆಯಲ್ಲಿ ಕಲ್ಲು ಇತ್ತು. ಕಲ್ಲು ತಿಂದು ಹಲ್ಲು ಹೋಗಿ, ಸುಂದರಿಯ ಚಂದ ಹೋಯಿತು. ಸುಂದರಿಗೆ ಹಲ್ಲು ಕೊಡುವೆಯಾ?" ಎಂದನು. ಅದಕ್ಕೆ ದುಂಡಮಲ್ಲಿಗೆ, "ಹಲ್ಲು ಬೇಕಾದರೆ ನಾನು ಕೊಡುವೆನು. ನನ್ನ ಹಲ್ಲಿಗೆ ಅವಳ ತುಟಿ ಒಪ್ಪಲಿಕ್ಕಿಲ್ಲ. ತೊಂಡೆ ಹಣ್ಣು ತುಟಿ ಕೊಟ್ಟರೆ ನಾನು ಹಲ್ಲು ಕೊಡುವೆನು. ಆದರೆ ಸುಂದರಿಗೆ ಹೆಸರು ಮಾತ್ರ ನನ್ನದು" ಎಂದಿತು.

ಹೀಗೆ ಬಡಗಿ ತೊಂಡೆ ಹಣ್ಣಿನ, ಸಂಪಿಗೆಯ, ತಾವರೆಯ, ಚಂದ್ರನ, ತುಂಬಿಯ, ಹಾವಿನ, ಶಂಖದ, ಬಳ್ಳಿಯ, ಸಿಂಹದ, ಆನೆಯ, ಗಿಳಿಯ ಮನೆಗಳಿಗೆ ಇದೇ ರೀತಿ ಮಾತನಾಡಿ ಕಟ್ಟಕಡೆಗೆ ಕೋಗಿಲೆಯ ಮನೆಗೆ ಹೋದನು. ಕೋಗಿಲೆ ಬಡಗಿಗೆ "ಏನು ಬಂದೆ ಬಡಗಿ?" ಎಂದು ಕೇಳಿತು. ಅದಕ್ಕೆ ಬಡಗಿ, 'ಕೋಗಿಲಮ್ಮಾ, ಕೋಕಿಲಮ್ಮಾ, ಕಡಲೆಯಲ್ಲಿ ಕಲ್ಲು ಇತ್ತು. ಕಲ್ಲುತಿಂದು ಹಲ್ಲು ಹೋಯಿತು. ಹಲ್ಲು ಹೋಗಿ ಸುಂದರಿಯ ಚಂದ ಹೋಯಿತು.

ನೀನು ಗಾಯನ ಕಲಿಸಿದರೆ ಗಿಳಿ ಮಾತು ಕಲಿಸುವುದು
ಗಿಳಿ ಮಾತು ಕಲಿಸಿದರೆ ಆನೆ ನಡಿಗೆ ಕಲಿಸುವುದು
ಆನೆ ನಡಿಗೆ ಕಲಿಸಿದರೆ ಸಿಂಹ ಸೊಂಟ ಕೊಡುವುದು
ಸಿಂಹ ಸೊಂಟ ಕೊಟ್ಟರೆ ಬಳ್ಳಿ ಶರೀರ ಕೊಡುವುದು
ಬಳ್ಳಿ ಶರೀರ ಕೊಟ್ಟರೆ ಶಂಖ ಕೊರಳು ಕೊಡುವುದು

ಶಂಖಿ ಕೊರಳು ಕೊಟ್ಟರೆ ಹಾವು ಜಡೆ ಕೊಡುವುದು
ಹಾವು ಜಡೆ ಕೊಟ್ಟರೆ ತುಂಬಿ ಕೂದಲು ಕೊಡುವುದು
ತುಂಬಿ ಕೂದಲು ಕೊಟ್ಟರೆ ಚಂದ್ರನು ಮುಖ ಕೊಡುವನು
ಚಂದ್ರನು ಮುಖ ಕೊಟ್ಟರೆ ತಾವರೆ ಹೂವು ಕಣ್ಣು ಕೊಡುವುದು
ತಾವರೆ ಹೂವು ಕಣ್ಣು ಕೊಟ್ಟರೆ ಸಂಪಗೆ ಹೂವು ಮೂಗು ಕೊಡುವುದು
ಸಂಪಗೆ ಹೂವು ಮೂಗು ಕೊಟ್ಟರೆ ತೊಂಡೆ ಹಣ್ಣು ತುಟಿ ಕೊಡುವುದು
ತೊಂಡೆ ಹಣ್ಣು ತುಟಿ ಕೊಟ್ಟರೆ ದುಂಡಮಲ್ಲಿಗೆ ಹಲ್ಲು ಕೊಡುವುದು.

ಆದುದರಿಂದ ಸುಂದರಿಗೆ ಗಾಯನ ಕಲಿಸುವೆಯಾ?" ಎಂದನು. ಅದಕ್ಕೆ ಕೋಗಿಲೆ, "ಗಾಯನ ಬೇಕಾದರೆ ನಾನು ಕಲಿಸುವೆನು. ಆದರೆ ಸುಂದರಿಗೆ ಹೆಸರು ಮಾತ್ರ ನನ್ನದು" ಎಂದಿತು. ಅದಕ್ಕೆ ಬಡಗಿಯು ಒಪ್ಪಿದನು.

ಹಾಗೆ ಒಪ್ಪುತ್ತಲೇ

ಕೋಗಿಲೆ ಬಂತು; ಗಾಯನ ಕಲಿಸಿತು. ಸುಂದರಿಯನ್ನು 'ಕೋಕಿಲಗಾನೆ' ಎಂದಿತು.
ಆಗ ಗಿಳಿ ಬಂತು; ಮಾತು ಕಲಿಸಿತು. ಸುಂದರಿಯನ್ನು 'ಶುಕವಾಣಿ' ಎಂದಿತು.
ಆಗ ಆನೆ ಬಂತು; ನಡಿಗೆ ಕಲಿಸಿತು. ಸುಂದರಿಯನ್ನು 'ಗಜಗಮನೆ' ಎಂದಿತು.
ಆಗ ಸಿಂಹವು ಬಂತು; ಸೊಂಟ ಕೊಟ್ಟಿತು. ಸುಂದರಿಯನ್ನು 'ಕೇಸರಿಮಧ್ಯೆ' ಎಂದಿತು.
ಆಗ ಬಳ್ಳಿಯು ಬಂತು; ಶರೀರ ಕೊಟ್ಟಿತು. ಸುಂದರಿಯನ್ನು 'ಲತಾಂಗಿ' ಎಂದಿತು.
ಆಗ ಶಂಖವು ಬಂತು; ಕೊರಳು ಕೊಟ್ಟಿತು. ಸುಂದರಿಯನ್ನು 'ಕಂಬುಕಂಠಿ' ಎಂದಿತು.
ಆಗ ಹಾವು ಬಂತು; ಜಡೆ ಕೊಟ್ಟಿತು. ಸುಂದರಿಯನ್ನು 'ನಾಗವೇಣಿ' ಎಂದಿತು.
ಆಗ ತುಂಬಿಯು ಬಂತು; ಕೂದಲು ಕೊಟ್ಟಿತು. ಸುಂದರಿಯನ್ನು 'ಭೃಂಗಕುಂತಳೆ' ಎಂದಿತು.
ಆಗ ಚಂದ್ರನು ಬಂದನು; ಮುಖಕೊಟ್ಟನು. ಸುಂದರಿಯನ್ನು 'ಇಂದುಮುಖಿ' ಎಂದನು
ಆಗ ತಾವರೆ ಹೂವು ಬಂತು; ಕಣ್ಣು ಕೊಟ್ಟಿತು. ಸುಂದರಿಯನ್ನು 'ಕಮಲಾಕ್ಷಿ' ಎಂದಿತು.
ಆಗ ಸಂಪಗೆ ಹೂವು ಬಂತು; ಮೂಗು ಕೊಟ್ಟಿತು ಸುಂದರಿಯನ್ನು 'ಚಂಪಕನಾಸೆ' ಎಂದಿತು.
ಆಗ ತೊಂಡೆ ಹಣ್ಣು ಬಂತು; ತುಟಿಕೊಟ್ಟಿತು. ಸುಂದರಿಯನ್ನು 'ಬಿಂಬಾಧರೆ' ಎಂದಿತು.
ಆಗ ದುಂಡಮಲ್ಲಿಗೆ ಬಂತು; ಹಲ್ಲುಕೊಟ್ಟಿತು. ಸುಂದರಿಯನ್ನು 'ಕುಂದರದನೆ' ಎಂದಿತು.

ಹೀಗೆ ಸುಂದರಿಗೆ ಹಲ್ಲಿಗೆ ಹಲ್ಲು ಬಂತು; ಮೈ ತುಂಬ ಹೆಸರು ಬಂತು; ಸುಂದರಿಯನ್ನು ನೋಡಿ ತಂದೆಗೆ ಸಂತೋಷ ಬಂತು. ಆಮೇಲೆ ಸುಂದರಿ ಅಳುವುದನ್ನು ನಿಲ್ಲಿಸಿದಳು. ಮತ್ತು ತಂದೆಯ ಒಟ್ಟಿಗೆ ಸುಖವಾಗಿ ಇದ್ದಳು. ಈಗಲೂ ಸುಂದರಿಯರನ್ನು ಆ ಹೆಸರುಗಳಿಂದ ಕರೆಯುತ್ತಾರೆ.

ಈ ರೀತಿಯ ಮಕ್ಕಳ ಕಥೆ, ಕವನಗಳನ್ನು ಮಾರಪ್ಪ ಶೆಟ್ಟರು ಬರೆಯುತ್ತಾ ಹೋಗುತ್ತಿದ್ದರೆ ಶ್ರೀ ಪಂಜೆಯರು ಹಾಕಿ ಪ್ರಾರಂಭಿಸಿದ ಶಿಶುಸಾಹಿತ್ಯ ಕಣಜವು ತುಂಬುತ್ತಿತ್ತು.

ಒಂದು ಕತೆ ಹೇಳುತೇನೆ

(ಶಿಶು ಗೀತೆ)

ಒಂದು ಕತೆ ಹೇಳುತೇನೆ
ಕೇಳಿ ಮಕ್ಕಳೇ । ನೀವು ।
ಕೇಳಿ ಮಕ್ಕಳೇ ॥ ಪಲ್ಲ ॥

ಒಂದು ಕತೆ ಹೇಳುತೇನೆ
ಹತ್ತು ಕತೆ ಮಾಡುತೇನೆ
ಕೇಳಿ ಮಕ್ಕಳೇ । ನೀವು ।
ಕೇಳಿ ಮಕ್ಕಳೇ ॥ ಅನುಪಲ್ಲ ॥

ಬಿದಿರು ಚಂದಾ - ಬೆಟ್ಟ ಚಂದಾ
ಬಿದಿರಿನಿಂದ ಬೆಟ್ಟ ಚಂದ
ಬೆಟ್ಟದಿಂದ ಬಿದಿರು ಚಂದ
ಬಿದಿರು ಬೆಟ್ಟದಿಂದ । ಮಲೆಯ ।
ನಾಡು ಚಂದಾ ॥ ಒಂದು ॥

'ಒಂದರಿಂದ ಒಂದು ಚಂದಾ' ಎಂಬ ಪದ ಪ್ರಯೋಗದ ಹಾಗೆ 'ಒಂದಕಿಂತ ಒಂದು ಚಂದಾ' ಎಂಬ ಪದ ಪ್ರಯೋಗ ಪ್ರಾರಂಭಿಸುತ್ತಾರೆ.

ಮಾತಿಗಿಂತಾ - ಮೌನ ಚಂದಾ
ಮೌನಕಿಂತಾ - ಧ್ಯಾನ ಚಂದಾ
ಧ್ಯಾನಕಿಂತಾ ಯೋಗದಾ । ಸ
ಮಾಧಿ ಚಂದಾ ॥ ಒಂದು ॥

ಬದುಕು ಚಂದಾ - ಭಾಗ್ಯ ಚಂದಾ
ಬದುಕಿಗಿಂತ ಭಾಗ್ಯ ಚಂದ
ಭಾಗ್ಯಕ್ಕಿಂತ ಬಾಳ್ವೆ ಚಂದ
ಬದುಕು ಭಾಗ್ಯ ಬಾಳ್ವೆಗಿಂತ
ಮುಕ್ತಿ ಚಂದಾ ॥ ಒಂದು ॥

ಹೀಗೆ ಮುಂದೆ ಈ ರೀತಿಯ - ಬಂಧವೂ ಬದಲಾದ 75 ಕವನಗಳಿವೆ. ಅವುಗಳನ್ನು ತಾತ್ವಿಕ ಅಡಿಗಟ್ಟಿನಲ್ಲಿ ಮುಂದುವರಿಸುವ ಆಲೋಚನೆ ಅವರಿಗಿತ್ತೆಂದು ಕಾಣುತ್ತದೆ. ಅಲ್ಲಲ್ಲಿ ತಿದ್ದಿತೀಡಿದ ಗುರುತುಗಳಿವೆ.

ಭಾರತೀಯರೇ ಒಂದಾಗಿ

ಇದೊಂದು ರಾಷ್ಟ್ರ ಪ್ರೇಮದ ಕವನ. ಚೀನೀಯರ ಧಾಳಿಯ ಸಮಯ ಬರೆದರು.

*

ವಂದಿಸಿರಿ ಭೂಮಾತೆ ಭಾರತೆಗೆ, ದೇವಗಭಿ - ।
ನಂದಿಸಿರಿ ಸತ್ಯಧರ್ಮಕ್ಕೆ ಜಯ ಸಿರಿಯನ್ನು ।
ಹೊಂದಿಸಿರಿ ಧನಕನಕವನ್ನಿತ್ತು ತನುಮನದಿ ।
ಸಂಪೂರ್ಣ ಸಹಕರಿಸಿರಿ ॥

ಗೇದವರೆ ಹೊಲದಲ್ಲಿ ನೇದವರೆ ಗಿರಣಿಯಲಿ
ಸೋದರರು ನೀವೆಲ್ಲವರು ಒಂದೆ ಗುರಿಯೊಂದೆ
ಸಾಧಿಸಿರಿ ಹಲವಾರು ಯೋಜನೆಯ ಹಾದಿಯಲಿ
ಮುಡಿದು ನಾಡನ್ನುಳಿಸಿರಿ ॥

*

ಕಾಸರಗೋಡು

ಕನ್ನಡಿಗರ ಗೋಳು

"ಅನಾದಿಯಿಂದ ಮಾತೃಭಾಷೆಯ ತಳಹದಿಯಿಂದ ಬೆಳೆದು ಬಂದ ಒಂದು ಭಾಷಾ ಪ್ರಾಂತ್ಯದ ಜನರ ಆಚಾರ, ವಿಚಾರ ಪದ್ಧತಿ ಕಟ್ಟು ಕಟ್ಟಳೆ- ಒಟ್ಟಾರೆ ಸಂಸ್ಕೃತಿಯನ್ನು ಇನ್ನೊಂದು ಪ್ರಾಂತ್ಯದ (ಪರ) ಭಾಷೆಯು ರಕ್ಷಿಸಲಾರದು. ಇಂಥ ಅನ್ಯಾಯಕ್ಕೆ ಒಳಗಾದ - ಮಲೆಯಾಳಕ್ಕೆ ಸೇರಿಸಲಾದ 'ಕಾಸರಗೋಡು ತುಳುವ ಕನ್ನಡಿಗರ ಗೋಳು' ಚಿತ್ರವನ್ನಿಲ್ಲಿ ಕಾಣಬಹುದು." (ಮಾರಪ್ಪ ಶೆಟ್ಟರು ಬರೆದ ಮೊದಲ ಮಾತುಗಳಿಂದ)

'ಓದಿ ಕಂಬನಿ ಮಿಡಿದೆ' ಎಂದು ಪತ್ರ ಬರೆದರು ಕಳ್ಳಿಗೆ ಶ್ರೀ ಮಹಾಬಲ ಭಂಡಾರಿಯವರು. ಕಯ್ಯಾರರು ಪ್ರಶಂಸಿಸಿದರು. ಕಾಸರಗೋಡು ಕನ್ನಡಿಗರ ಸಮ್ಮೇಳನ 1972 ಮೇ ದಿನಾಂಕ 6ರಂದು ಅಪರಾಹ್ನ 4 ಗಂಟೆಗೆ ಪದ್ಮಶ್ರೀ ಡಾ. ಟಿ. ಎಮ್. ಎ. ಪೈ ಅವರ ಅಧ್ಯಕ್ಷತೆಯಲ್ಲಿ ಶ್ರೀ ಮಾರಪ್ಪ ಶೆಟ್ಟರನ್ನು ಸನ್ಮಾನಿಸಿದರು.

ಈ ಕವನದಲ್ಲಿ ಕಾಸರಗೋಡು ತಾಲೂಕಿನ 100ಕ್ಕೂ ಹೆಚ್ಚ ಕನ್ನಡ-ತುಳು ಸ್ಥಳನಾಮಗಳನ್ನು ದೀರ್ಘ ಟಿಪ್ಪಣಿಯೊಂದಿಗೆ ಆಧಾರ ಸಹಿತ ವಿವರಿಸಿದ್ದಾರೆ.

ಅಯ್ಯೋ ತುಳು-ಕನ್ನಡದ । ಕಯ್ಯಾದ 'ಕಯ್ಯಾರ' ।
ಮೈಯ್ಯಾದ 'ಮಾಯಿಪಾಡಿ' 'ತಲಪಾಡಿ'ಯನ್ನು ॥
ಬಾಯ್ಯಾದ 'ಬಾಯಾರ' ಕುಯ್ಯುವರು ಕೇರಳ - ।
ಕ್ಕೊಯ್ಯುವರು ಮಲೆಯಾಳರನ್ಯಾಯದಿಂದ ॥ ೧ ॥

*

'ಮೊಗು'ವಳಿಯೆ ಮೂಗುಂಟಿ? ಮೊಗವ್ಹೋಗೆ ಮೂಗುತಿಯ ।
ನಗವೇಕೆ? ತುಳುವಿತಿಗೆ ವೈಧವ್ಯವಾಗೆ ! ॥

*

‘ಕಯ್ಯಾರು’ ‘ಗೋವಿಂದ ಪೈಯವರು’ ‘ಸುಬ್ಬಕವಿ
ಯಯ್ಯಾರುದಿಸಿದ ತಾಣ ಯಕ್ಷಗಾನ ॥
ನೆಯ್ಯಾದ ತುಳುವ ಕಲೆ । ಕೆಯ್ಯಾದ ಕುರುಳ ತಲೆ ।
ಕುಯ್ಯುವರು ಕುರುವಾಯಿ ಕುಡುಗೋಲಿನಿಂದ ॥

*

ಬಡಿವನೇ ‘ದುಡಿ-‘ದೋಲ’ । ನುಡಿವನೇ ‘ಜಾನಪದ’ ।
ನಡೆವನೇ ಕನ್ನಡಿಗ ತುಳುಶೀಲ ಬಿಟ್ಟು ॥
ಬಿಡುವನೇ ಮಲೆಯಾಳ ಪಡವನೇ ‘ಕಥಕಳಿಯ’ ।
ಕುಡಿವನೇ ಮೊಲೆಹಾಲ ತೊರೆದು ಹಾಲಾಹಲ ॥

ಇಂತಹ 18 ಪದ್ಯಗಳಿಂದ ತುಳು ಕನ್ನಡಿಗರ ನಾಡ ಪ್ರೇಮವನ್ನು ಬಡಿದೆಬ್ಬಿಸಿದ್ದಾರೆ.

ಮುಂದೆ ಇದನ್ನೇ ವಿಸ್ತರಿಸಿ ‘ತುಳುನಾಡಿನ ಸ್ಥಳನಾಮಗಳು’ ಎಂಬ ಸಂಶೋಧನಾತ್ಮಕ ಪ್ರಬಂಧವನ್ನೇ ಬರೆದರು.

ಸಂಶೋಧನೆ

ಅ. ಸ್ಥಳನಾಮಗಳು

‘ತುಳುನಾಡಿನ ಸ್ಥಳ ನಾಮಗಳು’ ಎಂಬ ಸಂಶೋಧನಾತ್ಮಕ ಪ್ರಬಂಧವನ್ನು ಬರೆಯುವಲ್ಲಿ ಮಾಸ್ತಿಯವರ ‘ನಮ್ಮ ನುಡಿ’ ಡಾ । ಗುರುರಾಜ ಭಟ್ಟರ ‘ತುಳುನಾಡು ಗ್ರಂಥ’, ಶಂ. ಬಾ. ಜೋಶಿಯವರ ‘ಕನ್ನಡಕತೆ’ ‘ಕನ್ನಡವನೆಲೆ’ ‘ಕನ್ನೂಡಿಯಹುಟ್ಟು’ ‘ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ’, ‘ಶಿವರಹಸ್ಯ’, ‘ಕನ್ನಡ ನುಡಿಯ ಜೀವಾಳ’ ಮೊದಲಾದ ಸಾಧಾರ ಗ್ರಂಥಗಳನ್ನು ಮನನ ಮಾಡಿದರು. ‘ಮೂವತ್ತು ವರ್ಷಗಳ ಕೆಳಗೆ ಮದ್ಯಪಾನ ನಿಷೇಧ’ ಪ್ರಚಾರಕನೆಂದು ನೇಮಕಗೊಂಡು ನಾನು ಈ ಜಿಲ್ಲೆಯ 7-8 ನೂರು ಹಳ್ಳಿ ಗ್ರಾಮಗಳನ್ನು ಸುತ್ತಿ ಸುಳಿಯುವ ಸದವಕಾಶದಲ್ಲಿ ನನ್ನೊಡನೆ ಬೆರೆತ ಬಿಲ್ಲರು, ಬೆಸ್ತರು, ಬೇಡರು, ಮುಕ್ಕರು, ಮೊಗೇರರು, ಉಪ್ಪಾರರು, ಒಕ್ಕಲರು, ಕುಡಿಯರು, ಕುಂಬಾರರು, ಮುಂಡರು, ಮುಟ್ಟಾಳರು, ಮೇರರು, ಕೂಸರು, ಕೊರಗರು, ಕೊಟ್ಟಾರರು, ಒಡ್ಡರು, ಒಡರರು, ನಾಡರು ಮುಂತಾದವರ ಜಾತಿವಾಚಕ ಪದಗಳಿಗೂ ಆಗ ತಲೆಯೆತ್ತಿ ಕಾಣಿಸುತ್ತಿದ್ದ ಹಲವಾರು ಊರುಗಳ ಹೆಸರುಗಳಿಗೂ ಯಾವುದಾದರೊಂದು ಬಾದರಾಯಣ ಸಂಬಂಧವಿರಬೇಕೆಂಬ ಸಂಶಯ ನನ್ನ ತಲೆಯನ್ನು ಕುಕ್ಕುತ್ತಿತ್ತು” ಎಂಬ ಮಾತುಗಳೇ ಮಾರಪ್ಪ ಶೆಟ್ಟರ ಸಂಶೋಧನಾತ್ಮಕ ಮನೋವೃತ್ತಿಗೆ ದೃಷ್ಟಾಂತವೆನ್ನಬಹುದು. ಮನೋ ಸಂದೇಹವೇ (Hunch) ಸಂಶೋಧನೆಗೆ ಮೂಲ.

“ಯಾವುದೇ ಒಂದು ಕಾರ್ಯಕ್ಕೆ ಕಾರಣವನ್ನು ಹುಡುಕುವ .....ಚಾಳಿ....ಬಾಲ್ಯದಲ್ಲಿಯೇ ನನ್ನ ಕರುಳಿಗೆ ಅಂಟಿಕೊಂಡಿತು” ಹೀಗೆ ಬರೆಯುವ ಮಾರಪ್ಪ ಶೆಟ್ಟರಿಗೆ ದ್ರಾವಿಡ ಶಬ್ದಗಳ ಮೂಲ ತಿಳಿಯುವ ಕುತೂಹಲ. ತಮಿಳು, ತುಳುವಿನಲ್ಲಿ ಹೇಳುವ ‘ಅರ್-ಆರ್’, ‘ಇರ್-ಈರ್’ ಪದಗಳು ನೀರನ್ನೂ, ನೀರ ಎಡೆಯನ್ನೂ, ನೀರ ಪರಿತವನ್ನೂ ಸೂಚಿಸುವ ಪದಗಳೆಂದು ಮನನ ಮಾಡಿಕೊಂಡರು. ಮೊಗೇರ್, ಬಾಯಾರ್, ಕಯ್ಯಾರ್ ಇತ್ಯಾದಿ ಸ್ಥಳಗಳು ನೀರೆಡೆಯಿರುವ

ಸ್ಥಳಗಳಾಗಿವೆ. ನೆಲದ ಮುಖ ಭಾಗದಲ್ಲಿ 'ಆರ್' (ನೀರ್) ಇದ್ದರೆ 'ಮೊಗರು' ಆಗುತ್ತದೆ. ಅವರು ಮಾಡಿದ ಸ್ಥಳನಾಮಗಳ ವಿವೇಚನೆ ಹೀಗೆ ಮುಂದುವರಿಯುತ್ತದೆ.

ಬ. ತುಳುನಾಡು

1969-1970ರ 'ಪ್ರಭಾತ' ಪ್ರಜಾಪ್ರಭುತ್ವ ಅಂಕದಲ್ಲಿ ಎರಡು ಸಂಶೋಧನಾ ಲೇಖನಗಳಲ್ಲಿ (9.11.69ಮತ್ತು 26.1.70)ಸ್ಥಳನಾಮಗಳ ಮೂಲಕ, ಹಲವು ಉದಾಹರಣೆಗಳಿಂದ ಆಳ್ ನಾಡು ಹೋಗಿ ತುಳುನಾಡಾಯಿತು ಎಂಬ ಸಿದ್ಧಾಂತಕ್ಕೆ ಬರುತ್ತಾರೆ. 'ಅರ್' 'ಆರ್' ಶಬ್ದಗಳಂತೆ 'ಅಲ್' 'ಆಲ್'ಗಳಿಂದಾಗುವ ಪದಗಳನ್ನು ವಿವೇಚಿಸಿ, ಹಾಗೆ 'ಇಲ್' 'ಈಲ್', 'ಉಲ್', 'ಎಲ್', 'ಒಳ್' ಪದಗಳಿಂದಾಗುವ ಸ್ಥಳನಾಮಗಳನ್ನು ವಿವೇಚಿಸಿ, ತಮ್ಮ ಸಿದ್ಧಾಂತವನ್ನು ಬಲ ಪಡಿಸುತ್ತಾರೆ.

ಮುಂದಿನ ಸಂಶೋಧಕರಿಗೆ ಮಾರಪ್ಪ ಶೆಟ್ಟರ ವಾದ, ಸಿದ್ಧಾಂತಗಳು ಸಹಾಯಕವಾಗಿ, ಸಂಶಯಾತೀತವಾಗಿ 'ತುಳುನಾಡು' ವ್ಯುತ್ಪತ್ತಿ ಹೇಗಾಯಿತು ಎಂಬ ನಿರ್ಣಯಾತ್ಮಕ ಸಂಶೋಧನೆಯಾಗಲೆಂದು ಹಾರೈಸೋಣ.

ಸ್ವಪ್ರಯತ್ನದಿಂದ ವಿದ್ಯಾವಂತರಾಗಿ, ಭಾಷಾತಜ್ಞರಾಗಿ, ಸಂಸ್ಕೃತದ ಅಧ್ಯಯನವನ್ನೂ ಸಾಕಷ್ಟು ಮಾಡಿಕೊಂಡು, ಆರ್ಯ, ದ್ರಾವಿಡ ಭಾಷೆಗಳ ಹುಟ್ಟು ಬೆಳವಣಿಗೆಯನ್ನು ವಿವೇಚಿಸುವಂತಹ ಸಂಶೋಧಕಮಟ್ಟವನ್ನೇರಿದ ಶ್ರೀ ಮಾರಪ್ಪ ಶೆಟ್ಟರ ಸಾಧನೆ ಅಸಾಧಾರಣವಾದುದು.

೩. ಹವ್ಯಕ ಕನ್ನಡ

ಮಾರಪ್ಪ ಶೆಟ್ಟರ ಸಾಹಿತ್ಯದ ಮೂರನೇ ಕವಲು 'ಹವ್ಯಕ ಬ್ರಾಹ್ಮಣ ಭಾಷೆ' ಎಂದರೆ ಓದುಗರಿಗೆ ಆಶ್ಚರ್ಯವಾಗಬಹುದು.

ಪುಣಚಾ, ಪರಿಯಲ್ತಡ್ಕ, ಮೂಡಂಬೈಲು - ಪ್ರದೇಶದ ಹವ್ಯಕ ವಾತಾವರಣದಲ್ಲಿ, ಅಧ್ಯಾಪಕರಾಗಿದ್ದ ಮಾರಪ್ಪ ಶೆಟ್ಟರಿಗೆ 'ಹವ್ಯಕ ಭಾಷೆ' ಹವ್ಯಕ ಸಮಾಜದವರಿಗೂ ಆಶ್ಚರ್ಯವಾಗುವಷ್ಟು ನಿರರ್ಗಳವಾಗಿತ್ತು. ಶ್ರೀ ಶೆಟ್ಟರನ್ನೂ ಸಂಧಿಸುವ ಯಾವ ಹವ್ಯಕ ಬಂಧುವೇ ಆಗಲಿ, ಇವರೊಡನೆ ಹವ್ಯಕ ಭಾಷೆಯಲ್ಲೇ ಮಾತನಾಡುತ್ತಿದ್ದರು. ಹಿಂದೆ ಹೇಳಿದ ಕೋಳ್ಯೂರು ವೆಂಕಟ್ರಮಣ ಶಾಸ್ತ್ರಿಗಳ ಯಕ್ಷಗಾನ, ನಾಟಕಗಳನ್ನಾಡುತ್ತಿದ್ದ ಕಾಲದಿಂದ ಈ ಹವ್ಯಕ ಪ್ರೇಮ ಬೆಳೆದಿರಬಹುದು. ಕಡೆಂಗೋಡ್ಲು, ಮುಳಿಯ, ಸೇಡಿಯಾಪು, ತೆಕ್ಕುಂಜರೊಡನೆ ಹವ್ಯಕ ಭಾಷೆಯಲ್ಲೇ ಸಂಭಾಷಣೆ.

ಮೂಡಂಬೈಲಿನಲ್ಲಿ ಅತ್ಯುತ್ತಮ ಹವ್ಯಕ ವಾತಾವರಣ - ನಾಲ್ಕು ಪತಿಷ್ಠಿತ ಹವ್ಯಕ ಮನೆತನದ ಮೂಲಕ ಶ್ರೀ ಶೆಟ್ಟರಿಗೆ ದೊರಕಿತು: ಕಲ್ಲಮನೆ, ಕೆಳಮನೆ, ನಡುಮನೆ, ಮೇಲ್ಮನೆ. ಮಾರಪ್ಪ ಶೆಟ್ಟರು ಮೂಡಂಬೈಲು ಪಂಚಾಯತು ಬೋರ್ಡು ಪ್ರೈಮರಿ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದಾಗ ಕಲ್ಲಮನೆಯ ವಾರಣಾಸಿ ಕೃಷ್ಣಯ್ಯರು (ವಾರಣಾಸಿ ಸುಬ್ರಾಯ ಭಟ್ಟರ ತೀರ್ಥರೂಪರು) ಪಂಚಾಯತು ಶಾಲೆಯ ಕಾರ್ಯಾಧ್ಯಕ್ಷರಾಗಿದ್ದರು. ಜಿಲ್ಲೆಯ ಹವ್ಯಕ ಸಮಾಜಕ್ಕೇ ಮೂಲ ಮನೆ ಮೂಡಂಬೈಲು ಕೆಳಮನೆ. ಈ ಮನೆಯ ಯಜಮಾನರಿಗೆ ಆಚಾರ

ವಿಚಾರ ಶಾಸ್ತ್ರಿಗಳೆಂದೇ ಹೆಸರು. ಹವ್ಯಕ ಬ್ರಾಹ್ಮಣರ ಶಾಸ್ತ್ರಪದ್ಧತಿಯ, ಸಾಮಾಜಿಕ, ಧಾರ್ಮಿಕ ಸಮಸ್ಯೆಗಳೇನಾದರೂ ಇದ್ದರೆ ಇವರಲ್ಲೇ ತೀರ್ಮಾನಕ್ಕೆ ಬರಬೇಕು. ಮಾರಪ್ಪ ಶೆಟ್ಟರ ಕಾಲದಲ್ಲಿ ಕೆಳಮನೆಯ ಯಜಮಾನರಾಗಿದ್ದ ಆ. ವಿ. ರಾಮಕೃಷ್ಣ ಶಾಸ್ತ್ರಿಗಳೊಡನೆ ಶೆಟ್ಟರಿಗೆ 'ಗಳಸ್ಯ - ಕಂಠಸ್ಯ'ದಷ್ಟು ಬಾಂಧವ್ಯವಿತ್ತು. ಇವರನ್ನು ಎಲ್ಲರೂ 'ಮಾಷ್ಟ್ರು' ಎಂದೇ ಸಂಭೋದನೆ. ಹೊರಗಿನ ಅಪರಿಚಿತ ಹವ್ಯಕರು ಶೆಟ್ಟರು ಹವ್ಯಕ ಭಾಷೆಯನ್ನಾಡುವ ರೀತಿಯಿಂದ ಇವರನ್ನು ಹವ್ಯಕ ಸಮಾಜದವರೆಂದೇ ತಿಳಿದುಬಿಡುತ್ತಿದ್ದರು! "ಮಾಷ್ಟ್ರನ ಕೇಳಿಕ್ಕಿ ಹೇಳಲಕ್ಕು. ಊಟಕ್ಕೆ ಬತ್ತನಲ್ಲದೊ, ಬಪ್ಪೂಡ್ತಿಂಗೆ ನಿಂಗಳುದೇ ಬರೆಕ್ಕು' ಹೀಗೆ ಮಾತು ಸಾಗುತ್ತದೆ. ಉಪಾಧ್ಯಾಯ ವೃತ್ತಿಯಿಂದ ನಿವೃತ್ತಿಯಾಗುವ ತನಕ ಮಧ್ಯಾಹ್ನದ ಊಟ ಈ ಹವ್ಯಕರಲ್ಲಿ. ಕಲ್ಲಮನೆ, ಕೆಳಮನೆ ಮಾರಪ್ಪ ಶೆಟ್ಟರ ಅಚ್ಚುಮೆಚ್ಚಿನ ಮನೆಗಳು, ಅಲ್ಲಿಯ ಅಚ್ಚುಮೆಚ್ಚಿನ ಹವ್ಯಕ ಬಂಧುಗಳಂತಿದ್ದರು.

ಕೂಷಕ್ಕನ ಮದುವೆ

ಮಾರಪ್ಪ ಶೆಟ್ಟರು ಹವ್ಯಕ ಭಾಷೆಯಲ್ಲಿ ಬರೆದ ನಾಟಕ 'ಕೂಷಕ್ಕನ ಮದುವೆ' ಈ ಹವ್ಯಕ ಪರಿಸರದ ಕೂಸು. ಪಟ್ಟೆ 'ಷ' ಆದರೂ 'ಕೂಷಕ್ಕ' ಎಂಬುದರ ಹವ್ಯಕ ಉಚ್ಚಾರ ಶ್ರೀ ಶೆಟ್ಟರ ಬಾಯಿಯಿಂದಲೇ ಕೇಳಬೇಕು.

ಒಂದು ಉದಾಹರಣೆ: ರಾತ್ರಿ ಮಲಗುವ ಸಮಯ ದೀಪ ಆರಿಸುವಂತೆ ಹೆಂಡತಿಯೊಡನೆ "ಏ! ದೀಪ ದೇವರು ಮಾಡು. ಯೆನಗೆ ನಕ್ಕಿಂಗೆ ಏಳೆಕ್ಕು!" ರಾತ್ರಿ ಹೊತ್ತು ಗಂಡ-ಹೆಂಡಿರ ಮಾತಿನಿಂದ ನಾಟಕ ಪ್ರಾರಂಭ. ಪತ್ನಿಗೆ ಗರ್ಭವತಿಯಾದ ಸಂಶಯ. ಕೆಲಸದಾಕೆಯ ಒತ್ತು (ಕೆಲವು ತುಳು ಸಂಭಾಷಣೆಯೂ ಇವೆ) ಮುಂದೆ ಹುಟ್ಟುವ-ಬೆಳೆಯುವ ಇತ್ಯಾದಿ ಲಘುವಾದ ನಗುಬರಿಸುವ ಹವ್ಯಕ ನುಡಿಗಳು. ಗಂಡನ ಭೇಡಿಕೆ. ಆದರೆ ಹೆಂಡತಿ ಗಂಭೀರ (Serious) ಮುಂದೆ ಕೂಷಕ್ಕನ ಮದುವೆ...? ರಾತ್ರಿಯುದ್ದಕ್ಕೂ ಮಾತುಕತೆ, ಗಂಡನಿಗೆ ಮಾತಿನ ಮಂಪರು ಸಾಕಾಗುತ್ತದೆ. ಆದರೂ ಮದುವೆಗೆ ಹಣ? ಹೂತಿಟ್ಟ "ದೊಡ್ಡಳಗೆ, ಸಣ್ಣಳಗೆ" ಇದ್ದಲ್ಲದೊ, ದೊಡ್ಡದೇ ಸಾಕಾಗುತ್ತೊ, ಇಲ್ಲೆಯೊ....?" ಹೀಗೆ ಮಾತಾಡುತ್ತಿದ್ದುದನ್ನು ಮಾಡಿನ ಬದಿಯಲ್ಲಿ ಕಿವಿಗೊಟ್ಟು ಗುಟ್ಟಾಗಿ ಆಲಿಸುತ್ತಿದ್ದ ಕಳ್ಳ ಕೇಡಿಯೊಬ್ಬನು ಭಾವೀ ಅಳಿಯನಂತೆ (ಗಂಡ ಶಂಕರನ ಅನುಪಸ್ಥಿತಿಯಲ್ಲಿ) ಭಾವೀ ಅತ್ತೆಯನ್ನು (ಹೆಂಡತಿ ಗೌರಿ) ಮಾತಿನಲ್ಲೇ ಮಂಕುಮಾಡಿ, ನೆಲದಡಿಯಲ್ಲಿ ಹೂತಿಟ್ಟ ಹಣದ ಗಂಟನ್ನು ತೆಗೆದುಕೊಂಡು... ಓಡಿ ಹೋದುದು ತಿಳಿದು ಗಂಡನ ತಾತ್ಸಾರದ ಭೇಡಿಸುವ 'ಆತಲ್ಲದೊ, ಕೂಷಕ್ಕನ ಮದುವೆ!" ಎಂಬಲ್ಲಿಗೆ ನಾಟಕಕ್ಕೇ ಪರದೆ ಬೀಳುತ್ತದೆ.

ಈ ನಾಟಕದ ವಿಷಯಕ್ಕಿಂತಲೂ ಹೆಚ್ಚು, ಅದರಲ್ಲಿ ಬರುವ ಹವ್ಯಕ ಭಾಷೆಯ ಸಂಭಾಷಣೆ ಹವ್ಯಕ ಸಾಹಿತ್ಯದ ಉತ್ತಮ ಉದಾಹರಣೆಯೆಂದು ಈ ನಾಟಕವನ್ನು ಓದಿದವರಿಗೆ, ಅಭಿನಯಿಸುವವರಿಗೆ ಮನವರಿಕೆಯಾಗಬಲ್ಲುದು.

ಡಾ. ವಿವೇಕ ರೈಗಳ ಪೂಜ್ಯ ತೀರ್ಥರೂಪರಾದ ಶ್ರೀ ಅಗ್ರಾಳ ಪುರಂದರ ರೈಗಳು ಸ್ವತ: ಸಾಹಿತಿಯಾಗಿದ್ದು, ಮನೆಯಲ್ಲೆ ಮಾರಪ್ಪ ಶೆಟ್ಟರ ದಿಗ್ದರ್ಶನದಲ್ಲಿ ಶ್ರೀ ಪುರಂದರ ರೈಗಳೂ ಭಾಗವಹಿಸಿ ನಾಟಕವಾಡಿದ ಸಂದರ್ಭವನ್ನು, ಮಾರಪ್ಪ ಶೆಟ್ಟರು ಸ್ಮರಿಸಿಕೊಳ್ಳುತ್ತಿದ್ದರು. ಅದೇಕೊ

ಈ ನಾಟಕವನ್ನು ಹೊರತರಲು ಮಾರಪ್ಪ ಶೆಟ್ಟರು ಮನಸ್ಸು ಮಾಡಲಿಲ್ಲ. ಹವ್ಯಕ ಸ್ತ್ರೀಯೊಬ್ಬಳ ನೆನಸಾಗದ ಕನಸನ್ನು ಬೋಳೆತನವನ್ನುವರೋ ಎಂಬ ಕಾರಣದಿಂದಲೋ ತಿಳಿಯದು. ಮುಳಿಯ ಮಹಾಬಲ ಭಟ್ಟರೊಡನೆ ಈ ವಿಷಯ ಬಂದಾಗ 'ಅದರಲ್ಲೇನಿದೆ? ಸಾಹಿತ್ಯ ದೃಷ್ಟಿಯಿಂದ ಅದೆಲ್ಲ ಗೌಣ' ಎಂದು ಮಾರಪ್ಪ ಶೆಟ್ಟರ ಮಗನೊಡನೆ ಅಭಿಪ್ರಾಯಿಸಿದರು.

ಮಾರಪ್ಪ ಶೆಟ್ಟರು ಬರೆದ 'ಬಂಟರ ಯಾನೆ ನಾಡವರ ಏಳಿಗೆ'ಯೆಂಬ ಕವನ ಎಲ್ಲಿಯೂ ಸಿಗದಾಗಿದೆ. ಈ ಕವನಕ್ಕೆ ಮೊಳೆಹಳ್ಳಿ ಶಿವರಾಯರ ಅಧ್ಯಕ್ಷತೆಯಲ್ಲಿ ಚಿನ್ನದ ಪದಕವಿತ್ತು ಮಾರಪ್ಪ ಶೆಟ್ಟರನ್ನು ಸನ್ಮಾನಿಸಲಾಯಿತು. ಮೊಳಹಳ್ಳಿಯವರು ಶ್ರೀ ಶೆಟ್ಟರನ್ನು ತುಂಬಾ ಪ್ರಶಂಸಿಸುವುದರೊಂದಿಗೆ ಇವರಿಗೆ ಬಂಟನೆಂಬ ಅಭಿಮಾನ ಹೆಚ್ಚಾಗಬಾರದೆಂದು ಸೂಚಿಸಿದ್ದರು. ಆ ವೇಳೆಯಲ್ಲಿ ಮಾರಪ್ಪ ಶೆಟ್ಟರು "ದಶದಾಡಿಮ ಬಿಭೀಭವತ್" ಎಂದರು - ಎಂಬುದು 'ಗುರುಗಳಾದ ಪಂಜೆಯವರು' ಲೇಖನದಲ್ಲಿದೆ. ಆ ಸಂಸ್ಕೃತ ನಾಣ್ನುಡಿಯ ಅರ್ಥ ಸಂದರ್ಭವೇನೊ.

ಕಾಸರಗೋಡು ಕನ್ನಡಿಗರ ಸಮ್ಮೇಳನದಲ್ಲಿ ಇತರರೊಂದಿಗೆ ಮಾರಪ್ಪ ಶೆಟ್ಟರನ್ನು 'ಕಾಸರಗೋಡು ಕನ್ನಡಿಗರ ಗೋಳು' ಕವನಕ್ಕಾಗಿ ಸನ್ಮಾನಿಸಲಾಯಿತು.

ಮಂಗಳೂರು ಕನ್ನಡ ಸಂಘದ ಸಕ್ರಿಯ ಸದಸ್ಯರಾಗಿ, ಅನಂತರ ಅದರ ಉಪಾಧ್ಯಕ್ಷರೂ ಆದರು. 28ನೇ ಜನವರಿ 1973ರಂದು, ಹಿರಿಯ ಸಾಹಿತಿ ಅಭಿನವ ಕಾಳಿದಾಸ ಪ್ರೊ. ಎಸ್. ವಿ. ಪರಮೇಶ್ವರ ಭಟ್ಟರ ನೇತೃತ್ವದಲ್ಲಿ ನರ್ಕಳ ಮಾರಪ್ಪ ಶೆಟ್ಟರನ್ನು ಅಭಿನಂದಿಸಲಾಯಿತು.

ಜಿಲ್ಲೆಯ 'ಬಂಟರ ಯಾನೆ ನಾಡವರ ಸಂಘ' ಇವರನ್ನು ಸನ್ಮಾನಿಸಬಹುದಿತ್ತು. 1987ನೇ ಜೂನ್ 20ರಂದು ನರ್ಕಳ ಮಾರಪ್ಪ ಶೆಟ್ಟರು ದೈವಾಧೀನರಾದರು.

ಶಿಕ್ಷಕರ ರಾಷ್ಟ್ರ ಪ್ರಶಸ್ತಿ ಗಳಿಸಿದ ಅವರ ಮಗ ನರ್ಕಳ ರಘುನಾಥ ಶೆಟ್ಟರನ್ನು ಸನ್ಮಾನಿಸುವುದರ ಮೂಲಕ ಬಂಟರ ಸಂಘವು ಅಪ್ರತ್ಯಕ್ಷವಾಗಿ ಶ್ರೀ ಮಾರಪ್ಪ ಶೆಟ್ಟರನ್ನು ಸನ್ಮಾನಿಸಿತು.

ಶಿಕ್ಷಕರಾಗಿ ನರ್ಕಳ ಮಾರಪ್ಪ ಶೆಟ್ಟರು

ರಾಷ್ಟ್ರಾಧ್ಯಕ್ಷರಾಗಿ, ಶಿಕ್ಷಣವೇತ್ತ, ದಾರ್ಶನಿಕ ಡಾ. ಸರ್ವೆಪಲ್ಲಿ ರಾಧಾಕೃಷ್ಣನರ ಜನ್ಮದಿನವಾದ ಸೆಪ್ಟೆಂಬರ 5ನೇ ತಾರೀಕನ್ನು 'ಶಿಕ್ಷಕರ ದಿನ'ವನ್ನಾಗಿ ಭಾರತದಾದ್ಯಂತ ಆಚರಿಸುತ್ತಾರಷ್ಟೆ.

1990ನೇ ಸೆಪ್ಟಂಬರ 5ನೇ ತಾರೀಕು. 1989ರ ಸಾಲಿನಲ್ಲಿ ಶಿಕ್ಷಕರ ರಾಷ್ಟ್ರ ಪ್ರಶಸ್ತಿ ಗಳಿಸಿದ ಸುಮಾರು 300 ಶಿಕ್ಷಕರು ರಾಷ್ಟ್ರದ ನಾಲ್ಕು ಕಡೆಗಳಿಂದಲೂ ಬಂದು ಧಿಲ್ಲಿಯ 'ಸಿರಿಫೋರ್ಟ್' ಸಭಾಂಗಣ (Siri Fort Auditorium)ದಲ್ಲಿ ನೆರೆದಿದ್ದಾರೆ. ರಾಷ್ಟ್ರಾಧ್ಯಕ್ಷ ಶ್ರೀ ವೆಂಕಟ್ರಾಮನರ ಅಮೃತ ಹಸ್ತದಿಂದ ಒಬ್ಬೊಬ್ಬರಾಗಿ ಶಿಕ್ಷಕರು ಪ್ರಶಸ್ತಿ ಪತ್ರ, ಪ್ರಶಸ್ತಿ ಪದಕಗಳನ್ನು ಸ್ವೀಕರಿಸುತ್ತಾರೆ. 'ಎನ್. ರಘುನಾಥ ಶೆಟ್ಟಿ, ಪ್ರಿನ್ಸಿಪಾಲ್, ಕೇಂದ್ರೀಯ ವಿದ್ಯಾಲಯ, ಹೆಬ್ಬಾಳ, ಬೆಂಗಳೂರು, ಎಂಬ ಕರೆ ಬಂದಾಗ ರಘನಾಥ ಶೆಟ್ಟರು ಮೇಲಕ್ಕೆ ಹತ್ತಿ ರಾಷ್ಟ್ರಾಧ್ಯಕ್ಷರ ಬಳಿ ಹೆಜ್ಜೆ ಇಡುತ್ತಾರೆ, ಮನಸ್ಸಿನ ಉದ್ವಿಗ್ನತೆಯನ್ನು ಅದುಮಿಕೊಂಡು. ಆಗ ಅವರ ಮನೋಧ್ಯಾನದಲ್ಲಿದ್ದ ಒಂದೇ ಒಂದು ವ್ಯಕ್ತಿ: ಅವರ ಪೂಜ್ಯ ತೀರ್ಥರೂಪರಾದ ನರ್ಕಳ ಮಾರಪ್ಪ ಶೆಟ್ಟರು.

"ನಾನು ಗಳಿಸಿದ ರಾಷ್ಟ್ರ ಪ್ರಶಸ್ತಿ ನನ್ನ ತಂದೆಯವರು ಶಿಕ್ಷಣ ಕ್ಷೇತ್ರದಲ್ಲಿ ಮಾಡಿದ ಸೇವೆಯನ್ನು ತಿಳಿದ ಜನರು ಸದಾ ಸ್ಮರಿಸುವುದಂತಾದರೆ ನನಗೆ ಅದಕ್ಕಿಂತ ಹೆಚ್ಚಿನ ಸಂತೋಷ ತೃಪ್ತಿ ಸಾಫಲ್ಯ ಭಾವ ಬೇರೆ ಇಲ್ಲ.

"ರಾಷ್ಟ್ರ ಪ್ರಶಸ್ತಿ ಗಳಿಸಿದ ರಘುನಾಥ ಶೆಟ್ಟರು ಯಾರು ಗೊತ್ತೇ? ನಮ್ಮ ಮಾರಪ್ಪ ಮಾಷ್ಟ್ರ ಮಗ.

"ಅವು ಏರ್ ಗೊತ್ತುಂಡೆ...? ನಮ್ಮ ಮಾರಪ್ಪ ಮಾಸ್ಟ್ರೆ ಮಗೆ ಅತ್ತೆ....?
"ಅದು ಆರು ಗೊಂತಾತೊ...? ಅದು ನಮ್ಮ ಮಾಷ್ಟ್ರನ ಮಗ
ರಗು ಅಲ್ಲದೊ...?

- ಎಂಬ ಮಾತುಗಳು ಕಡೆಯ ಉಸಿರಿರುವ ತನಕ ನನ್ನ ಕಿವಿಗೆ ಕೇಳಿಸುತ್ತಿರಲಿ..."

ರಘುನಾಥ ಶೆಟ್ಟರು ಅಧ್ಯಾಪಕರಾಗಿ ಪದಾರ್ಪಣೆ ಮಾಡಿದುದು ಮೂಡಂಬೈಲು ಪಂಚಾಯತು ಬೋರ್ಡು ಎಲಿಮೆಂಟರೀ ಶಾಲೆಯಲ್ಲಿ ಮುಖ್ಯೋಪಾಧ್ಯಾರಾಗಿದ್ದ ತನ್ನ ತಂದೆ ಮಾರಪ್ಪ ಶೆಟ್ಟರ ಪದತಲದಲ್ಲಿ 1948-49 ಶಾಲಾ ವರ್ಷದಲ್ಲಿ.

ಇಲ್ಲಿ ಒಂದು ವಿಷಯವನ್ನು ಈಗಲೇ ಹೇಳಬೇಕೆಂದೆನಿಸುತ್ತದೆ: ಕುಟುಂಬಿಕರಿಗೆ, ಮನೆಮಂದಿಗೆ, ಅದರಲ್ಲೂ ಮಕ್ಕಳಿಗೆ ಮಾರಪ್ಪ ಶೆಟ್ಟರು ಸಿಂಹ ಸ್ವಪ್ನರಾಗಿದ್ದರು. ಅವರ ಸಿಡುಕು, ಮುಂಗೋಪ, ಕೋಪಾಟೋಪ, ಹೂಂಕಾರಗಳ ಎದುರಿನಲ್ಲಿ ಮಕ್ಕಳು ಇಲಿಗಳಂತಾಗಿದ್ದರು. ರಘುನಾಥ ಶೆಟ್ಟರ ಮಾತಿನಲ್ಲಿ, "ಅಂತಹ ಜಮದಗ್ನಿಯ ಎದುರಿಲ್ಲಿ 2-3ನೇ ತರಗತಿಯ ವಿದ್ಯಾರ್ಥಿಗಳಿಗೆ ಹೆದರುತ್ತಲೇ ಹೇಗೆ ಪಾಠ ಮಾಡುತ್ತಿದ್ದೆನೋ ನನಗೆ ತಿಳಿಯದು" "ತಂದೆಯವರು ಶಾಲೆಯ ಗೇಟನ್ನು ಪ್ರವೇಶಿಸುತ್ತಿದ್ದಾಗ, ಅವರ ಕೊಡೆ ನೋಡಿಯೇ ನಾನು, ಶೇಷಯ್ಯ ಮಾಸ್ಟ್ರು, ಮಕ್ಕಳು ಎಲ್ಲರೂ ಗಪ್, ಚಿಪ್."

'ಆದರೆ ತಂದೆಯವರು ಮಾಡುವ ಪಾಠ - ಅದು ಲೆಕ್ಕವಾಗಲಿ, ಕನ್ನಡವಾಗಲಿ, ಚರಿತ್ರ ಭೂಗೋಳವಾಗಲಿ, ಅಧ್ಯಾಪಕಾರದ ನಾವೂ ಕೇಳುವಂತಿತ್ತು; ಆದರೆ ಒಂದು ರೀತಿಯ ಭಯದಿಂದ."

'ಅಧ್ಯಾಪಕರ ಸೆಂಟರ್ ಮೀಟಿಂಗ್‌ನಲ್ಲಿ, ಮನೆಗೆ ಒಂದಿರುವಾಗ ಹಾದಿಯಲ್ಲಿ, ಅವರ ಪಾಠ ವಿಧಾನ, ವಿವರಣೆ, ಎಂದೂ ಮರೆಯಲಾರೆ.'

ಉದಾಹರಣೆಗೆ ಲೆಕ್ಕದ ಪಾಠ: 'ಒಂದರ ಸಂಖ್ಯಾ ಜ್ಞಾನ' ಒಂದು ಎಂಬುದನ್ನು ಮೊತ್ತಮೊದಲು ಹೇಗೆ ಕಲಿಸಬೇಕು? ಯಾವುದೋ ಒಂದು ವಸ್ತುವನ್ನು ತೋರಿಸಿ, "ಇದು ಒಂದು ಪೆನ್ಸಿಲು, ಇದು ಒಂದು ಬೆಂಚು' ಎಂದು ಹೇಳಿದರೆ ಮಗುವಿಗೆ 'ಪೆನ್ಸಿಲು' 'ಬೆಂಚು' ಕಾಣುತ್ತವೆ. ಆದರೆ 'ಒಂದು'? ಸಂಖ್ಯೆ ಎಂಬುದು ಅಮೂರ್ತ. (Abstract)ಮಗುವಿನ ತಲೆಯಲ್ಲಿ ಅದನ್ನು ಹೇಗೆ ಮೂಡಿಸುವುದು? ಪೆಟ್ಟುಕೊಟ್ಟು 'ಒಂದು' ಎಂದು ಹೇಳಿದರೆ ಹೆದರಿಕೆಯಿಂದ 'ಒಂದು' ಎನ್ನಬಹುದು. ಆದರೆ ಅದು ಸರಿಯಾದ ಪಾಠವಲ್ಲ.

ಮಾರಪ್ಪ ಶೆಟ್ಟರ ಮಾತುಗಳಲ್ಲಿ, "ಸಂಖ್ಯಾಜ್ಞಾನ ಪಾಠ ಕಷ್ಟ ಸಾಧ್ಯ"ವೆಂಬುದು ಒಪ್ಪತಕ್ಕದ್ದು. ಅಧ್ಯಾಪಕರಾದ ನಾವು, ತರಬೇತಿ ಪಡೆದ ಅಧ್ಯಾಪಕರಾದ ನಾವು, ಪೂರ್ವಸಿದ್ಧತೆಗೆ ಗಮನ ಕೊಡಬೇಕು.

ಹತ್ತಿರ ಕುಳಿತವನ ಮುಖಕ್ಕೆ ತಿರುಗಿ 'ಮುಖದಲ್ಲಿ ಒಂದು ಮೂಗು' ಆಕಾಶದಲ್ಲಿ ಸೂರ್ಯ ಒಂದು, ಕೊಡೆಗೆ ಕಾಲು ಒಂದು, ನಮ್ಮ ಬಾಯೊಳಗೆ ನಾಲಗೆ ಒಂದು ಹೀಗೆ ಪಾಠ ಪ್ರಾರಂಭಿಸಬೇಕು. ಮಗುವು ಎಂದಿಗೂ ಮುಖದಲ್ಲಿ 2ಮೂಗು ಆಕಾಶದಲ್ಲಿ ಎರಡು ಸೂರ್ಯ, ಎರಡು ಹಿಡಿಯ ಕೊಡೆ, ಎರಡು ನಾಲಗೆ ಕಾಣಲಿಕ್ಕೆ ಸಾಧ್ಯವೇ ಇಲ್ಲ. ಹೀಗೆ ಹಲವು ದಿನ ಉದಾಹರಣೆ ಸಹಿತ ಹೇಳಿ, ತೋರಿಸಿ, ಚಿತ್ರಿಸಿ ಮುಂದೆ ಮಗುವೇ ತನ್ನ ಪರಿಸರಲೋಕದಲ್ಲಿ ಒಂದೇ ಕಾಣುವ, ಮುಟ್ಟಿನೋಡುವ ಚಟುವಟಿಕೆಯ ಅನಂತರ '2' 'ಎರಡು' - ಎರಡು ಕಣ್ಣುಗಳು, 2 ಕಿವಿಗಳು ಹೀಗೆ ಪಾಠ ಮಾಡುವಾಗ ಮಗುವಿನ ಮನೋಪಟಲದಲ್ಲಿ 1-2ರ ಜ್ಞಾನ ಬರಬಹುದು. ನಾನು ಈಗ ವಿವರಿಸಿದ ವಿಧಾನವೇ ಸರಿ, ಬೇರೆ ವಿಧಾನವೇ ಇಲ್ಲ ಎಂದು ಹೇಳುತ್ತಿಲ್ಲ. ಪಾಠದ ಮೊದಲು ಆಲೋಚಿಸಿ ಪೂರ್ವಸಿದ್ಧತೆ ಮಾಡಿ ಎಂದು ಹೇಳಬಯಸುವೆ."

"ಈ ಒಂದರ ಸಂಖ್ಯಾಜ್ಞಾನ ಕಲಿಸುವ ವಿಧಾನವನ್ನು ನಾನು ನನ್ನ ಶೈಕ್ಷಣಿಕ ವಿಷಯವಾದ ಭಾಷಣದಲ್ಲಿ ಕೆಲವೊಮ್ಮೆ ಉಪಯೋಗಿಸುತ್ತಿದ್ದೆ".

ಸುಲಭದಿಂದ ಕ್ಲಿಷ್ಟತೆಗೆ ಹೆಜ್ಜೆ ಹೆಜ್ಜೆಯಾಗಿ ಸಾಗಿಸಿ ಕಲಿಸುವುದು ಇನ್ನೊಂದು ವಿಧಾನ. ಮಾರಪ್ಪ ಶೆಟ್ಟರು ಕೂಡಿಸು (+)ಕಳೆಯುವ (–) ಮಾನಸಿಕ ಲೆಕ್ಕ ಕಲಿಸುವ ವಿಧಾನ ನೋಡಿ:

ಹೆಜ್ಜೆ - ೧ (ಮಾನಸಿಕ)

1 + 1 = 2   2 + 2 = 4   3 + 3 = 6   4 + 4 = 8x

10ಕ್ಕೆ, ಅಂದರೆ, ದಶಮ ಸ್ಥಾನಕ್ಕೆ ಹೋಗಬಾರದು

(ಜೊತೆ, ಜೊತೆಯಾದ ಸಂಖ್ಯೆಗಳು ಮಾತ್ರ) (~~2+3~~ ~~3+4~~ ~~4+5~~ - ಈ ರೀತಿ ಕೂಡದು)
ಕೈ ಬೆರಳು ಅಥವಾ ಇನ್ನಾವುದೇ ವಸ್ತುವನ್ನು ಉಪಯೋಗಿಸದಂತೆ)

ಹೆಜ್ಜೆ - ೨

5 + 5 = 10   15 + 5 = 20   25 + 5 = 30 ಹೀಗೆ 100ರ ತನಕ

12 + 2 = 14	22 + 2 = 24	32 + 2 = 34.... " "		
13 + 3 = 16	23 + 3 = 26	33 + 3 = 36.... " "	}	ಎಲ್ಲವೂ ಮಾನಸಿಕ
14 + 4 = 18	24 + 4 = 28	34 + 4 = 38.... " "		

ಹೆಜ್ಜೆ - ೩

(ಹಲವು ಪಾಠ, ಅಭ್ಯಾಸಗಳ ಅನಂತರ)

ಮೇಲಿನ ಎರಡು ಹೆಜ್ಜೆಗಳನ್ನು - ಈಗ ಕಷ್ಟದ ರೀತಿಯಲ್ಲಿ - ಒಂದು ಸಂಖ್ಯೆ ಹೆಚ್ಚಾಗಿಸಿ -

ಹೆಜ್ಜೆ - ೩/೪

2 + 2 = 4	2 + 3 = ? 5	5 + 5 = 10	5 + 6 = ? 11	ಎಲ್ಲವೂ ಮಾನಸಿಕ
3 + 3 = 6	3 + 4 = ? 7	12 + 2 = 14	12 + 3 = ? 15	
4 + 4 = 8	4 + 5 = ? 9	13 + 3 = 16	13 + 4 = ? 17	
		14 + 14 = 18	14 + 5 = ? 19	

ಹೆಜ್ಜೆ - ೫

ಒಂದು ಸಂಖ್ಯೆ ಹೆಚ್ಚುಮಾಡಿ:

16 + 6 = 22	16 + 7 = 23	17 + 7 = 24 17 + 8 = 25
26 + 6 = 32	26 + 7 = 33	ಇದೇ ರೀತಿ
36 + 6 = 42	36 + 7 = 43	18 + 8 = 26 18 + 9 = 27 (ಮಾನಸಿಕ)
86 + 6 = 92	86 + 7 = 93	(ಎಲ್ಲವೂ ಮಾನಸಿಕವಾಗಿ)

ಇದೇ ರೀತಿ ಒಂದು ಸಂಖ್ಯೆ ಕಡಿಮೆ ಮಾಡಿ-

16 + 6 = 32	16 + 5 = 21	
26 + 6 = 32	26 + 5 = 31	(ಎಲ್ಲವೂ ಮಾನಸಿಕ)
86 + 6 = 92	86 + 5 = 91	

ಈ ವಿಧಾನವೂ - ಇದೇ ಸರಿಯಾದುದು 'ಇದಮಿತ್ಥಂ' ಎಂದು ಅವರು ಹೇಳುವುದಿಲ್ಲ. ತರಬೇತಿ ಹೊಂದಿದ ಉಪಾಧ್ಯಾಯರು ಆಲೋಚಿಸಿ, ಪೂರ್ವಸಿದ್ಧತೆ ಮಾಡಿ ತಮ್ಮದ್ದೇ ಆದ ಪ್ರಯೋಗ ನಾವೀನ್ಯತೆ (Innovative)ಯ ವಿಧಾನವನ್ನು ಕಂಡು ಹುಡುಕಿ ಕೊಳ್ಳಬೇಕು.

ವಯಸ್ಕರ ಶಿಕ್ಷಣ

ವಯಸ್ಕರ ಶಿಕ್ಷಣ ಪ್ರಚಾರಕ್ಕೆ ಸ್ವಯಂಸೇವಕನಾಗಿ ಮುಂದೆ ಬಂದು ಸಂಜೆ-ರಾತ್ರಿ ಹೊತ್ತು ಅಡ್ಯನಡ್ಕ-ಮರಕ್ಕಿಣಿ ಹತ್ತಿರದ ಅಡ್ಕಕ್ಕೆ ಹೋಗುತ್ತಾ ಅಲ್ಲಿಯ ಮಸೀದಿಯ ಬಳಿ ವಯಸ್ಕರಿಗೆ (ಹೆಚ್ಚಿನವರು ಮುಸ್ಲಿಮರು) ಕಲಿಸುತ್ತಿದ್ದ ಕನ್ನಡ ಪಾಠ ಪ್ರಯೋಗ ನಾವೀನ್ಯತೆಯಿಂದ ಕೂಡಿತ್ತು. ಅದಕ್ಕಾಗಿ ಪೂರ್ವಸಿದ್ಧತೆ ಮಾಡುತ್ತಿದ್ದ ಪುಸ್ತಕ ಈಗಲೂ ಅವರ ಮಕ್ಕಳಲ್ಲಿದೆ.

'ಅ'ದಿಂದ 'ಕ್ಷ'ದ ವರೆಗಿನ ಅಕ್ಷರ ಮಾಲೆಯನ್ನು ಕಲಿಸುವುದನ್ನು ಅವರು ಸಂಪೂರ್ಣ ಬಿಟ್ಟಿದ್ದರು.

ಮೊತ್ತಮೊದಲು ಸುಲಭವಾಗಿ ವಯಸ್ಕರಿಗೆ ಬರೆಯಲು ಯಾವ ಅಕ್ಷರಗಳು ಬಹಳ ಉತ್ತಮವಾದುವು...?

೦ರಗ ರ೦ಗ ಗರಗರ

। \ / _ ⌋ ( ) ∩ ∪

ಹೀಗೆ ಅವರ ಪಾಠ ಪ್ರಾರಂಭ. ಅದಕ್ಕಿಂತಲೂ ಮೊದಲು -

ಈ ರೀತಿಯ ಗೆರೆ ಹಾಕುವಂತೆ ವಯಸ್ಕರಿಗೆ ತರಬೇತಿ ಕೊಡುತ್ತಿದ್ದರು.

ಈಗಿನ, ಶಿಕ್ಷಣವೇತ್ತರ ಮನೋಶಾಸ್ತ್ರಾಧರಿತ ಶಿಕ್ಷಣ ಪದ್ಧತಿಗೂ ಮಾರಪ್ಪ ಶೆಟ್ಟರ ಪ್ರಯೋಗ ನಾವೀನ್ಯತೆಗೂ ಹೆಚ್ಚಿನ ವ್ಯತ್ಯಾಸವಿದೆಯೆ?

ಎಳೆಯ 14ನೇ ವರ್ಷದಲ್ಲೇ ಶ್ರೀ ಪಂಜೆಯವರ ಆಶೀರ್ವಾದದಿಂದ ಉಪಾಧ್ಯಾಯರಾಗಿ ಕೆಲಸಕ್ಕೆ ಸೇರಿ ಹಲವು ಕಡೆಗಳಲ್ಲಿ ಸೇವೆ ಮಾಡಿ 1952ರಲ್ಲಿ ನಿವೃತ್ತರಾಗುವ ವರೆಗೆ ಅಧ್ಯಾಪಕರಾಗಿ ದುಡಿದರು. "ಸಾವಿರಾರು ಜನರಿಗೆ ಕಲಿಸಿದರು. ಅವರಲ್ಲಿ ಕಲಿತವನ ಮಗನೂ ಇವರ ಶಿಷ್ಯ; ಮೊಮ್ಮಗನೂ ಶಿಷ್ಯ. ಹೀಗಾಗಿ ಇವರು ದಾರಿಯಲ್ಲಿ ನಡೆಯುವಾಗ 'ನಮಸ್ಕಾರ ಮಾಸ್ಟ್ರೇ' ಎನ್ನುವವರೇ ಹೆಚ್ಚು. ವಿಶೇಷವೆಂದರೆ ಎಷ್ಟೋ ಮಂದಿಯ 'ಜಾತಕ'ವೇ ಅವರಲ್ಲಿ ಇತ್ತು ಎನ್ನುವಷ್ಟು ವಿವರಗಳನ್ನು ಹೇಳಬಲ್ಲವರಾಗಿದ್ದರು" (ಅ. ಬಾಲಕೃಷ್ಣ ಪೊಳಲಿ)

ಮಾರಪ್ಪ ಶೆಟ್ಟರ ಗಂಡು ಸ್ವರದ ಕಂಠಶ್ರೀ ನೆರೆಕರೆಗೂ ಕೇಳುವಂತಿತ್ತು. ಮನೆಯಲ್ಲಿ ಹಿರಿಯ ಮಕ್ಕಳಿಗೆ ರಾತ್ರಿ ಪಾಠ ಓದಿಸುವ ಅಭ್ಯಾಸವಿತ್ತೆಂದು ಅವರ ಮಗ ರಘುನಾಥ ಶೆಟ್ಟರು ಹೇಳುತ್ತಾರೆ. ಭಾಮಿನಿ, ವಾರ್ಧಿಕ್ಯದ 3-4ಗಣಗಳ, 5-5ಗಣಗಳ ಲಯವನ್ನು ರಾಗವಾಗಿ ಓದಿ, ಓದಿಸುತ್ತಿದ್ದರು. ರತ್ನಾಕರ ವರ್ಣಿಯ ಭರತೇಶ ವೈಭವ, ಸಂಚಿಯ ಹೊನ್ನಮ್ಮನ ಹದಿಬದೆಯ ಧರ್ಮ ತಂದೆಯೆದುರು ಸಾಂಗತ್ಯರಾಗವನ್ನು ಅವರಿಂದಲೇ ಕಲಿತು ಹಾಡುತ್ತಿದ್ದುದು ನೆನಪು. 'ಹೆಣ್ಣು ಹೆಣ್ಣೆಂದೇಕೆ.... ಹಣ್ಣಲ್ಲವೇ ಪೊರೆದವಳು' ಜೈಮಿನಿ ಭಾರತದ 'ಕತ್ತಲೆಯ ಮನೆಗೆ ಮಣಿದೀಪವಾದಂತೆ...' ಕ ವರ್ಗದ 'ಕಮಲದಳನಯನ ಕಾಳಿಯಮಥನ ಕಿಸಲಯೋಪಮ ಚರಣ...' ಇದನ್ನೆಲ್ಲಾ ಓದಿ, ಓದಿಸುತ್ತಿದ್ದರು. ಎಲ್ಲಕ್ಕಿಂತಲೂ ಅವರು ಕಲಿಸಲು ಪ್ರಯತ್ನಿಸಿದ ವ್ಯಾಕರಣವು ನಮಗೆ ಕಬ್ಬಿಣದ ಕಡಲೆಯಾಗಿತ್ತು. ಸಂಧಿ, ಸಮಾಸವಲ್ಲದೆ, 'ಕೃನ್ನಾಮ' 'ಕೃದ್ವಾಚಿ' (ಈಗಲೂ ಅದೇನೆಂದು ತಿಳಿಯಲು ಕಷ್ಟ) ಇತ್ಯಾದಿಗಳ ಕುರಿತು ವಿವರಿಸುತ್ತಿದ್ದರು. ಶಬರ-ಶಂಕರ ವಿಲಾಸ (ಷಡಕ್ಷರಿಯದೆಂದು ನೆನಪು)ದ 'ಸಕ್ಷಮ ದಕ್ಷ ಶಿಕ್ಷಣ ರಕ್ಷಣೇಕ್ಷಣಾ, ರಕ್ಷಿತ...' ಹೀಗೆ ಓದಿ, ರಂಗಾಗಿ ಕಾಣುತ್ತದ್ದುದರಿಂದ ಕಲಿತುದು ನೆನಪು. ಈ ಎಲ್ಲಾ ಪುಸ್ತಕಗಳೂ, ಇತರ ಹಲವಾರು ಗ್ರಂಥಗಳು ಅವರ ಕವಾಟಿನಲ್ಲಿತ್ತು. ಅವುಗಳಲ್ಲೊಂದು ತಿಲಕರ 'ಗೀತಾರಹಸ್ಯ' ಅದರ ಒಂದು ಅಧ್ಯಾಯವನ್ನು ನಾನೂ ನನ್ನ ತಂಗಿ ದಿ। ಸತ್ಯರತಿ - ಒಟ್ಟು ಸೇರಿ ಬರೆದು ಕಳುಹಿಸಿದ ಗೀತಾ ಸ್ಪರ್ಧೆಯಲ್ಲಿ ಮಂಜೇಶ್ವರ ಮದನಂತೇಶ್ವರ ಮಠದಿಂದ ಬಹುಮಾನ ಹಣ ಬಂದ ನೆನಪು.

ಗೃಹ ಸಂಸಾರ

ಹತ್ತೊಂಭತ್ತನೆಯ ಶತಮಾನದ 15 ಡಿಸೆಂಬರ್ 1894ರಿಂದ ಇಪ್ಪತ್ತನೆಯ ಶತಮಾನದ 20ಜೂನ್ 1987ರ ವರೆಗೆ ಶತಮಾನಗಳ ಸೇತುವಾಗಿ 93ವರ್ಷ ಬಾಳಿದ (92ವರ್ಷ 6ತಿಂಗಳು

5 ದಿನ) ನರ್ಕಳ ಮಾರಪ್ಪ ಶೆಟ್ಟರ ತುಂಬು ಜೀವನದ ಹಾಳೆಗಳನ್ನು ಮಗುಚಿ ನೋಡುವುದು ಕಷ್ಟಸಾಧ್ಯ.

ಮೊದಲ ಪುಟಗಳು ಹರಿದು ಕಿತ್ತು ಹೋಗಿವೆ. ನರ್ಕಳದಲ್ಲಿ ಅವರ ಹಿರಿಯರು, ತಾತ, ಜೀವನದ ನೆನಪು ಅವರೊಂದಿಗೇ ಮರೆಯಾಗಿದೆ. ನರ್ಕಳದಲ್ಲಿದ್ದ ಅವರ ಹಿರಿಯರು, ತಾತ, ಮುತ್ತಾತರ ವಿಷಯವೇ ತಿಳಿಯದು. ಸಮೀಪದ 2-3 ಪ್ರೈಮರಿ ಶಾಲೆಗಳಲ್ಲಿ ಕಲಿಯಬೇಕಾಗಿ ಬಂದು (ಯಾಕೆಂದು ತಿಳಿಯದು) ಕಡೆಯ ಪ್ರೈಮರಿ ಸಾಲೆತ್ತೂರು ಶಾಲೆ, 14ನೇ ವರ್ಷದಲ್ಲಿಯೇ ಅಧ್ಯಾಪಕನಾಗಿ ದುಡಿದ ಹತ್ತಿರದ ಮಾದಕಟ್ಟೆ ಶಾಲೆಗಳ ವಿವರವಷ್ಟೆ ಗೊತ್ತು.

ಅನಂತರ ಹರಿದು ಜೀರ್ಣವಾದ ಪುಟಗಳಲ್ಲಿ ನರ್ಕಳದ ಅವಿಭಕ್ತ ಕುಟುಂಬವು (Joint Family) ಆಸ್ತಿ ಮಾಡಿಕೊಂಡು ನೆಲೆಗಿಂತ ಸ್ಥಳ - ತುರುಕರಕೋಡಿ (ತುಳುವಿನ ವ್ಯುತ್ಪತ್ತಿ 'ತುರು'ವಿನಿಂದಾದುದೆ? ಮಾರಪ್ಪ ಶೆಟ್ಟರ ಸ್ಥಳನಾಮ ಸಂಶೋಧನೆಯಲ್ಲಿ ಹಾಲು ಮತದವರು - ತುರುವರು. ವೇದದಲ್ಲಿ ಕಾಣಬರುವ ತುರ್ವಶರು. ಇವರೇ ಯದುಗಳು-ಯಾದವರು ಗೋವಳರು. ಆದುದರಿಂದ ತುರುಕಾರರ ನಾಡೇ "ಕನ್ನಡ" - "ತುರುಕರ ಕೋಡಿ" ಎಂಬ ಈ ಸ್ಥಳ ಡಾ। ಗುರುರಾಜ ಭಟ್ಟರ ಗಮನಕ್ಕೂ ಬರಲಿಲ್ಲ).

ಪುತ್ತೂರಿನ ಪಶ್ಚಿಮ ದಿಕ್ಕಿಗೆ ವಿಟ್ಲ ಮಾರ್ಗವಾಗಿ ನರ್ಕಳ ಮಂಕುಡೆಗಳನ್ನೂ ದಾಟಿ ಇನ್ನೂ ಪಶ್ಚಿಮಕ್ಕೆ ಕೊಡ್ಲಮೊಗರನ್ನು ಹಿಂದಕ್ಕೆ ಬಿಟ್ಟು ಸುಂಕದಕಟ್ಟೆಯೆಂಬಲ್ಲಿ ಎಡಕ್ಕೆ, ಇಲ್ಲವೇ ಮಂಜೇಶ್ವರ ವಿಟ್ಲ ಮಾರ್ಗದಲ್ಲಿ ಮಂಜೇಶ್ವರದಿಂದ ಪೂರ್ವಕ್ಕಾಗಿ ಕಡಂಬಾರು, ಕೋಡಿಜಾಲು ದಾಟಿ - ಮಂಜೇಶ್ವರದಿಂದ 7-8 ಮೈಲು ಪೂರ್ವಕ್ಕೆ ಬಂದರೆ ಸಿಗುವ ಸುಂಕದಕಟ್ಟೆಯ, ಬಲಕ್ಕೆ ಇಳಿದರೆ 'ತುರುಕರಕೋಡಿ' ತಲುಪುತ್ತೇವೆ. 45 ಮುಡಿ ಗದ್ದೆ ಸಾಗುವಳಿ, 3-4 ಖಂಡಿ ಅಡಿಕೆ ಬೆಳೆ, ಬೆಟ್ಟು ಗದ್ದೆಗಳ ಆಸ್ತಿ.

ಮಾರಪ್ಪ ಶೆಟ್ಟರ ಹಿರಿಯ ಮಕ್ಕಳ ತಿಳಿವಿಗೆ ಬಂದ ಅವಿಭಕ್ತ ಕುಟುಂಬದ ವಿವರ-ಮಾರಪ್ಪ ಶೆಟ್ಟರ ತಾಯಿ ಕುಂಞಕ್ಕೆ, ತಾಯಿಯ ಸಹೋದರಿ, ಕಣ್ಣುಕಾಣದ ಅಜ್ಜಿ-ಅವರ ಮಗ ಕಾಂತಪ್ಪ, ಪತ್ನಿ ಸಂಸಾರ; ಕುಂಞಕ್ಕೆಯ ನಾಲ್ಕು ಮಕ್ಕಳಲ್ಲಿ ಹಿರಿಯವರು ಶಂಕರ ಶೆಟ್ಟಿ, ರಾಮಣ್ಣ ಶೆಟ್ಟಿ, ಮೂರನೆಯವರಾಗಿ ಮಾರಪ್ಪ ಶೆಟ್ಟಿ ಹಾಗೂ ಸಹೋದರಿ-ಇವರ ಸಂಸಾರ. ಸಹೋದರಿಯ ಮಕ್ಕಳು-ತೋಮು, ಸೀತ (ಹೆಣ್ಣು ಮಕ್ಕಳು) ದೂಮಪ್ಪ ಹೆಗ್ಗಡೆ, ವೆಂಕಪ್ಪ ಹೆಗ್ಗಡೆ (ಗಂಡು ಮಕ್ಕಳು) ಹೀಗೆ ಸಾಕಷ್ಟು ದೊಡ್ಡ ಅವಿಭಕ್ತ ಕುಟುಂಬ. ಹತ್ತಿರದ ಇತರ ಬಂಟ ಮನೆತನಗಳು-ಬಾಂದೋಡಿ (ಬಾವಂತಕೋಡಿ), ಅರಂತಾಲ್ (ಅರಂತಾಡಿ), ದೇವಸ, ಹಾಗೂ 'ಶೆಟ್ಟಿ ಬೆಟ್ಟು'.

'ಶೆಟ್ಟಿ ಬೆಟ್ಟು' ಮನೆತನದಲ್ಲಿ ಮಂಜರೈ, ರಾಮರೈ ಎಂಬ ಎರಡು ಸೋದರರ ಎರಡು ಮನೆಗಳು - 'ಮೇಲಿನ ಶೆಟ್ಟಿ ಬೆಟ್ಟು', 'ಕೆಳಗಿನ ಶೆಟ್ಟಿ ಬೆಟ್ಟು'. ಇವರಲ್ಲಿ 'ಮೇಲಿನ ಶೆಟ್ಟಿಬೆಟ್ಟಿನ' ಮಂಜರೈ 'ಕಾರುಬಾರು' ಮಾಡುವ ಬಂಟ ಯಜಮಾನ. ಯಾವುದಾದರೊಂದು ಕೋರ್ಟು ಕಚೇರಿ ಕೆಲಸವೆಂದು ಮಂಜೇಶ್ವರಕ್ಕೆ ಗಾಡಿಯಲ್ಲಿ ಪಯಣಿಸುವವರು. ಆ ಊರಿನಲ್ಲಿಯೇ ಎದ್ದು ಕಾಣುವ, ಹಂಚಿನ ಎರಡು ಮಾಳಿಗೆ ಮನೆಗಳು - ಮೇಲಿನ, ಕೆಳಗಿನ ಶೆಟ್ಟಿಬೆಟ್ಟು. ಎದುರಿಗೆ ತೋಟ, ಗದ್ದೆಗಳು, ಬದಿಯ ತೋಟ, ಬೆಟ್ಟುಗುಡ್ಡೆ, ಕುಮ್ಕಿ ಸ್ಥಳಗಳು.

'ಶೆಟ್ಟಿಬೆಟ್ಟು' ಮಂಜ ರೈಗಳ ಮೂರನೇ ಮಗಳು ರಾಮಕ್ಕಿಯನ್ನು ಮಾರಪ್ಪ ಶೆಟ್ಟರಿಗೆ ಕೊಟ್ಟು ನೆರವೇರಿದ ವಿವಾಹ ಆ ಎರಡು ಮನೆತನಗಳ ಪ್ರಥಮ ಸಂಬಂಧ ಬೆಳೆದು ಬಂತು.

ತುರುಕರ ಕೋಡಿ' ಮನೆತನದಲ್ಲಿ ಹಿರಿಯರಾದ ಶಂಕರ ಶೆಟ್ಟಿ ಊರಿನ ರಕ್ತೇಶ್ವರಿ (ಲೆಕ್ಕೆಸಿರಿ) ಭೂತಸ್ಥಾನದ ಪಾರುಪತ್ಯಗಾರರಲ್ಲಿ ಒಬ್ಬರಾಗಿದ್ದು ಕೈಗೆ 'ಬಳೆ' ತೊಟ್ಟವರು, ಉತ್ತಮ ಕೆಲಸಗಾರರೂ ಆಗಿದ್ದರು. ಆದರೆ 'ತುರುಕರಕೋಡಿನ' ಮನೆಯಲ್ಲಿ ವಿದ್ಯಾವಂತರಾದವರು ಮಾರಪ್ಪ ಶೆಟ್ಟರು ಮಾತ್ರ; ಅಲ್ಲದೆ ಅಧ್ಯಾಪಕರು. 'ತುರುಕರಕೋಡಿ' ಮನೆಯ ಯಜಮಾನರಾಗಿ ಅವಿಭಕ್ತ ಕುಟುಂಬದ ಮೇಲ್ವಿಚಾರಣೆ, ಹೊಣೆಗಾರಿಕೆಯೆಲ್ಲ ಮಾರಪ್ಪ ಶೆಟ್ಟರದು.

ಬಂಟರ ಅಳಿಯ ಕಟ್ಟಿನ ಕಟ್ಟಳೆಗನುಸಾರವಾಗಿ ಮಾರಪ್ಪ ಶೆಟ್ಟರು, ಸಹೋದರಿಯ ಮಕ್ಕಳಾದ 'ವೆಂಕಪ್ಪ ಹೆಗ್ಗಡೆ', 'ದೂಮಪ್ಪ ಹೆಗ್ಗಡೆ' (ಅವರ ತಂದೆಯವರು ಕಾಲವಾಗಿದ್ದರು)ಯವರನ್ನು ಶಾಲೆಗೆ ಕಳುಹಿಸಿ ವಿದ್ಯಾವಂತರನ್ನಾಗಿ ಮಾಡುವ ಪ್ರಯತ್ನವು ಫಲಕಾರಿಯಾಗಲಿಲ್ಲ. ಶಾಲೆಗೆಂದು ಕಳುಹಿಸಿದರೆ ಎಲ್ಲೆಲ್ಲಿ ತಿರುಗಾಡಿ ಹಿಂತಿರುಗಿ ಬರುತ್ತಿದ್ದರು. ಕಣ್ಣಿಗೆ ಮೆಣಸು ಹಾಕಿ ಬೆದರಿಸುವ ಉಪಾಯವೂ ಪ್ರಯೋಜನವಾಗಲಿಲ್ಲ. ಆದರೆ ಮಾರಪ್ಪ ಶೆಟ್ಟರ ಅಬ್ಬರದ ಮಾತು, ಕೋಪಾಟೋಪ, ಗಾಂಭೀರ್ಯ ನಡವಳಿಕೆಯಿಂದ, ಅವಿಭಕ್ತ ಕುಟುಂಬದವರೆಲ್ಲರಿಗೂ ಇವರಲ್ಲಿ ಭಯದಿಂದ ಕೂಡಿದ ವಿಧೇಯತನ. ಆದರೂ ಪ್ರಾಯಪ್ರಭುದ್ಧರಾಗುತ್ತಿರುವ ಅಳಿಯಂದಿರ ಕೆಲಸಗಳ್ಳತನ, ಅಡಿಕೆ ಇತ್ಯಾದಿಗಳ ಕಳ್ಳತನದೊಂದಿಗೆ ಎರಡನೆಯ ಅಳಿಯನ ಕುಡಿತ - ಈ ಪರಿಸ್ಥಿತಿಯಲ್ಲಿ ಮಾರಪ್ಪ ಶೆಟ್ಟರು ತನ್ನ ಮಕ್ಕಳ ಭವಿಷ್ಯವನ್ನು ರೂಪಿಸುವ ಆಲೋಚನೆಯಲ್ಲಿ ಮುಳುಗಿದರು. ಕೊಡ್ಲಮೊಗರು ಪಜ್ವ ವಾಣೀವಿಜಯ ಪ್ರೈಮರಿ ಶಾಲೆಯಲ್ಲಿ (ಅಲ್ಲಿರುವಾಗಲೇ 'ಸುಂದರಿಯ ಚಂದ' ಬರೆದುದು) ಅಧ್ಯಾಪಕರಿದ್ದರೂ ಮಕ್ಕಳ ವಿದ್ಯಾಭ್ಯಾಸಕ್ಕೆ ಮನೆತನದ ಪರಿಸರ ಸರಿಯಲ್ಲವೆಂದು ಮಾರಪ್ಪ ಶೆಟ್ಟರಿಗೆ ಮನವರಿಕೆಯಾಯಿತು.

ಕೊಡ್ಲಮೊಗರು ಶಾಲೆಯನ್ನು ತೊರೆದು ಮೂಡಂಬೈಲಿಗೆ ಅಪ್ಪಯ ಗಂಭೀರ (ಗಾಂಭೀರ್ಯ)ರೊಡನೆ ಬಂದು ಆ. ವಿ. ರಾಮಕೃಷ್ಣ ಶಾಸ್ತ್ರಿಗಳನ್ನು ಪರಿಚಯ ಮಾಡಿಕೊಂಡರು. ಶ್ರೀ ರಾಮಕೃಷ್ಣ ಶಾಸ್ತ್ರಿಗಳ ಮಾತಿನಲ್ಲಿ (ಮಾರಪ್ಪ ಶೆಟ್ಟರ ಮಗ ರಘುನಾಥ ಶೆಟ್ಟರೊಡನೆ ಶಾಸ್ತ್ರಿಗಳು ತೀರುವ ಕೆಲವೇ ವರ್ಷಗಳ ಮೊದಲೊಮ್ಮೆ ಭೇಟಿಯಾದ ಸಂದರ್ಭ), "ನಮ್ಮ ಬೈಲಿನ ಬದಿಯ ಜೋಂಪಡಿ ಶಾಲೆಯನ್ನು ಪ್ರಾರಂಭ ಮಾಡಿ, ಊರಿನ ಕೆಲವು ಮಕ್ಕಳನ್ನು ಹೆಗಲಲ್ಲಿ ಹೊತ್ತುಕೊಂಡು ಶಾಲೆಗೆ ಕರೆದುಕೊಂಡು ಹೋದುದರ ನೆನಪು ಇನ್ನೂ ಇದೆ." ಗದ್ದೆಯಲ್ಲಿ ಕಾಲುಚೆಂಡಾಟ, ನಾಟಕ, ಯಕ್ಷಗಾನ ಚಟುವಟಿಕೆಗಳಲ್ಲಿ ಭಾಗವಹಿಸಿದುದನ್ನೂ ವಿವರಿಸಿ "ಕೋಳಿಗೆ ಬೇಕಾಗಿ ಕೊಚ್ಚಿಗೆ ಪಯಣ.... ಏಳಿಗೆಯಪ್ಪುದೆ ಬಂಟರ ಜನನ..." ಎಂಬ ಮಾರಪ್ಪ ಶೆಟ್ಟರ ಕವಿತೆಯ (ಬಂಗಾರ ಪದಕ ಸಿಕ್ಕಿದ ಕವನದ ಗೆರೆಗಳು) ಚರಣಗಳನ್ನು ರಘುನಾಥ ಶೆಟ್ಟರ ಮುಂದೆ ನೆನಪಿಸಿಕೊಂಡೇ ಹೇಳಿದರು.

ಕಲ್ಲಮನೆ ವಾರಣಾಸಿ ಕೃಷ್ಣಯ್ಯರಿಗೆ ಅಡ್ಯನಡ್ಕದ ಕೆಳಗಿನಬೈಲು 'ಮರಕಿಣಿ' ಎಂಬಲ್ಲಿದ್ದ, ಒಂದೆರಡು ಖಂಡಿ ಅಡಿಕೆ ಕ್ಕೊಲಿನ ಆಸ್ತಿಯನ್ನು 'ಆರುವಾರ' ಕಾನೂನಿನನ್ವಯ ಕ್ರಯಕ್ಕೆ ತೆಗೆದುಕೊಂಡು, ಕೊಳ್ಳುವಾಗಲೇ ಕೊಟ್ಟ ಅಸಲು ಹಣ, ಬಡ್ಡಿ ಸಮೇತ ಗೇಣಿಯ ರೂಪದಲ್ಲಿ 20 ವರ್ಷದ ತನಕ ವಜಾ ಆಗುವಂತಹ ವ್ಯವಸ್ಥೆ ಮಾಡಿ, ವರ್ಷ ವರ್ಷವೂ ಗೇಣಿ ಸಂದಾಯ ಮಾಡುವ ಸಮಸ್ಯೆಯೇ ಇಲ್ಲದೆ, ತೋರಿಕೆಗೆ '20 ವರ್ಷದವರೆಗಿನ ಸ್ವಂತ ಆಸ್ತಿ'ಯೆಂಬಂತೆ ವ್ಯವಸ್ಥೆ

ಮಾಡಿ ಹೆಂಡತಿ ಮಕ್ಕಳನ್ನು ಮರಕಿಣಿಯಲ್ಲಿಯೇ ನೆಲೆ ನಿಲ್ಲಿಸಿ 'ತುರುಕರ ಕೋಡಿ'ಗೆ ಹೋಗಿ ಬರುತ್ತಾ, ಶಾಲಾ ದೀರ್ಘರಜೆಯಲ್ಲಿ ತುರುಕರ ಕೋಡಿಯಲ್ಲೇ ಸ್ವಲ್ಪ ಹೆಚ್ಚು ಸಮಯ ಇದ್ದುಕೊಂಡು, ಹೆಂಡತಿ ಮಕ್ಕಳನ್ನೂ ಕರೆದುಕೊಂಡು ಹೋಗಿ ಅಲ್ಲಿದ್ದುಕೊಂಡು, ದಿನದೂಡುವ ಸಾಹಸದಲ್ಲಿ ಸಫಲತೆಯನ್ನು ಕಂಡರು.

ವಾಣೀವಿಜಯ ಶಾಲೆಯನ್ನು ತೂರೆದ ದಿನಾಂಕ ದಾಖಲೆ ಪ್ರಕಾರ 7 ಜುಲಾಯಿ 1941 'ತುರುಕರ ಕೋಡಿ'ಯಿದ್ದುದು ಕಳಿಯೂರು ಗ್ರಾಮದಲ್ಲಿ. ಅದಕ್ಕೆ ತಾಗಿಕೊಂಡು ಕೋಳ್ಯೂರು ಗ್ರಾಮ. ಇನ್ನೊಂದು ಕಡೆ ವರ್ಕಾಡಿ ಗ್ರಾಮ. ಇನ್ನೊಂದು ಬದಿಯಲ್ಲಿ ಬಾಕ್ರಬೈಲು, ಕೋಣಿಬೈಲು, ಪಾತೂರು, ತಿಮ್ಮಂಗೂರು ಮೊದಲಾದ ಸ್ಥಳಗಳು. ಈ ಬಂಟರ ಪರಿಸರವನ್ನು ಹೆಚ್ಚು ಕಡಮೆ ಸಂಪೂರ್ಣ ಬಿಟ್ಟಂತೆ ಮೂಡಂಬೈಲಿನ 'ಹವ್ಯಕ' ವಾತಾವರಣದಲ್ಲಿ ಮುಂದಿನ ಜೀವನ ಮುಂದುವರಿಯಿತು.

"ವಿದ್ಯೆಯ ಸೌಕರ್ಯ ಕಡಮೆಯಿದ್ದ ಹಳ್ಳಿ-ಗಾಡುಗಳಲ್ಲಿ ಶಾಲೆಗಳನ್ನು ತೆರೆದು ಹೊಸ ಬೆಳಕನ್ನು ತಂದವರೆಂದು ಇಂದೂ ಅವರನ್ನು ಕೃತಜ್ಞತೆಯಿಂದ ನೆನೆಯುತ್ತಾರೆ" - ಎಂದು ಶ್ರೀ ಅ. ಬಾಲಕೃಷ್ಣ ಪೊಳಲಿಯವರು ತಮ್ಮ ಲೇಖನದಲ್ಲಿ ಹೇಳುತ್ತಾರೆ. ಸುಂಕದ ಕಟ್ಟೆಯಿಂದ ನಡೆದುಕೊಂಡೇ ಅನೇಕಲ್ಲು ಕಣ್ವಾನಗಳನ್ನು ದಾಟಿ ವಾಹನ ಮಾರ್ಗಬಿಟ್ಟು 'ಕುದ್ದು ಪದವಿ'ಗೆ ಸೇರಬಹುದಾದ ಕಾಲು ದಾರಿಯಲ್ಲಿ ನಡೆದು ಬರುವಾಗ 'ಎಂರ್ಬುಜೆ' ಎಂಬಲ್ಲಿ ಶಾಲೆಯ ಸ್ಥಾಪನೆಗೆ ಮಾರಪ್ಪ ಶೆಟ್ಟರೇ ಕಾರಣವೆಂದು ಹೇಳುವುದನ್ನು ಅವರ ಮಗ ರಘುನಾಥ ಶೆಟ್ಟರು ತಿಳಿದುಕೊಂಡರು. ವಿದ್ಯಾರ್ಥಿ ಜೀವನದಲ್ಲಿ ರಘುನಾಥ ಶೆಟ್ಟರೂ ಕುಟುಂಬದವರೊಡನೆ ಈ ದಾರಿಯಾಗಿ ಮರಕಿಣಿಯಿಂದ ತುರುಕರ ಕೋಡಿ, ಶೆಟ್ಟಿಬೆಟ್ಟುಗಳಿಗೆ ನಡೆದು ಹೋಗುತ್ತಿದ್ದುದನ್ನೂ ಈಗಲೂ ನೆನಪಿನಲ್ಲಿರಿಸಿಕೊಂಡಿದ್ದಾರೆ.

ಮಾರಪ್ಪ ಶೆಟ್ಟರ ವ್ಯಕ್ತಿತ್ವದ ಇನ್ನೊಂದು ಮುಖ ಇಲ್ಲಿ ವ್ಯಕ್ತಪಡಿಸುವುದು ಉಚಿತ. ಕುಟುಂಬ ಕುಟುಂಬಗಳ ಕಲಹಗಳು ದೊಡ್ಡದಾಗಿ ಕೋರ್ಟು ಮೆಟ್ಟಿಲು ಹತ್ತುವುದನ್ನು ಕಡೆಯಲು 'ಸಂಧಾನ' ಯತ್ನವನ್ನು ಮಾಡುತ್ತಿದ್ದ ವೈಶಿಷ್ಟ್ಯ ಮಾರಪ್ಪ ಶೆಟ್ಟರದು. ಈ 'ಸಂಧಾನ' ಕ್ರಮದಲ್ಲಿ ಬಂಟರಲ್ಲೇ ಪ್ರಖ್ಯಾತಿ ಪಡೆದವರು 'ದೇರ್ ಶೇಕ್'ರೆಂಬವರು. ದೇರ್ ಶೇಕರ ಕುಟುಂಬ ಕಲಹಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ತೀರ್ಮಾನ ಕೊಟ್ಟರೆ ಆ ತೀರ್ಮಾನ 'ಕೋರ್ಟಿನ ನ್ಯಾಯಾಧೀಶರ' ತೀರ್ಮಾನದಂತೆ ಎಂದು ಜನರಾಡುವುದುಂಟು; ಕೆಲವೊಂದು ಅವರ ತೀರ್ಮಾನವು ಕೋರ್ಟು ನ್ಯಾಯಾಧೀಶರ ಸಮುಖದಲ್ಲಿ ಕೋರ್ಟು ಮುದ್ರೆಯಿಂದ ದಾಖಲೆಯಾದ ಉದಾಹರಣೆಗಳುಂಟು. ಈ ರೀತಿಯ 'ಸಂಧಾನ'ದಿಂದ ಕುಟುಂಬಗಳಲ್ಲಿ ಶಾಂತಿ ಸ್ಥಾಪನೆಗೆ ದೇರ್ ಶೇಕರಂತೆ ತಮ್ಮದೇ ಆದ ಪರಿಸರ ಕ್ಷೇತ್ರಗಳಲ್ಲಿ ಪರ್ಯತ್ನಿಸಿ ಹೆಸರಾದವರು ಮಾರಪ್ಪ ಶೆಟ್ಟರು. ಇದಕ್ಕೆ ಉದಾಹರಣೆಯಾಗಿ ಅಳಿಕೆಯ 'ಮಿತ್ತಳಿಕೆ-ತಿರ್ತ ಅಳಿಕೆ' ಬಂಟಮನೆತನ ಕುಟುಂಬ ಕಲಹವನ್ನು ತೀರ್ಮಾನ ಮಾಡಲು ಪ್ರಯತ್ನಿಸಿದ್ದರು. ಮರಕಿಣಿ ಮನೆಯಲ್ಲೇ 'ಅಮೆಯಿ' ಎಂಬ ಹತ್ತಿರದ ಬೈಲಿನಲ್ಲಿದ್ದ ಎರಡು ಮಣಿಯಾಣಿ ಬಂಧುಗಳ ಕುಟುಂಬ ಕಲಹವನ್ನು ಇತ್ಯರ್ಥ ಮಾಡಲು ರಾತ್ರಿ-ಮಧ್ಯರಾತ್ರಿಯ ತನಕ ಪ್ರಯತ್ನಿಸಿದುದನ್ನು ರಘುನಾಥ ಶೆಟ್ಟರು ನೋಡಿದ್ದರು. ದಾಖಲೆಯಿಲ್ಲದ ಇತರ ತೀರ್ಮಾನವೂ ಇರುತ್ತಿತ್ತು. ಈ ರೀತಿಯ ಸಂಧಾನಕ್ಕೆ 'ಪಂಚಾಯತಿಗೆ' ಎಂದು ಹಳ್ಳಿಗಳಲ್ಲಿ ಹೆಸರು. ಮುಂದೆ ಜಿಲ್ಲಾಧಿಕಾರಿ ಮತ್ತು ಭಾಷಾ

ವಿದ್ವಾಂಸರೊಳಗೆ ಉಂಟಾದ ವಿರಸವನ್ನು ನೀಗಿಸಲು ಪ್ರಯತ್ನಿಸಿದ ಘಟನೆಯನ್ನು ಉದಾಹರಿಸಿದ ಅ. ಬಾ. ಪೊಳಲಿಯವ ಬರಹದ ವಿವರವನ್ನು ಹಿಂದೆಯೇ ಹೇಳಿದೆ.

ಮಾರಪ್ಪ ಶೆಟ್ಟರು ತನ್ನ ಹಿರಿಯ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸಕ್ಕಾಗಿ ಮನೆಯಲ್ಲೇ - ರಾತ್ರಿ ಹೊತ್ತು ಕೆಲವೊಮ್ಮೆ 'ಕಬ್ಬಿಣದ ಕಡಲೆ'ಯಂತೆ ವಿದ್ಯಾವಿವರಣೆ ಕೊಡುತ್ತಿದ್ದುದನ್ನು ಮೊದಲೊಂದು ಕಡೆ ಉಲ್ಲೇಖಿಸಿದೆ. ಅಣ್ಣ-ತಮ್ಮಂದಿರಿಗೆ ಹೊಸದಾಗಿ ಒಂದು ಮರದ ಮೇಜು ತಯಾರಿಸಿ 'ಎದುರು-ಬದಿರು' ತೆರೆಯಲಾಗುವ ಬಾಗಿಲುಗಳನ್ನು ಮಾಡಿಸಿ ಪುಸ್ತಕ ಸಾಮಾಗ್ರಿಗಳನ್ನು ಇಟ್ಟುಕೊಂಡು ಬೀಗ ಹಾಕಿಕೊಳ್ಳುವ ವ್ಯವಸ್ಥೆ ಮಾಡಿಕೊಟ್ಟದನ್ನು ರಘುನಾಥ ಶೆಟ್ಟರು ನೆನಪಿಸಿಕೊಳ್ಳುತ್ತಾರೆ.

ಮಾರಪ್ಪ ಸೆಟ್ಟರಿಗೆ ಹತ್ತು ಮಕ್ಕಳು. ಹಿರಿಯ ಮಕ್ಕಳಾದ ಮಹಾಬಲ ('ಬಾಲೆ'ಯೆಂದು ತಂದೆ-ತಾಯಿಯಿಬ್ಬರೂ ಕರೆಯುವ ಮುದ್ದಿನ ಹೆಸರು) ಮತ್ತು ರಘುನಾಥ ಇಬ್ಬರನ್ನೂ ಆಗ ವಿದ್ಯಾಭ್ಯಾಸಕ್ಕೆ ಹೆಸರು ಪಡೆದ ನೀಲೇಶ್ವರ ರಾಜಾಸ್ ಹೈಸ್ಕೂಲಿಗೆ ಸೇರಿಸಿ ಹೋಸ್ಟೆಲಿನಲ್ಲಿ ಇರಿಸಿ ಹೈಸ್ಕೂಲು ಶಿಕ್ಷಣ ಕೊಡಿಸಿದರು. ಅನಂತರ ಹುಟ್ಟಿದ ಐದು ಹೆಣ್ಣುಮಕ್ಕಳು, ಅನಂತರ ಒಂದು ಗಂಡು, ಕಡೆಯ ಹೆಣ್ಣು ಮಗು - ಹೀಗೇ ಏಳು ಹೆಣ್ಣು ಮಕ್ಕಳು, ಮೂರು ಗಂಡು ಮಕ್ಕಳು.

ಹಿರಿಯ ಹೆಣ್ಣು ಮಕ್ಕಳಾದ ಸತ್ಯ-ರತಿ, ಶಾರದೆಯವರು ಅಡ್ಯನಡ್ಕದಿಂದ ನಡೆದುಕೊಂಡೇ ಹೋಗಿ ಪೆರ್ಲ ಸತ್ಯನಾರಾಯಣ ಹೈಸ್ಕೂಲಿನಲ್ಲಿ 'ಹೈಸ್ಕೂಲು ಶಿಕ್ಷಣ' (S. S. L. C.) ಮುಗಿಸಿದರು. ಈ ಸಮಯದಲ್ಲಿ ನಿವೃತ್ತಿ ಪ್ರಾಯದಲ್ಲೇ ಮಕ್ಕಳೊಟ್ಟಿಗೆ ಮಾರಪ್ಪ ಶೆಟ್ಟರೂ S. S. L. C. ಪರೀಕ್ಷೆಗೆ ಹಣಕಟ್ಟಿ ಪರೀಕ್ಷೆಗೆ ಕೂತದೊಂದು ಸಾಹಸವೇ. (ಫಲಿತಾಂಶ ಏನಾಯಿತೆಂದು ಕೇಳಬೇಡಿ - ಮಕ್ಕಳು ಉತ್ತಮ ಶ್ರೇಣಿಯಲ್ಲಿ ಪಾಸದರೆ, ಮಾರಪ್ಪ ಶೆಟ್ಟರು ನಾ-ಪಾಸು!)

ಒಬ್ಬಿಬ್ಬರು ಹೆಣ್ಣು ಮಕ್ಕಳನ್ನು ಮರಕ್ಕಿಣೆಯ ಹತ್ತಿರದ ಅಮೆಯ ಸಂಸ್ಕೃತ ಶಾಲೆಗೂ ಕಳುಹಿಸಿದ್ದರು. ಹಿರಿಯ ಹೆಣ್ಣು ಮಕ್ಕಳಾದ ಸತ್ಯರತಿ-ಶಾರದೆಗೆ ಹಾರ್ಮೋನಿಯಂ ಒದಗಿಸಿ ಸಂಗೀತ ಶಿಕ್ಷಕರೊಬ್ಬರಿಗೆ ದಕ್ಷಿಣಾದಿ ಕರ್ನಾಟಕ ಸಂಗೀತ ಕಲಿಸುವ ಏರ್ಪಾಡು ಮಾಡಿದರು. ಸರಳ ರಗಳೆಯಿಂದ ಪ್ರಾರಂಭವಾಗಿ ಕೀರ್ತನಗಳವರೆಗಿನ 400 ಪುಟದಲ್ಲಿ ಬರೆದಿಟ್ಟ ಸಂಗೀತ ಪುಸ್ತಕ ಈಗಲೂ ಮನೆಯಲ್ಲಿದೆ.

ಮದ್ರಾಸು ಸರಕಾರದ ಆರುವಾರ ತಿದ್ದುಪಡಿ ಶಾಸನ (Agricultural Mortgage Debt Release Act) ಬಂದದ್ದೇ ತಡ, ಮರಕಿಣೆಯ ಅಡಿಕೆ ತೋಟದ ಆಸ್ತಿಯು ವಾರಣಾಸಿ ಕೃಷ್ಣಯ್ಯ ಸುಬ್ರಾಯ ಭಟ್ಟರ ಕೈಯಿಂದಲೂ ತಪ್ಪಿ ಮೂಲಹಕ್ಕೂದಾರರಾದ ಮಣಿಮುಂಡದ ಶಾಸ್ತ್ರಿಗಳದ್ದೆಂದು ಕೋರ್ಟು ತೀರ್ಮಾನ ಹೊರಬಿದ್ದ ಕ್ಷಣವೇ, ಮೂಲ ಹಕ್ಕುದಾರರು ಮನೆ ಸಾಮಾನುಗಳೂ ಸಮೇತ ಮರಕಿಣೆ ತೋಟದ ಮನೆಗೆ ಫೇರಾಯಿಸಿದರು.

ಮಾರಪ್ಪ ಶೆಟ್ಟರ ಧರ್ಮಶ್ರದ್ಧೆಯಲ್ಲಿ 'ಸತ್ಯ ನಾರಾಯಣ ಪೂಜೆ' ಚಿರಸ್ಥಾಯಿ. ನೆರೆಯ ಮನೆಗಳೆಲ್ಲಾ ಹವ್ಯಕ ಬ್ರಾಹ್ಮಣರದು 'ಮುರೆ'ಗೋವಿಂದ ಭಟ್ಟರು, ಇನ್ನೊಬ್ಬ ಮರಕಿಣೆ ಗೋವಿಂದ ಭಟ್ಟರು (ಒಬ್ಬರು ಉತ್ತರ ಬದಿ, ಇನ್ನೊಬ್ಬರು ದಕ್ಷಿಣ ಬದಿ) ಮತ್ತು ಶ್ರೀ ತಿಮ್ಮಣ್ಣ ಭಟ್ಟರದು. 'ಸತ್ಯನಾರಾಯಣ ಪೂಜೆ' ಮಾಡಿಸುವುದು ಶ್ರೀ ತಿಮ್ಮಣ್ಣ ಭಟ್ಟರಲ್ಲಿ. ಪೂಜೆಯೂ ಕ್ರಮಬದ್ಧವಾಗಿ.

ಎಲ್ಲಾ 'ಸತ್ಯನಾರಾಯಣ ಕಥೆ'ಗಳ ಅರ್ಥ ತುಳು ಭಾಷಾಂತರ, ನಡುವೆ ಸಂಸ್ಕೃತ ಪದಗಳ ಅರ್ಥವನ್ನು ಮಾರಪ್ಪ ಶೆಟ್ಟರು ಶ್ರುತಪಡಿಸುವ ರೀತಿ, ಮಂಗಳಾರತಿಯಾಗಿ, ಜೀವನದಲ್ಲೆಂದಿಗೂ ಇಷ್ಟು ಸಿಹಿರುಚಿಯಾದ ಪ್ರಸಾದವನ್ನು ತಿನ್ನದ ಮಕ್ಕಳಾದ ನಾವು 'ಸಪಾದ ಭಕ್ಷ್ಯ'ಕ್ಕಾಗಿ (ಸ-ಪಾದ =ಒಂದೂ ಕಾಲು ತೂಕ - ತುಪ್ಪ, ಹೀಗೆ ಸಕ್ಕರೆ, ಕದಳೀಫಲ, ಹಾಲು, ಗೋದಿ) ಕಾಯುವ ಕ್ಷಣಗಳು - ಮರೆಯಲಾರದ ನೆನಪು 'ಸತ್ಯನಾರಾಯಣ ಪೂಜೆಗೆ, ದಿನ, ತಿಥಿ ನಿಶ್ಚಯಿಸಿದ ದಿನದಿಂದ, ಮಕ್ಕಳಾದ ನಮ್ಮನ್ನು ತಂದೆಯವರು ಆ ಪೂಜೆಯಲ್ಲೇ ತನ್ಮಯರಾಗುವಂತೆ ಮಾಡುತ್ತಿದ್ದರು. "ಕವೀರ ಪುಷ್ಪಾಯನ್ನಮಃ ಬಕುಳ ಪುಷ್ಪಾಯನ್ನಮಃ ಅಶೋಕಪುಷ್ಪಾಯನ್ನಮಃ.." ಎಂದು ಪೂಜೆಯ ಅರ್ಚಕರು ಪುಷ್ಪಗಳನ್ನರ್ಪಿಸುವಾಗ ಆಯಾಯ ಪುಷ್ಪಗಳು ಸಾಧ್ಯವಾದಷ್ಟು ಇರಬೇಕೆಂದು, ಮಕ್ಕಳಾದ ನಮ್ಮನ್ನು ಗಂಭೀರವಾಗಿ ಅಜ್ಞಾಪಿಸಿ ಈ ರೀತಿಯ ಹೆಸರಿನ ಪುಷ್ಪಗಳನ್ನು ಪೂಜೆಯ ದಿನ ಬೆಳಗ್ಗಿನಿಂದ ಎಲ್ಲಿದ್ದರೂ ಸಂಗ್ರಹಿಸಬೇಕೆಂದು ನಮ್ಮನ್ನು ಹೊಡೆದಟ್ಟುವುದು. ಒಮ್ಮೆ ನಾನು ಬಿಕ್ಕಳಿಸಿಕೊಂಡು ಸ್ವಲ್ಪ ದೂರದ 'ಚಿವರ್ಕಾಡು' ಎಂಬಲ್ಲಿಗೆ ತೆರಳಿ ಇಂತಹ ಹೂಗಳನ್ನು ಸಂಗ್ರಹಿಸಿ ತಂದುದು. ಮರೆಯಲಾರೆ' ಎನ್ನುತ್ತಾರೆ ರಘುನಾಥ ಶೆಟ್ಟರು.

ಮಣುಮುಂಡದ ಶಾಸ್ತ್ರಿಗಳ ಜನರು ಮನೆ ಪ್ರವೇಶಿಸಿದಾಗ ಮನೆಯನ್ನು ಶುದ್ಧವಾಗಿರಿಸಿ ಸತ್ಯನಾರಾಯಣ ಪೂಜೆ ಕಡೆಯದಾಗಿ ಮಾಡಿಸುತ್ತಿದ್ದರು ಮಾರಪ್ಪ ಶೆಟ್ಟರು.

ಕೈಮುಗಿದು ಧ್ಯಾನದಲ್ಲಿದ್ದ ಮಾರಪ್ಪ ಶೆಟ್ಟರ ಮನಸ್ಸಿನಲ್ಲಿದ್ದುದು ಖಂಡಿತವಾಗಿಯೂ-ತಾನು ಸಾಕಿ ಸಲಹಿದ ಅಡಿಕೆ-ತೋಟವನ್ನು ಅಗಲುವ ತುಮುಲ.

'ಒಂದೆರಡು ಖಂಡಿ ಅಡಿಕೆಯಾಗುವ ತೋಟದಲ್ಲಿ ಕಡೆಯ ವರ್ಷದ ಸಮೃದ್ಧಿಯಾದ ನಡುಕ್ಕೊಲಿನಲ್ಲಿ ದೊರೆತ ಅಡಿಕೆಯೂ ಕೂಡಿ - ನಾಲ್ಕು ಕ್ಕೊಲಿನಲ್ಲಿ ಒಟ್ಟು ದೊರೆತು, ಒಣಗಿಸಿ, ಸುಲಿದ ಅಡಕೆಯ ಗೋಣಿ ಕಟ್ಟುಗಳನ್ನು ಅಡ್ಯನಡ್ಕದ ಲಕ್ಷ್ಮಣ ಪೈಯವರ ಭಂಡಸಾಲೆಯಲ್ಲಿ ತೂಗಿದಾಗ ನಾಲ್ಕು ಖಂಡಿ! ಹೆಂಡತಿ, ಮಕ್ಕಳೊಡನೆ - ಕೆಲವೊಮ್ಮೆ ಒಂದು ಆಳನ್ನು ಸಹಾಯಕ್ಕೆ ತೆಗೆದುಕೊಂಡು, ಕ್ಕೊಲಿಗೆ ಇನ್ನೊಬ್ಬ ಆಳನ್ನು ಕರೆಯುವುದಲ್ಲದೆ, ಉಳಿದ ಎಲ್ಲಾ ಕೆಲಸವನ್ನು ತಾವೇ ಮಾಡಿ, ಬೆಳೆಸಿದ ತಂದೆಯವರ ಅಡಿಕೆ ಕೃಷಿ ತಜ್ಞತೆಯ ವಿಷಯ ಬರೆಯಲು ಇಂತಹ ಒಂದು ಸಣ್ಣ ಪುಸ್ತಕವೇ ಬೇಕಾದೀತು, ಬರೆಯಲು ಬೇಕಾದ ವಿವರಗಳೂ ನನ್ನಲ್ಲಿ ಸಾಕಷ್ಟಿವೆ' ಎನ್ನುವರು ರಘುನಾಥ ಶೆಟ್ಟರು. 'ಚಾಲಗೇಣಿಗಾದರೂ ಅಡಿಕೆ ತೋಟವನ್ನು ನೋಡಿಕೊಳ್ಳಲು ಅನುಕೂಲಿಸಿ' ಎಂಬುದಕ್ಕೂ ಕಿವಿಗೊಡದಿದ್ದಾಗ, ಸ್ವಲ್ಪ ಸಮಯ ಅಡ್ಯನಡ್ಕ ಪೇಟೆಯ ಪದ್ಯಾಣ ಈಶ್ವರ ಭಟ್ಟರಿಗೆ ಸೇರಿದ ಮನೆಯೊಂದರಲ್ಲಿದ್ದು, ಅಲ್ಲಿಂದ ಮುಂದೆ ಬಿಜೈಯಲ್ಲಿ ಮನೆ ಮಾಡಿ 1952ನೇ ಇಸವಿ ಮುಂದೆ 41 ವರ್ಷ ಅಲ್ಲೇ ಇದ್ದು ಮಂಗಳೂರಿನವರಾದರು.

ಈ ಸಂದರ್ಭದಲ್ಲಿ ಮಾರಪ್ಪ ಶೆಟ್ಟರ ವ್ಯಕ್ತಿತ್ವದ ಇನ್ನೊಂದು ಮುಖವನ್ನು ಕಾಣ ಬಹುದಾಗಿದೆ. ಮರಕಿಣಿ ಮನೆ, ಅಡಿಕೆ ತೋಟವನ್ನು ಬಿಟ್ಟವರು ನೇರವಾಗಿ 'ತುರುಕರ ಕೋಡಿಗೆ' ತನ್ನ ಕುಟುಂಬದ ಮನೆಗೇ ತನ್ನ ಹಕ್ಕಿನ ಪಾಲಿನ ದೃಷ್ಟಿಯಿಂದಲಾದರೂ ಹೋಗಿ ನೆಲೆಯಾಗಬಹುದಿತ್ತು; ಅಥವಾ ಹೆಂಡತಿಯ-ಅದರಲ್ಲೂ ಅಳಿಯಕಟ್ಟಿನಲ್ಲಿ ಇನ್ನೂ ಹೆಚ್ಚು ಹಕ್ಕಿನ - ಶೆಟ್ಟಿ ಬೆಟ್ಟು ಮನೆಯಲ್ಲಿ ನೆಲೆಯಾಗಬಹುದಿತ್ತು. ಆದರೆ ಅಲ್ಲಿಗೆ ಮುಖ ತಿರುಗಿಸದೇ 'ತುರುಕರ ಕೋಡಿ'ಯನ್ನು ಅಕ್ಕನ ಮಕ್ಕಳಿಗೆ ಬಿಟ್ಟುಕೊಟ್ಟು ಒಂದು ದುಗ್ಗಾಣಿ ಫಲವನ್ನೂ ನಿರೀಕ್ಷಿಸಲಿಲ್ಲ.

ಹೆಂಡತಿಯ ಆಸ್ತಿಯ (ಅಡಿಕೆ ತೋಟ, ಗದ್ದೆ) ಪಾಲನ್ನು ಹೆಂಡತಿಯ ಅಕ್ಕ-ತಂಗಿಯರೇ ಅನುಭವಿಸುತ್ತಾ ವರ್ಷ ವರ್ಷ ಅಕ್ಕಿ ಕಾಯಿ ಕಳುಹಿಸುತ್ತಾ ಇದ್ದರೂ ಹೆಂಡತಿಯ 'ಮೇಲಿನ ಶೆಟ್ಟಿ ಬೆಟ್ಟಿ'ಗೆ ಹೋಗಿ ಹಕ್ಕು ಸ್ಥಾಪನೆ ಮಾಡುವ ಆಲೋಚನೆಯನ್ನೇ ಬಿಟ್ಟರು.

ಮಂಗಳೂರಲ್ಲಿ ಕಳೆದ ಮಾರಪ್ಪ ಶೆಟ್ಟರ ಉತ್ತರಾರ್ಧಕಾಲದ ಸುಮಾರು 40 ವರ್ಷಗಳಲ್ಲಿ ಪ್ರಾರಂಭದ ಕೆಲವು ವರ್ಷಗಳು ಆರ್ಥಿಕವಾಗಿ ಅತ್ಯಂತ ಕಷ್ಟದ ವರ್ಷಗಳಾಗಿದ್ದುವು. ಗೃಹ ಸಂಸಾರದ ಹೊಣೆಗಾರಿಕೆಯ ಯಾವ ಸಣ್ಣ ವಿಷಯವನ್ನೂ ಸ್ವಲ್ಪವೂ ಮಕ್ಕಳಿಗೆ ವರ್ಗಾಯಿಸದೆ, ಕಷ್ಟವೆಂದರೇನೆಂದೇ ತಿಳಿಯದಂತೆ ಸಾಕಿದ ಮಕ್ಕಳಿಗೂ ಈ ಪ್ರಾರಂಭದ ವರ್ಷಗಳು ಅತ್ಯಂತ ಕಷ್ಟಕರವಾಗಿದ್ದುವು.

ಅವಿಭಕ್ತ ಕುಟುಂಬಿಕರಲ್ಲೇ ಮೊತ್ತ ಮೊದಲು ವಿದ್ಯಾರ್ಜನೆ ಮಾಡಿದ ದಾಖಲೆಯನ್ನು ಸ್ಥಾಪಿಸಿದ ನರ್ಕಳ ಮಾರಪ್ಪ ಶೆಟ್ಟರು ತನ್ನ ಹತ್ತು ಮಕ್ಕಳನ್ನು ವಿದ್ಯಾವಂತರನ್ನಾಗಿ ರೂಪಿಸಿ ಇನ್ನೊಂದು ದಾಖಲೆಯನ್ನು ಸ್ಥಾಪಿಸಿದರು.

ಪ್ರಥಮ ಹಂತದಲ್ಲಿ ಹತ್ತು ಮಕ್ಕಳು ಹೈಸ್ಕೂಲು ವಿದ್ಯಾರ್ಜನೆಯ ಅನಂತರ ಏಳು ಮಕ್ಕಳು - ಐದು ಹೆಣ್ಣು ಮಕ್ಕಳು ಸಹಿತ - ಪದವೀಧರರು.

ಹಿರಿಯ ಪುತ್ರ ಮಹಾಬಲ ಶೆಟ್ಟರು ಪ್ರಸಿದ್ಧ ಹಂಚಿನ ಕಾರ್ಖಾನೆಯ (C.T.L.Common Wealth)ಮೇಲ್ವಿಚಾರಣೆಯ ಅಧಿಕಾರಿಯಾಗಿ ನಿವೃತ್ತಿಯಾದರು. ಎರಡನೆಯ ಮಗನೊಬ್ಬನೇ ತಂದೆಯ ಹೆಜ್ಜೆಯನ್ನನುಸರಿಸಿ, M.A., M.Ed. (M.Ed.ನಲ್ಲಿ ವಿಶ್ವವಿದ್ಯಾಲಯ ದಲ್ಲೇ ಎರಡನೇ Rank) ಉಪಾಧ್ಯಾಯರಾಗಿ, ಮುಖ್ಯೋಪಾಧ್ಯಾಯರಾಗಿ, ತರಬೇತಿ ಕಾಲೇಜಿನಲ್ಲಿ (Manipal B.Ed. College & St. Ann's College of Edn.) ಪ್ರಾಧ್ಯಾಪಕರಾಗಿ ಕೇಂದ್ರ ಸರಕಾರದ ಕೇಂದ್ರೀಯ ವಿದ್ಯಾಲಯಗಳಲ್ಲಿ ಪ್ರಿನ್ಸಿಪಾಲರಾಗಿ 1989ರ ಸಾಲಿನ ಶಿಕ್ಷಕರ ರಾಷ್ಟ್ರ ಪ್ರಶಸ್ತಿ ಪಡೆದು ನಿವೃತ್ತರಾಗಿದ್ದಾರೆ. ಅನಂತರದ ಕು। ಸತ್ಯರತಿ ಮದ್ರಾಸು ವಿಶ್ವವಿದ್ಯಾಲಯದಲ್ಲಿ B.A.ಪದವಿಯನ್ನು ಗಳಿಸುವುದರೊಂದಿಗೆ ಕನ್ನಡದಲ್ಲಿ ವಿಶ್ವವಿದ್ಯಾಲಯದ 'ಶ್ರೀ ಕೃಷ್ಣಮೂರ್ತಿ ಪ್ರಶಸ್ತಿ'ಯನ್ನು ಗಳಿಸಿ, B.Ed. ಮಾಡುತ್ತಿರುವಾಗ ಅಸೌಖ್ಯದಿಂದ ತೀರಿದರು. ಕು। ಶಾರದ ಪದವೀಧರೆಯಾಗಿ B.Ed. ಆಗಿಲ್ಲವಾದ್ದರಿಂದ ಪ್ರಸಿದ್ಧ ಕಂಪೆನಿ (C.P.C.)ಯೊಂದರಲ್ಲಿ ಲೆಕ್ಕ ಪರಿಶೋಧಕರಾಗಿದ್ದರೂ ಅಸೌಖ್ಯದಿಂದಾಗಿ ತಂದೆಯ ಧಾರ್ಮಿಕ ಶ್ರದ್ಧೆಯ ಪ್ರತಿಮೂರ್ತಿಯಾಗಿ ದಿನಗಳೆಯುತ್ತಿದ್ದಾರೆ. ಶ್ರೀಮತಿ ಗುಲಾಬಿ ಶೆಟ್ಟಿ ಪ್ರೈಮರಿ ಶಾಲಾಧ್ಯಾಪಿಕೆಯಾಗುವ ಮನಸ್ಸು ತೋರಿದರೂ ವಿವಾಹವಾದ ಅನಂತರ ಅದನ್ನು ಕೈಬಿಟ್ಟರು. ಶ್ರೀಮತಿ ವೇದಾವತಿಯವರು ಪ್ರಾರಂಭದಲ್ಲಿ ಶಾಲಾಧ್ಯಾಪಿಕೆಯಾಗಿದ್ದರೂ ಅನಂತರ ಸರಕಾರೀ ಕೆಲಸದಲ್ಲಿ ಶಿಕ್ಷೆಗೊಳಗಾದ ಮಹಿಳಾಗೃಹ (Remand Home)ಮೇಲ್ವಿಚಾರಿಣಿಯಾಗಿ (Superintendent) ಈಗ, ಶಿಕ್ಷೆಗೊಳಗಾದ ಬಾಲಕರ ಉದ್ಧಾರದ ಯೋಜನಾಧಿಕಾರಿ (Child Development Project Officer)ಯಾಗಿದ್ದಾರೆ. ಶ್ರೀಮತಿ ಶಾಂಭವಿ, ಬಿ.ಎಸ್‌ಸಿ. (B.Sc.) ಪದವೀಧರೆಯಾಗಿ ಕೇಂದ್ರ ಸರಕಾರದ ಇನ್ಸೂರೆನ್ಸ್ ಖಾತೆಯಲ್ಲಿ (LIC of India) ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದಾರೆ. ಶ್ರೀಮತಿ ಭವಾನಿ ಶೆಟ್ಟಿ, B.Com. ಪದವೀಧರೆಯಾಗಿ ವಿಜಯಾ ಬೇಂಕಿನಲ್ಲಿ ಹಿರಿಯ ವ್ಯವಸ್ಥಾಪಕಾಧಿಕಾರಿ (Senior Manager)ಯಾಗಿ ಪ್ರಶಸ್ತಿ ಗಳಿಸಿದ ಕೆಲವೇ ಅಧಿಕಾರಿಗಳಲ್ಲಿ ಒಬ್ಬರಾಗಿದ್ದಾರೆ. ಜಯರಾಮ ಶೆಟ್ಟಿ,

B.A. ಪದವೀಧರನಾಗಿ ವಿಜಯಾ ಬ್ಯಾಂಕಿನಲ್ಲಿ ಅಧಿಕಾರಿ ಹುದ್ದೆಯಲ್ಲಿದ್ದಾರೆ. ಕಡೆಯ, ಅತ್ಯಂತ ಕಿರಿಯ ಮಗಳು B.Sc. ಪದವೀಧರೆಯಾಗಿ, ವಿಜಯಾ ಬ್ಯಾಂಕಿನಲ್ಲಿ ಅಧಿಕಾರಿ ಹುದ್ದೆಯಲ್ಲಿದ್ದಾರೆ. ಹೆಣ್ಣುಮಕ್ಕಳ ಗಂಡಂದಿರು, ಗಂಡು ಮಕ್ಕಳ ಪತ್ನಿಯರೂ ಉತ್ತಮ ಶ್ರೇಣಿಯ ಅಧಿಕಾರಿಗಳಾಗಿದ್ದಾರೆ. ಮಾರಪ್ಪ ಶೆಟ್ಟರ ಸೊಸೆಯೊಬ್ಬರು (ರಘುನಾಥ ಶೆಟ್ಟರ ಪತ್ನಿ ಚಂದ್ರಪ್ರಭಾ) ಕೇಂದ್ರ ದೂರವಾಣಿ ಖಾತೆಯಲ್ಲಿ (Dept. of Telecommunication) ಡಿವಿಜಿನಲ್ ಎಂಜಿನಿಯರ್ (Divisional Engineer of Telecommunication) ಆಗಿದ್ದಾರೆ. ಮಗಳು ಶಾಂಭವಿ, ಸೊಸೆ ಚಂದ್ರಪ್ರಭಾ ಒಟ್ಟೊಟ್ಟಿಗೆ ಗವರ್ನ್‌ಮೆಂಟ್ ಕಾಲೇಜಿನಲ್ಲಿ ಪದವಿ ಶಿಕ್ಷಣ ಮಾಡುತ್ತಿದ್ದುದನ್ನು ಸಂತೃಪ್ತ ಭಾವದಿಂದ ನೋಡಿದಾಗ, ಒಂದು ಹಂತದಲ್ಲಿ ಮಗ ರಘು ಮಂಗಳೂರು ಬಂಟ್ಸ್ ಹೋಸ್ಟೆಲಿನಲ್ಲಿ, ಹೆಣ್ಣುಮಕ್ಕಳಾದ ಸತ್ಯರತಿ, ಶಾರದೆ, ಹತ್ತಿರದ ಈಶ್ವರಾನಂದ ಮಹಿಳಾ ಸೇವಾಶ್ರಮದ ಹೋಸ್ಟೆಲಿನಲ್ಲಿ ಹೀಗೆ ಮೂರು ಮಕ್ಕಳ ಕಾಲೇಜು ವಿದ್ಯಾಭ್ಯಾಸವನ್ನು ಏಕಕಾಲದಲ್ಲಿ ಮಾಡಿಸಿದುದಲ್ಲದೆ, ಮಗಳು ಸತ್ಯರತಿಯನ್ನು ವೈದ್ಯಕೀಯ (M.B.B.S) ಶಿಕ್ಷಣ ಸೇರ್ಪಡೆಯ ಸ್ಪರ್ಧಾಪರೀಕ್ಷೆಗೂ ದಾಖಲೆ ಮಾಡಲೂ ಪ್ರಯತ್ನಿಸಿದ ಸಾಹಸವನ್ನು ನೆನೆಯುತ್ತಾ ಶ್ರೀ ಮಾರಪ್ಪ ಶೆಟ್ಟರು ಸಂತೃಪ್ತಾಶ್ರುಗಳನ್ನು ಸುರಿಸುತ್ತಿದ್ದುದು ಕಲ್ಪನೆಯಲ್ಲ.

ಅಂತ್ಯದಲ್ಲಿ, ನರ್ಕಳ ಮಾರಪ್ಪ ಶೆಟ್ಟರು ತುಂಬು ಜೀವನದ ಬಹುಮುಖಿ ವ್ಯಕ್ತಿತ್ವದ ಚರ್ವಿತ ರೂಪುರೇಖೆಗಳ ಚರ್ವಣ ಮಾಡಬಯಸುವುದಿಲ್ಲ. ಸಾಮಾನ್ಯ ಮಧ್ಯಮ ಕುಟುಂಬದ ನಿರಕ್ಷರತೆಯ ಕೂಪದಿಂದ ಹೊರ ಬಂದ ವ್ಯಕ್ತಿಯ ಕಿರಿದಾದ ಬಾಳಿನ ವರ್ತುಲವು ಸುತ್ತಲೂ ವೃದ್ಧಿಸುತ್ತಾ ಇಷ್ಟೊಂದು ಕ್ಷಿತಿಜ ವ್ಯಾಪ್ತಿಯಾಗಲು ಸಾಧ್ಯವಿದೆಯೇ ಎಂದು ಶಂಕಿಸುವಂತೆ ನರ್ಕಳ ಮಾರಪ್ಪ ಶೆಟ್ಟರ ಜೀವನವು ಕಾಲದ ವಿಶಾಲ ವರ್ತುಲದೊಂದಿಗೆ ಐಕ್ಯವಾಗಿ ದೂರ ದಿಗಂತದಲ್ಲಿ ಕಣ್ಮರೆಯಾಯಿತು....

...ಕಣ್ಮರೆಯಾಗದೆ ಎಂದೆಂದೂ ಹೃದಯಾಕಾಶದಲ್ಲಿರುವ ನಮ್ಮ ತಾಯಿ, ಹತ್ತು ಮಕ್ಕಳನ್ನು ಹೆತ್ತು ಸಲಹಿದ ತಾಯಿ, ಪತಿಯನ್ನಾಗಲೀ, ಮಕ್ಕಳನ್ನಾಗಲೀ ಒಂದಿನಿತು ನೋಯಿಸದೆ, ತಾಳ್ಮೆಯೇ ಮೂರ್ತಿವೆತ್ತು, ಪತಿಪರಾಯಣೆಯಾಗಿ, ತ್ರಿಕರಣ ಪೂರ್ವಕ ಪ್ರೀತಿಸಿದ ನಮ್ಮ ತಾಯಿ, 'ಪೋರ್ಲ ಕಂಟ್' ಬಾಲ ಮಾಧವನ ಅದೃಶ್ಯ ಕಣ್ಣುಮುಚ್ಚಾಲೆಯಲ್ಲಿ ಅಂತರ್ಗತವಾಗಿ ದಿಗಂತದ ಉದಯಾಸ್ತ ಸ್ವರ್ಣಕೇದಿಗೆಯ ಪ್ರಭಾವಲಯದಲ್ಲಿ ಮಿಂಚುತ್ತಾ, ಮಿನುಗುತ್ತಾ, ನಮ್ಮ ತಾಯಿ, ನಮ್ಮ ದೈವ ನಮ್ಮನ್ನು ಹರಸುತ್ತಿರಲಿ!

- ಇಂತು ಮಕ್ಕಳು

ತುಳುನಾಡು, ತುಳುಭಾಷೆ, ಸಾಹಿತ್ಯ ಸಂಸ್ಕೃತಿ ಮತ್ತು ತುಳುವರ ಏಳಿಗೆಗಾಗಿ ತಮ್ಮ ಸರ್ವಸ್ವವನ್ನೂ ಮುಡಿಪಿಟ್ಟು ಬಹಳಷ್ಟು ಹೆಣಗಾಡಿರುವ ನಮ್ಮ ಹಿರಿಯರ ಸಾಧನೆಗಳನ್ನು ಅವರು ತುಳುವಿಗಾಗಿ ಸಲ್ಲಿಸಿದ ಕಾಣಿಕೆಗಳನ್ನು ಎಲ್ಲರಿಗೂ ತೋರಿಸಿ ತಿಳಿಸಿಕೊಡುವ ಉದ್ದೇಶದಿಂದ 'ಮರೆಯಬಾರದ ತುಳುವರು' ಪುಸ್ತಕ ಮಾಲೆಯನ್ನು ಕರ್ನಾಟಕ ತುಳುಸಾಹಿತ್ಯ ಅಕಾಡೆಮಿ ನಿಮ್ಮ ಮಡಿಲಿಗೆ ಹಾಕುತ್ತಿದೆ.

ತುಳುವಿಗಾಗಿ ಅನನ್ಯ ಸಾಧನೆಗೈದು ನಿನ್ನೆಗೆ ಸಂದಿರುವ ಹಿರಿಯರಿಗೆ ಈ ನೆಲದ ಭಾಷೆ ಸಂಸ್ಕೃತಿಯ ಮೇಲೆ ಇದ್ದ ಪ್ರೀತಿ ಅಭಿಮಾನ ಗೌರವ ಭಾವವನ್ನು ಈ ಪುಸ್ತಕಗಳು ತಿಳಿಸಿಕೊಡುತ್ತವೆ. ನಾಳೆಯ ತುಳುವಿನ ಬೆಳವಣಿಗೆಗಾಗಿ ಇಂದು ನಾವು ಏನೇನು ಕಾರ್ಯ ಚಟುವಟಿಕೆಗಳನ್ನು ಯೋಚಿಸಿ ಯೋಜಿಸಿ ಮುಂದೆ ಸಾಗಬಹುದು ಎನ್ನುವುದಕ್ಕೆ ಈ ಮಹನೀಯರ ಬದುಕು ಮತ್ತು ಸಾಧನೆಗಳು ನಮಗೆ ಪ್ರೇರಣೆ ಮತ್ತು ಚೈತನ್ಯ ನೀಡುತ್ತವೆ.